ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 15

ರೂ. 5/-

ಏಪ್ರಿಲ್ 12, 2009



ಕಾಂಗ್ರೆಸ್ - ಬಿಜೆಪಿಗಳಿಂದ ಸ್ವತಂತ್ರ ವಿದೇಶಾಂಗ ನೀತಿಗೆ ಕುತ್ತು





ಕಾರ್ಮಿಕ ವರ್ಗಕ್ಕೆ ಯುಪಿಎ ಸರ್ಕಾರ ಬಗೆದ ದ್ರೋಹ



ಮೀನುಗಾರರಿಗೆ ಬಿಜೆಪಿ ಟೋಪಿ


ಕೋಮು ಕಾಡ್ಗಿಚ್ಚಿಗೆ ಮೈಸೂರು ಪ್ರಕ್ಷುಬ್ಧ

ಕಾಂಗ್ರೆಸ್ ಅಥವಾ ಬಿಜೆಪಿ ನೇತೃತ್ವದ ಸರ್ಕಾರ: ಸ್ವತಂತ್ರ ವಿದೇಶಾಂಗ ನೀತಿಗೆ ಕುತ್ತು

ಭಾರತದ ವಿದೇಶಾಂಗ ನೀತಿ ಯಾವುದೇ ಒಂದು ರಾಜಕೀಯ ಪಕ್ಷದ ಕೊಡುಗೆಯಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸಿದ ಸ್ವಾತಂತ್ರ್ಯ ಸಂಗ್ರಾಮದಿಂದ ಬಂದಿರುವ ಬಳುವಳಿಯೇ ಅಲಿಪ್ತ ಧೋರಣೆ. ಯಾವುದೇ ಮಿಲಿಟರಿ ಶಕ್ತಿಗಳೊಂದಿಗೆ ಸೇರಿಕೊಳ್ಳದಿರುವುದು, ವಸಾಹತುಶಾಹಿ ವಿರೋಧಿ ಹೋರಾಟಗಳಿಗೆ ಬೆಂಬಲ ನೀಡುವುದು ಭಾರತದ ವಿದೇಶಾಂಗ ಧೋರಣೆಯ ಮೂಲ ತಳಹದಿ. ಆದ್ದರಿಂದಲೇ ವಿಯಾಟ್ನಾಂ, ಪ್ಯಾಲೆಸ್ತೈನ್, ದಕ್ಷಿಣ ಆಫ್ರಿಕಾ ಮೊದಲಾದ ದೇಶಗಳ ಹೋರಾಟಗಳಿಗೆ ಭಾರತ ಬೆಂಬಲ ನೀಡುತ್ತಾ ಬಂದಿತ್ತು. ಸಾಮ್ರಾಜ್ಯಶಾಹಿ ಹಿಡಿತದಿಂದ ಹೊರತಾದ ಹಾಗೂ ಸಮಾನ ಆರ್ಥಿಕ ವ್ಯವಸ್ಥೆಗಾಗಿ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತದ ಧ್ವನಿ ಪ್ರಾಮುಖ್ಯತೆಯನ್ನು ಹೊಂದಿತ್ತು. ಇತ್ತೀಚಿನ ವರ್ಷಗಳಲ್ಲಿ ದೂರದೃಷ್ಟಿಯ ಸಾಮ್ರಾಜ್ಯಶಾಹಿ ವಿರೋಧಿ ಕಣ್ಣೋಟವನ್ನು ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರ್ಕಾರಗಳು ಕೈ ಬಿಡುತ್ತಾ ಬಂದಿವೆ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮ (ಸಿಎಂಪಿ)ಕ್ಕೆ ದ್ರೋಹ

ಬಿಜೆಪಿ ನೇತೃತ್ವದ ಸರ್ಕಾರ ಅನುಸರಿಸಿದ ಅಮೇರಿಕಾ ಪರನೀತಿಯನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮುಂದುವರಿಸುತ್ತಿದೆ. ಯುಪಿಎ ಸರ್ಕಾರವು ಅಂಗೀಕರಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸ್ವತಂತ್ರ ವಿದೇಶಾಂಗ ನೀತಿಯನ್ನು ಪಾಲಿಸಲಾಗುವುದೆಂದು ನಿರ್ದಿಷ್ಟವಾಗಿ ಹೇಳಲಾಗಿತ್ತು. 2004ರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಪ್ರಕಾರ "ಹಿಂದಿನ ಪರಂಪರೆಗಳನ್ನು ಗಮನದಲ್ಲಿಟ್ಟು ಸ್ವತಂತ್ರ ವಿದೇಶಾಂಗ ನೀತಿಯನ್ನು ಯುಪಿಎ ಸರ್ಕಾರವು



ಪಾಲಿಸುತ್ತದೆ. ಈ ನೀತಿಯನ್ನು ಪಾಲಿಸುವುದರ ಮೂಲಕ ಜಾಗತಿಕ ಸಂಬಂಧಗಳಲ್ಲಿ ಏಕ ಧ್ರುವೀಕರಣವನ್ನು ವಿರೋಧಿಸುತ್ತಾ ಬಹು ಧ್ರುವೀಕರಣದತ್ತ ಸಾಗಬೇಕು" ಎಂದು ಸ್ಪಷ್ಟವಾಗಿ ಹೇಳಿದೆ. ಅಮೇರಿಕಾದೊಂದಿಗಿನ ಸಂಬಂಧದ ಕುರಿತು ಸಿ.ಎಂ.ಪಿ.ಯು, ಅಮೇರಿಕಾದೊಂದಿಗೆ ನಿಕಟ ಸಂಬಂಧಗಳನ್ನು ಸಾಧಿಸುವಾಗಲೂ ಎಲ್ಲಾ ಪ್ರಾದೇಶಿಕ ಮತ್ತು ಜಾಗತಿಕ ಪ್ರಶ್ನೆಗಳಲ್ಲಿ ಸ್ವತಂತ್ರ ವಿದೇಶಾಂಗ ನೀತಿಯನ್ನು ಪಾಲಿಸಲಾಗುವುದು" ಎಂದು ಹೇಳಿದೆ.

ಸ್ವತಂತ್ರ ವಿದೇಶಾಂಗ ನೀತಿಯ ಕುರಿತು ಇಷ್ಟೊಂದು ಸ್ಪಷ್ಟವಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೇಳಿದ್ದರೂ ಅಮೇರಿಕಾದೊಂದಿಗೆ ವ್ಯವಹಾರಗಳನ್ನು ನಡೆಸುವ ಸಂದರ್ಭದಲ್ಲಿ ಮನಮೋಹನ್ ಸಿಂಗ್ ಸರ್ಕಾರ ಅಮೆರಿಕಾದ ಕಿರಿಯ ಪಾಲುದಾರನಂತೆ ವರ್ತಿಸಿದೆ. ಸ್ವತಂತ್ರ ನೀತಿಯಿಂದ ದೂರವಾಗಿದೆ. ಈ ಕುರಿತು ಹಲವಾರು ಉದಾಹರಣೆಗಳನ್ನು ನೀಡಬಹುದು.

ಯುಪಿಎ ಸರ್ಕಾರಕ್ಕೆ ಆಧಾರವಾಗಬೇಕಾಗಿದ್ದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ದೇಶ ಸ್ವತಂತ್ರ ವಿದೇಶಾಂಗ ನೀತಿ ಅನುಸರಿಸಬೇಕೆಂದಿತ್ತು. ಆದರೆ ಯುಪಿಎ ಸರ್ಕಾರ ಭಾರತವನ್ನು ಅಮೆರಿಕದ ಬಾಲಂಗೋಚಿಯಾಗಿಸಲು ಹೊರಟಿತು. ಅದು ವಿದೇಶಾಂಗ ನೀತಿಯಲ್ಲಿ ಆರೆಸ್ಸೆಸ್ ಕಣ್ಣೋಟವನ್ನು ಅಪ್ಪಿಕೊಳ್ಳಲೂ ಹೇಸಲಿಲ್ಲ

ಇರಾನ್ ಕುರಿತು ಭಾರತದ ನಿಲುವು

ಇರಾನ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದ ಭಾರತ, ದೇಶಕ್ಕೆ ಅತಿ ಅಗತ್ಯವಾಗಿದ್ದ ಇರಾನ್-ಪಾಕಿಸ್ತಾನ್ ಭಾರತ ಗ್ಯಾಸ್ ಪೈಪ್‌ಲೈನ್ ಜೋಡಿಸುವದರ ಮೂಲಕ ಇಂಧನದಲ್ಲಿ ಸ್ವಾವಲಂಬನೆ ಸಾಧಿಸಲು ಬಯಸಿತ್ತು. ಆದರೆ ಭಾರತ ಅಮೇರಿಕಾ ಅಣು ಒಪ್ಪಂದದ ನೆಪದಲ್ಲಿ ಅಮೇರಿಕಾದ ಒತ್ತಡದಿಂದಾಗಿ ಈ ಒಪ್ಪಂದವನ್ನು ಕೈ ಬಿಡುವತ್ತ ಯುಪಿಎ ಸರ್ಕಾರ ಹೊರಟಿದೆ. ಆದ್ದರಿಂದಲೇ 2005 ಸೆಪ್ಟೆಂಬರ್ ಮತ್ತು 2006 ಫೆಬ್ರವರಿಯಲ್ಲಿ ನಡೆದ ಅಂತರರಾಷ್ಟ್ರೀಯ ಪರಮಾಣು ಇಂಧನ ಒಕ್ಕೂಟ(ಐಎಇಎ) ದ ಸಭೆಯಲ್ಲಿ ಎರಡು ಬಾರಿ ಕೂಡಾ ಅಮೇರಿಕಾದ ಪರ, ಇರಾನ್‌ನ ವಿರುದ್ಧ ಭಾರತ ಮತ ಹಾಕಿದೆ. ಈ ನೀತಿ ಭಾರತ-ಅಮೇರಿಕಾ ಅಣು ಒಪ್ಪಂದದಲ್ಲಿ ಅಮೇರಿಕಾ ಅಂಗೀಕರಿಸಿದ ಹೈಡ್ ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿತ್ತು.

ಅಂತೆಯೇ ಅಫ್ಘಾನಿಸ್ತಾನದ ವಿಷಯದಲ್ಲೂ ಭಾರತದ ನಿಲುವು ಖಂಡನಾರ್ಹ. ಅಮೇರಿಕಾ ಮತ್ತು ನ್ಯಾಟೋ ದೇಶಗಳು ಅಫಘಾನಿಸ್ತಾನವನ್ನು ಆಕ್ರಮಣ ಮಾಡಿಕೊಂಡಿರುವಾಗ ಅಲ್ಲಿನ ಕೈಗೊಂಬೆ ಸರ್ಕಾರಕ್ಕೆ ಭಾರತ ಬೆಂಬಲ ನೀಡುವುದು ಸರಿಯಲ್ಲ. ಅಫಘಾನಿಸ್ತಾನದ ಹಿಂದಿನ ನಜೀಬುಲ್ಲಾ ಸರ್ಕಾರವನ್ನು ಕಿತ್ತೊಗೆಯಲು ಅಮೇರಿಕಾ ತಾಲಿಬಾನ್‌ಗಳನ್ನು ಬಳಸಿತ್ತು ಎಂಬುದನ್ನು ಮರೆಯಲಾಗದು.

ಆರ್‌ಸ್ಸೆಸ್ ಕಾರ್ಯತಂತ್ರಕ್ಕೆ ಬಲಿ

ಹಿಟ್ಲರ್, ಮುಸಲೋನಿ ಮೊದಲಾದ ಸರ್ವಾಧಿಕಾರಿಗಳನ್ನು ಆರಾಧಿಸುವ ಆರ್‌ಎಸ್‌ಎಸ್ ಕಾರ್ಯತಂತ್ರಕ್ಕೆ ಯುಪಿಎ ಸರ್ಕಾರದ ವಿದೇಶಾಂಗ ನೀತಿ ಬಲಿಯಾಗುತ್ತಿದೆ. ಆರ್‌ಎಸ್‌ಎಸ್‌ನ ಕಾರ್ಯತಂತ್ರದ ಪ್ರಕಾರ 'ಸಮಾಜವಾದಿ ದೇಶ ಮತ್ತು ಮುಸ್ಲಿಂ ಜಗತ್ತನ್ನು ಎದುರಿಸಲು ಹಿಂದು, ಯಹೂದಿಗಳು ಹಾಗೂ ಕ್ರಿಶ್ಚಿಯನ್ನರು ಒಂದಾಗಬೇಕು' ಎಂದು ಬಯಸುತ್ತದೆ. ಆದ್ದರಿಂದಲೇ ಅಮೇರಿಕಾ-ಇಸ್ರೇಲ್ ಮತ್ತು ನ್ಯಾಟೋ ದೇಶಗಳೊಂದಿಗೆ ಭಾರತ ಮೈತ್ರಿ ಹೊಂದಬೇಕೆಂಬುದು ಆರ್‌ಎಸ್‌ಎಸ್ ಮತ್ತು ಹಿಂದಿನ ಜನಸಂಘ ಹಾಗೂ ಇಂದಿನ ಬಿಜೆಪಿಯ ಬಯಕೆ.



ಮಿಲಿಟರಿ ಕ್ಷೇತ್ರದಲ್ಲಿ ನಡೆದ ಹಲವಾರು ಒಪ್ಪಂದಗಳು ಇದಕ್ಕೆ ಸಾಕ್ಷಿಯಾಗಿದೆ. 2005ರ ಜೂನ್ 28ರಂದು ವಾಷಿಂಗ್‌ಟನ್‌ನಲ್ಲಿ 10 ವರ್ಷಗಳ ರಕ್ಷಣಾ ಒಪ್ಪಂದವೊಂದಕ್ಕೆ ಮನಮೋಹನ್ ಸಿಂಗ್ ಸರ್ಕಾರ ಸಹಿ ಮಾಡಿದ್ದು ಇದು 2001ರಲ್ಲಿ ಎನ್‌ಡಿಎ ಸರ್ಕಾರ ಮಾಡಿದ್ದ ಒಪ್ಪಂದದ ಮುಂದುವರಿದ ಭಾಗವಾಗಿದೆ. ಜಗತ್ತಿನಲ್ಲಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಕಾನೂನುಗಳನ್ನು ನೆಲೆಗೊಳಿಸಲು ಭಾರತ-ಅಮೇರಿಕಾ ರಕ್ಷಣಾ ಸಂಬಂಧಗಳು ಸಹಕಾರಿಯಾಗಲಿವೆ' ಎಂದು ಒಪ್ಪಂದವು ಹೇಳುತ್ತದೆ. ಪ್ರಜಾಪ್ರಭುತ್ವವನ್ನು ಕಾಪಾಡುವ ಹೆಸರಿನಲ್ಲಿ, ಸಮೂಹ ನಾಶದ ಅಣ್ವಸ್ತ್ರ ಹೊಂದಿದೆ ಎಂಬ ನೆಪದಲ್ಲಿ ಇರಾಕ್‌ನ್ನು ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡ ಅಮೇರಿಕಾ ಕಿರಿಯ ಪಾಲುದಾರರಾಗಿ ಭಾರತ ಕೆಲಸ ಮಾಡಬೇಕೇ? ಎಂಬುದು ಪ್ರಜ್ಞಾವಂತ ಜನತೆಯ ಮುಂದಿರುವ ಪ್ರಶ್ನೆ.

ಇತ್ತೀಚಿಗೆ ನಡೆದ ಇನ್ನೊಂದು ರಕ್ಷಣಾ ಒಪ್ಪಂದದ ಪ್ರಕಾರ 10,000 ಕೋಟಿ ರೂ.ಗಳ ರಕ್ಷಣಾ ಸಾಮಗ್ರಿಗಳನ್ನು ಇಸ್ರೇಲ್ ದೇಶದಿಂದ ಖರೀದಿಸಲು ಭಾರತ ಒಪ್ಪಿಕೊಂಡಿದೆ. ಈ ಖರೀದಿಯಲ್ಲಿ 600 ಕೋಟಿ ರೂ.ಗಳ ಲಂಚ ಒಳಗೊಂಡಿದೆ ಎಂದು ಬಹಿರಂಗವಾಗಿದೆ. ಭಾರತವು ಇಸ್ರೇಲ್‌ನಿಂದ ಖರೀದಿಸುತ್ತಿರುವ ರಕ್ಷಣಾ ಸಾಮಗ್ರಿಗಳ ಒಟ್ಟು ಮೊತ್ತವು ಆದೇಶವು ಅಲ್ಲಿನ ಮಿಲಿಟರಿಗಾಗಿ ಖರೀದಿಸುವ ಒಟ್ಟು ಮೊತ್ತಕ್ಕಿಂತ ಜಾಸ್ತಿಯಾಗಿದೆ ಎಂದರೆ ಆಶ್ಚರ್ಯವಾಗದೆ ಇರುತ್ತದೆಯೇ? ಇದಕ್ಕೂ ಮಿಗಿಲಾಗಿ ಪ್ಯಾಲೇಸ್ತೈನ್‌ನ ಬಹುಭಾಗವನ್ನು ಇಸ್ರೇಲ್ ಆಕ್ರಮಿಸಿಕೊಂಡಿರುವುದು ಮಾತ್ರವಲ್ಲದೆ, ಆಗಾಗ ಧಾಳಿಗಳನ್ನು ನಡೆಸುತ್ತಾ ಮುದ್ದು ಮಕ್ಕಳು ಸೇರಿದಂತೆ ಸಾವಿರಾರು ಅಮಾಯಕ ಜೀವಗಳನ್ನು ಬಲಿ ತೆಗೆದುಕೊಂಡಿದೆ. ವಿಶ್ವ ಸಂಸ್ಥೆಯ ಖಂಡನಾ ನಿರ್ಣಯದ ನಂತರವೂ ಇಸ್ರೇಲ್ ತನ್ನ ಆಕ್ರಮಣವನ್ನು ಮುಂದುವರಿಸುತ್ತಿದೆ. ಇಸ್ರೇಲ್‌ನಿಂದ ಭಾರತ ಖರೀದಿಸುತ್ತಿರುವ ರಕ್ಷಣಾ ಸಾಮಗ್ರಿಗಳ ಹಣವು ಮುಗ್ಧ ಪ್ಯಾಲೇಸ್ತೈನ್ ರ ಹತ್ಯೆಗೆ ಕಾರಣವಾಗುತ್ತಿದೆ ಎಂದರೆ ತಪ್ಪಾಗಲಾರದು.

ಭಾರತಕ್ಕೆ ಮಾರಕವಾಗಲಿರುವ ಅಣು ಒಪ್ಪಂದ

ಭಾರತ-ಅಮೇರಿಕಾ ಅಣುಒಪ್ಪಂದವು ತನ್ನ ಮಹಾನ್ ಸಾಧನೆ ಎಂಬಂತೆ ಕಾಂಗ್ರೆಸ್ ಪಕ್ಷವು ಪ್ರಚಾರ ಕೈಗೊಂಡಿದೆ. ಈ ಒಪ್ಪಂದದ ಮೂಲಕ ವಿದ್ಯುತ್‌ನ ಹೊಳೆಯೇ ಹರಿಯುತ್ತದೆ ಎಂಬಂತೆ ಚಿತ್ರಿಸಲಾಗುತ್ತಿದೆ. ಆದರೆ ಪರಮಾಣುವಿನಿಂದ ತಯಾರಾಗುವ ವಿದ್ಯುತ್, ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಕೇವಲ ಶೇ. 5 ರಿಂದ 6 ರಷ್ಟು ಮಾತ್ರ ಎಂದು ಯೋಜನಾ ಆಯೋಗವೇ ಒಪ್ಪಿಕೊಂಡಿದೆ. ಅಲ್ಲದೆ ಪರಮಾಣುವಿನಿಂದ ತಯಾರಾಗುವ ವಿದ್ಯುತ್‌ನ ಬೆಲೆ 3 ರಿಂದ 4 ಪಟ್ಟು ಜಾಸ್ತಿಯಾಗುತ್ತದೆ. ಅಂದರೆ ಕಲ್ಲಿದ್ದಲಿನಿಂದ ತಯಾರಿಸುವ ವಿದ್ಯುತ್ತಿಗೆ ಯೂನಿಟ್‌ಗೆ 2.50 ರೂ. ಆದರೆ ಪರಮಾಣುವಿನಿಂದ ತಯಾರಾಗುವ ವಿದ್ಯುತ್ತಿಗೆ ರೂ.7 ರಿಂದ ರೂ.8 ಆಗುತ್ತದೆ.

5-6 ವರ್ಷಗಳ ಹಿಂದೆ ಅಮೇರಿಕಾದ ಕಂಪನಿ ಎನ್ರಾನ್‌ಗೆ ವಿದ್ಯುತ್ ಉತ್ಪಾದಿಸಲು ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರಗಳು ಅವಕಾಶ ನೀಡುವುದರ ಮೂಲಕ ಮಹಾರಾಷ್ಟ್ರದ ವಿದ್ಯುತ್ ಮಂಡಳಿ ಹಾಗೂ ಅಲ್ಲಿನ ಜನರು ಎಷ್ಟೊಂದು ನಷ್ಟ ಅನುಭವಿಸಿದ್ದರು ಎಂಬುದು ಜಗಜ್ಜಾಹೀರಾಗಿದೆ.

ಪರಮಾಣು ವಿದ್ಯುತ್ ತಯಾರಿಸಲು ಬೇಕಾದ ಯುರೇನಿಯಂ ಭಾರತದಲ್ಲೇ ಸಾಕಷ್ಟು ದೊರೆಯುತ್ತಿದ್ದರೂ ಅದನ್ನು ಅಭಿವೃದ್ಧಿಗೊಳಿಸಲು, ಉಪಯೋಗಿಸಲು ಪ್ರಾಧಾನ್ಯತೆ ನೀಡದ ಸರ್ಕಾರ, ಯುರೇನಿಯಂ ಆಧಾರಿತ ಸ್ಥಾವರಗಳನ್ನು ಭಾರತದಲ್ಲಿ ಸ್ಥಾಪಿಸಲು ಅಮೇರಿಕಾದ ಕಂಪನಿಗಳಿಗೆ - ವೆಸ್ಟಿಂಗ್‌ಹೌಸ್ ಮತ್ತು ಜನರಲ್ ಎಲೆಕ್ಟ್ರಿಕ್ ಅವಕಾಶ ನೀಡಿದೆ. ಈ ಕಂಪನಿಗಳು ಸ್ಥಾಪಿಸಲಿರುವ ಸ್ಥಾವರದಿಂದ ಉತ್ಪಾದಿಸುವ ವಿದ್ಯುತ್ ಜಗತ್ತಿನಲ್ಲೇ ಅತ್ಯಂತ ದುಬಾರಿಯಾದುದು ಎಂದು ಜಗಜ್ಜಾಹೀರಾಗಿದೆ. (ಒಂದು ಮೆಗಾವಾಟ್‌ಗೆ 28 ಕೋಟಿ.ರೂ) ಇದೇ ಸಂದರ್ಭದಲ್ಲಿ ರಷ್ಯಾ ಮತ್ತು ಫ್ರಾನ್ಸ್ ದೇಶಗಳೊಂದಿಗೆ ನಡೆಸುತ್ತಿರುವ ಮಾತುಕತೆಯನ್ನು ಸರ್ಕಾರ ಬಹಿರಂಗಗೊಳಿಸುತ್ತಿಲ್ಲ.

ಆದ್ದರಿಂದ ಚುನಾವಣೆ ಬಳಿಕ ಅಧಿಕಾರಕ್ಕೆ ಬಂದಿರುವ ಹೊಸ ಸರ್ಕಾರವು ಭಾರತದ ಹಿತಾಸಕ್ತಿಗೆ ಅನುಗುಣ ವಾಗುವಂತೆ ಒಪ್ಪಂದದಲ್ಲಿ ಬದಲಾವಣೆ ತರಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ಚುನಾವಣೆಯ ಸಂದರ್ಭದಲ್ಲಿ ಈ ಕುರಿತು ವ್ಯಾಪಕವಾದ ಪ್ರಚಾರ, ಚರ್ಚೆಗಳು ನಡೆಯಬೇಕು.

ಓದುಗರಲ್ಲಿ ಮನವಿ

ಇದು ಚುನಾವಣಾ ಸಂದರ್ಭ. ಮಹತ್ವದ ರಾಜಕೀಯ ವಿಚಾರಗಳು ಆದ್ಯತೆ ಪಡೆದುಕೊಳ್ಳುತ್ತಿವೆ. ಹೀಗಾಗಿ ಕೆಲವು ಖಾಯಂ ಅಂಕಣಗಳನ್ನು ಅನಿವಾರ್ಯವಾಗಿ ನಿಲ್ಲಿಸಬೇಕಾಗಿದೆ. ಚುನಾವಣೆಯ ನಂತರ ಎಂದಿನಂತೆ ಪ್ರಕಟಗೊಳ್ಳಲಿವೆ. ಸಹಕರಿಸಲು ಕೋರಿಕೆ.

- ಸಂ.

ಸಂಪಾದಕೀಯ

ಮತಗಳ ಮಾರಾಟ ತಡೆಗಟ್ಟಲಾದೀತೆ ?

ಚುನಾವಣೆಗಳು ಬಂದಾಗಲೆಲ್ಲ ಇದೊಂದು ಚರ್ಚೆಯ ವಿಷಯವಾಗಿರುತ್ತದೆ. ಸಾಮಾಜಿಕ ಕಾಳಜಿ ಇರುವ ಬುದ್ಧಿ ಜೀವಿಗಳು ತಮ್ಮ ಆತಂಕವನ್ನು ಪರಸ್ಪರ ತೋಡಿಕೊಳ್ಳುತ್ತಿರುತ್ತಾರೆ.'ಮತದಾರರು ಭ್ರಷ್ಟರಾಗಿದ್ದಾರೆ. ತಮ್ಮ ಓಟುಗಳನ್ನು ದುಡ್ಡಿಗೆ ಮಾರಿಕೊಳ್ಳುತ್ತಾರೆ. ರಾಜಕೀಯ ಪಕ್ಷಗಳಿಂದ ದುಡ್ಡು ತೆಗೆದುಕೊಂಡು ಲೂಟಿ ಮಾಡುವವರಿಗೆ ಓಟು ಕೊಟ್ಟು ಗೆಲ್ಲಿಸುತ್ತಾರೆ.ಹೀಗಾಗಿ ಈ ದೇಶಕ್ಕೆ ಭವಿಷ್ಯವೇ ಇಲ್ಲ" ಎಂದುಕೊಂಡು ಅವರು ನಿರಾಶೆಯನ್ನು ವ್ಯಕ್ತಪಡಿಸುತ್ತಿರುತ್ತಾರೆ.

ಹೀಗೆ ವ್ಯಕ್ತವಾಗುತ್ತಿರುವ ಆತಂಕ ಅರ್ಥಹೀನವೇನಲ್ಲ. ಚುನಾವಣೆ ಬಂತೆಂದರೆ ಸುಗ್ಗಿ ಬಂದಂತೆ ಹಿಗ್ಗಿಕೊಳ್ಳುವವರಿದ್ದಾರೆ. ವರ್ಷ ವರ್ಷ ಚುನಾವಣೆ ಬಂದಿದ್ದರೆ ಚೆನ್ನಾಗಿತ್ತು ಎನ್ನುವವರಿದ್ದಾರೆ. ಚುನಾವಣಾ ರ್‍ಯಾಲಿಗಳಿಗೆ ದುಡ್ಡುಕೊಟ್ಟು ಕರೆದೊಯ್ಯುತ್ತಾರೆ. ಚುನಾವಣಾ ಪ್ರಚಾರದ ಕೆಲಸಕ್ಕೆ ಊಟ ಉಪಹಾರದ ಜೊತೆಯಲ್ಲಿ ಕೂಲಿಯೂ ಸಿಗುತ್ತದೆ. ಒಂದು ಓಟಿಗೆ ಇಂತಿಷ್ಟು ಲೆಕ್ಕದಲ್ಲಿ ಬೇರೆ ಬೇರೆ ಪಕ್ಷಗಳು ಹಣ ಕೊಡುತ್ತವೆ. ಚುನಾವಣಾ ಆಯೋಗ ಎಂತಹ ಹದ್ದಿನ ಕಣ್ಣು ಇಟ್ಟುಕೊಂಡಿದ್ದರೂ ಇದೆಲ್ಲವೂ ನಡೆಯುತ್ತಾ ಇರುತ್ತದೆ. ಹಿಂದೆ ಬಹಿರಂಗವಾಗಿ ನಡೆಯುತ್ತಿದ್ದ ಈ ವ್ಯವಹಾರ ಈಗ ಭೂಗತವಾಗಿ ನಡೆಯುತ್ತದೆ.

ಓಟುಗಳಿಗೆ ನೋಟು ಕೊಡುವ ವಿಷಯದಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಮಾತ್ರ ಅಪವಾದ ಎನ್ನಬಹುದು. ಬೇರೆ ಎಲ್ಲಾ ಪಕ್ಷಗಳು ಚುನಾವಣೆಯಲ್ಲಿ ಹಂಚುತ್ತವೆ, ದುಡ್ಡು ಖರ್ಚು ಮಾಡುತ್ತವೆ. ಅವುಗಳಿಗೆ ರಾಜಕೀಯ ಎನ್ನುವುದು ಒಂದು ದಂಧೆ. ಚುನಾವಣೆಯಲ್ಲಿ ದುಡ್ಡು ಖರ್ಚು ಮಾಡುವುದೆಂದರೆ ದಂಧೆಯಲ್ಲಿ ಬಂಡವಾಳ ಹೂಡಿದಂತೆ. ಚುನಾವಣೆಯಲ್ಲಿ ಗೆದ್ದ ನಂತರ ಅವರ ಗಳಿಕೆ ಪ್ರಾರಂಭವಾಗುತ್ತದೆ. ಆದರೆ ಕಮ್ಯೂನಿಸ್ಟ್ ಪಕ್ಷಗಳು ಹಾಗಲ್ಲ. ಕಮ್ಯೂನಿಸ್ಟ್ ಪಕ್ಷ ಎಂದರೆ ಅದೊಂದು ಆಂದೋಲನ. ಅದೊಂದು ಹೋರಾಟ. ಶೋಷಣೆ, ಅನ್ಯಾಯದಿಂದ ಮುಕ್ತವಾದ ಸಮಾಜ ನಿರ್ಮಾಣಕ್ಕಾಗಿ ನಡೆಸುವ ದೇಶಪ್ರೇಮಿ ಹೋರಾಟ. ಕಮ್ಯೂನಿಸ್ಟ್ ಪಕ್ಷಗಳು ಚುನಾವಣೆಯನ್ನು ಒಂದು ಹೋರಾಟ ಎಂದು ಪರಿಗಣಿಸುತ್ತವೆ. ಶೋಷಿತರ ಹೋರಾಟವನ್ನು ಬಲಪಡಿಸವುದಕ್ಕಾಗಿ ಕಮ್ಯೂನಿಸ್ಟ್ ಪಕ್ಷಗಳು ಚುನಾವಣೆಗಳಲ್ಲಿ ಗೆದ್ದು ಶಾಸನ ಸಭೆಗಳಲ್ಲಿ ಶೋಷಿತರನ್ನು ಪ್ರತಿನಿಧಿಸಲು ಪ್ರಯತ್ನಿಸುತ್ತಿರುತ್ತವೆ.

ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳಿಗೆ ಕೇರಳ, ಪಶ್ಚಿಮಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಜನತೆ ನೀಡಿರುವ ನಿರಂತರ ಬೆಂಬಲದಿಂದಾಗಿ ರಾಜ್ಯ ಸರ್ಕಾರಗಳನ್ನು ನಡೆಸುವ ಅವಕಾಶ ದೊರೆತಿದೆ. ಇಲ್ಲಿ ಎಡಪಕ್ಷಗಳು ಸಂವಿಧಾನದ ಇತಿಮಿತಿಗಳಲ್ಲಿ ಜನತೆಗೆ ಒಳ್ಳೆಯ ಸರ್ಕಾರವನ್ನು ನೀಡಿವೆ ಮಾತ್ರವಲ್ಲ ತಮ್ಮ ಪರ್ಯಾಯ ಧೋರಣೆಗಳನ್ನು ದೇಶದ ಜನತೆಯ ಮುಂದೆ ಇಡಲುಸಾಧ್ಯವಾಗಿದೆ. ಆದ್ದರಿಂದಲೇ ಅವು ಮತ್ತೆ ಮತ್ತೆ ಪುನರಾಯ್ಕೆಯಾಗುತ್ತಿವೆ. ಈ ರಾಜ್ಯಗಳಲ್ಲಿ ಎಡಪಕ್ಷಗಳು ಚುನಾವಣೆಗಳಲ್ಲಿ ಗೆಲ್ಲಲು ಮತದಾರರಿಗೆ ಹಣ ನೀಡುವ ಅಗತ್ಯವಿಲ್ಲ. ಪಕ್ಷದ ಕನಿಷ್ಠ ಖರ್ಚು ವೆಚ್ಚಗಳಿಗೆ ಜನರೇ ಹಣ ಸಂಗ್ರಹ ಮಾಡುತ್ತಾರೆ. ಅವರೇ ಪ್ರಚಾರದ ಕೆಲಸ ನಿರ್ವಹಿಸುತ್ತಾರೆ.

ಆದರೆ ದೇಶದ ಬೇರೆರಾಜ್ಯಗಳಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಮತದಾರರು ಮತ ನೀಡಲು ಅಭ್ಯರ್ಥಿಯಿಂದ, ಪಕ್ಷಗಳಿಂದ ಹಣ ನಿರೀಕ್ಷೆ ಮಾಡುವುದು ಸಾಮಾನ್ಯವಾಗಿದೆ. ಇದೊಂದು ಪಿಡುಗು. ಇದರಿಂದಾಗಿ ಪ್ರಜಾಪ್ರಭುತ್ವ ಅರ್ಥ ಕಳೆದುಕೊಳ್ಳುತ್ತದೆ. ಆದರೆ ಈ ಕಾರಣಕ್ಕಾಗಿ ದೇಶದ ಜನತೆಯನ್ನು [illegible] ಸರಿಯಲ್ಲ. ಇಂದು ಅವರ ಬಡತನ ಲೂಟಿಕೋರ ರಾಜಕೀಯ ಪಕ್ಷಗಳ ಬಂಡವಾ[illegible]ನಕ್ಕೆ 20 ರೂ. ಸಹ ಖರ್ಚು ಮಾಡುವ ಸಾಮರ್ಥ್ಯ ಇಲ್ಲದ ಜನ ಓಟಿಗಾಗಿ ನೋಟು ಕೇಳದೆ ಇರಲು ಸಾಧ್ಯವೇ? ಒಂದೊಂದು ದಿನದ ಊಟಕ್ಕಾಗಿ ಪರದಾಡುವ ಜನ ದಿನಾಲೂ ಚುನಾವಣೆಗಳು ಏಕೆ ಬರುವುದಿಲ್ಲ ಎಂದು ಆಲೋಚಿಸಿದರೆ ಆಶ್ಚರ್ಯವೇನಿಲ್ಲ. ಬಡವರನ್ನು ದೂಷಿಸುವುದರಿಂದ ಪ್ರಯೋಜನವಿಲ್ಲ. ದುಡ್ಡಿಗೆ ಕೈವೊಡ್ಡುವ ಅವರ ದಯನೀಯ ಪರಿಸ್ಥಿತಿಯ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಜನ ದುಡ್ಡಿಗೆ ತಮ್ಮ ಓಟುಗಳನ್ನು ಮಾರಾಟ ಮಾಡಿಕೊಳ್ಳಬಾರದು ಎನ್ನುವುದಾದರೆ ದುಡ್ಡಿಗೆ ಓಟನ್ನು ಮಾರಿಕೊಳ್ಳುವ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಾಗಬೇಕು. ನಮ್ಮ ದೇಶದ ಸಾಮಾನ್ಯ ಜನತೆಯ ಆರ್ಥಿಕ ಪರಿಸ್ಥಿತಿ ಸುಧಾರಿಸದೆ ಅವರು ಈ ಪ್ರಜಾಪ್ರಭುತ್ವದಲ್ಲಿ ಅರ್ಥಪೂರ್ಣ ಪಾತ್ರ ನಿರ್ವಹಿಸಲಾರರು. ಆದ್ದರಿಂದ ದೇಶದ ಪ್ರಜಾಪ್ರಭುತ್ವವನ್ನು ಅರ್ಥಪೂರ್ಣಗೊಳಿಸಬೇಕೆನ್ನುವವರು ಜನತೆಯ ಜೀವನಮಟ್ಟವನ್ನು ಎತ್ತರಿಸುವತ್ತ ಆಸಕ್ತಿ ವಹಿಸಬೇಕು. ಎಲ್ಲರಿಗೂ ಉದ್ಯೋಗ, ಜೀವನಾವಶ್ಯಕ ಆದಾಯ ಲಭಿಸುವಂತಾದಾಗ ಮಾತ್ರ ಮತ ಮಾರಾಟದ ಪಿಡುಗು ನಿಲ್ಲುವುದು. ನಮ್ಮ ದೇಶದ ಅವಕಾಶ ವಂಚಿತ ಜನರನ್ನು ಸಂಘಟಿಸಿ, ಅವರ ಬದುಕಿನ ಹಕ್ಕುಗಳಿಗಾಗಿ ಅವರನ್ನು ಹೋರಾಟಕ್ಕೆ ಇಳಿಸಿ, ಆ ಹೋರಾಟಗಳಲ್ಲಿ ಗೆಲುವು ಸಾಧಿಸಿದಾಗ ಮಾತ್ರ ಪ್ರಜಾಪ್ರಭುತ್ವ ಹೆಚ್ಚು ಅರ್ಥಪೂರ್ಣ ಆಗಲು ಸಾಧ್ಯ. ○

ಅಕ್ರಮಗಳಿಗೆ ಬಿಜೆಪಿಯ ಉಸ್ತುವಾರಿ



■ ಎಸ್.ವೈ.ಗುರುಶಾಂತ್

ಎರಡು ಹಂತಗಳ ಸಂಸದೀಯ ಚುನಾವಣೆಗಳಿಗೆ ನಾಮಪತ್ರ ಸಲ್ಲಿಕೆ ಆರಂಭಗೊಂಡಿದೆ. ಲೆಕ್ಕಾಚಾರದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗುತ್ತಿದೆ. 'ಪಕ್ಷಾಂತರ' ಯಾವುದೇ ಅಡೆತಡೆ ಇಲ್ಲದೇ ನಡೆದಿದೆ, ಆದರೆ ವ್ಯವಹಾರ ಕುದುರಿದ ನಾಯಕರು ಹೊಸವೇಷ ಧರಿಸುತ್ತಿದ್ದಾರೆ. ಈ ಹಿಂದೆ ನಿರೀಕ್ಷಿಸಿದಂತೆಯೇ ಕಾಂಗ್ರೆಸ್‌ನ ಪ್ರಮುಖ ನಾಯಕರ ದಂಡು ಬಿಜೆಪಿಗೆ ವಲಸೆ ಹೋಗಿದೆ. ಅರ್ಥಾತ್ ಆಪರೇಷನ್ ಕಮಲದಲ್ಲಿ ಖೆಡ್ಡಾದಲ್ಲಿ ಬಿದ್ದಿದೆ. ಪ್ರಚಾರ-ಅಪಪ್ರಚಾರಗಳ ಭರಾಟೆ... ನಡೆದೇ ಇದೆ. ಎಂದಿನಂತಹ ದುರಂತದಂತೆ ನಾಯಕರ ವ್ಯಕ್ತಿಗತ ಟೀಕೆಗಳಿಗೆ ಬಹುಪಾಲು ಸಮಯ ಮೀಸಲಿಟ್ಟಿದ್ದಾರೆ. ಜನರ ಪ್ರಶ್ನೆಗಳು, ಚುನಾವಣಾ ವಿಷಯಗಳಾಗುತ್ತಿಲ್ಲ. ದೇಶದ ರಾಜಕೀಯ ಪ್ರಶ್ನೆಗಳೂ ಚರ್ಚಿತವಾಗುತ್ತಿಲ್ಲ.

ಈ ಪ್ರಕ್ರಿಯೆಯ ನಡುವೆಯೇ ಈ ಹಂತದಲ್ಲಿಯೇ ಚುನಾವಣಾ ಅಕ್ರಮ, ವಿವಿಧ ರಾಜಕೀಯ ಪಕ್ಷಗಳಿಂದ ನೀತಿ ಸಂಹಿತೆಯ ಉಲ್ಲಂಘನೆಯ ಘಟನೆಗಳು ಹೆಚ್ಚುತ್ತಿವೆ. ಇದರಲ್ಲಿ ಅಗ್ರಮಾನ್ಯ ಸ್ಥಾನ ಇರುವುದು ಬಿಜೆಪಿಗೆ. ನೋಂದಾಯಿತ ಪ್ರಕರಣಗಳಲ್ಲಿ ಬಿಜೆಪಿಯದ್ದು 24, ಕಾಂಗ್ರೆಸ್ 9, ಜೆಡಿ(ಎಸ್) 9 ಹಾಗೆಯೇ ಹಣ, ಅಕ್ರಮ ಮದ್ಯ ಸಂಗ್ರಹದಲ್ಲಿಯೂ ಬಿಜೆಪಿಯದ್ದೆ ಅಧಿಕ. ಸ್ವತಃ ಮುಖ್ಯಮಂತ್ರಿಗಳ ಜಿಲ್ಲೆ ಶಿವಮೊಗ್ಗದಲ್ಲಿ ಸಿಕ್ಕ ಅಕ್ರಮ ಮದ್ಯದ ದಾಸ್ತಾನು ಬಿಜೆಪಿ ನಾಯಕರದ್ದು. ಇದು ಚುನಾವಣಾ ಆಯೋಗ ಎಂಬುದು ಗಮನಿಸಿದ ಕೆಲವೇ ಕೆಲವು ಪ್ರಕರಣಗಳು ಅಷ್ಟೇ. ಆದರೆ ಇದಕ್ಕೂ ಮೀರಿ ಹಲವು ಪಟ್ಟು ಪ್ರಕರಣಗಳು ನಡೆದಿವೆ. ಚುನಾವಣಾ ಆಯೋಗದ ಆ ಭಾಗದ ಅಧಿಕಾರಿಗಳ ರಿಯಾಯಿತಿಗೆ ಒಳಪಟ್ಟುವುಗಳಾಗಿವೆ. ಹೀಗಾಗಿಯೇ ರಾಜ್ಯದಲ್ಲಿ ಚುನಾವಣಾ ಆಯೋಗ ವಿವಿಧ ಜಿಲ್ಲೆಗಳಲ್ಲಿ ಅಧಿಕಾರಿಗಳು ಆಡಳಿತ ಪಕ್ಷದ ಪಕ್ಷಪಾಳಿಯಾಗಿ ವರ್ತಿಸುತ್ತಿರುವ ಹಲವಾರು ನಿದರ್ಶನಗಳೊಂದಿಗೆ ತೀವ್ರ ಆಕ್ಷೇಪಗಳೂ ಕೇಳಿಬರುತ್ತಿವೆ. ರಾಜ್ಯದ ಆಡಳಿತ ಯಂತ್ರವನ್ನು ಅಧಿಕಾರರೂಢ ಬಿಜೆಪಿಯು ತನ್ನಗನಿಸಿದಂತೆ ಬಳಸುತ್ತಿರುವುದರಿಂದಾಗಿಯೇ ದೂರುಗಳ ನಂತರ ಅನಿವಾರ್ಯವಾಗಿ ಚುನಾವಣಾ ಆಯೋಗ ಕೆಲವು ಜಿಲ್ಲೆಗಳ ಎಸ್.ಪಿ., ಜಿಲ್ಲಾಧಿಕಾರಿ ಇತರೆ ಪ್ರಮುಖರನ್ನು ವರ್ಗಾವಣೆ ಮಾಡಿತು.

ಇಂತಹ ಅಧಿಕಾರ, ಆಡಳಿತ ಯಂತ್ರದ ದುರ್ಬಳಕೆ, ಅಕ್ರಮಗಳು ವರದಿ ಹೆಚ್ಚಾಗಿ ಬರುತ್ತಿರುವುದು ಬಳ್ಳಾರಿಯಿಂದಲೇ, ಬಹುತೇಕವಾಗಿ ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿಯು ಬಿರುಸಿನಿಂದ ನಡೆದಿದೆ. ಅಕ್ರಮ ಗಣಿಗಾರಿಕೆಯ ಕುಖ್ಯಾತಿಯ ಜನಾರ್ಧನರೆಡ್ಡಿ ಮತ್ತು ಅವರ ಬೆಂಬಲಿಗ ಗಣಿಗಳ್ಳರು ಒಂದಾಗಿ ಇಳಿದಿದ್ದಾರೆ. ಇಳಿಯದವರನ್ನು ವಿವಿಧ ಕೇಸುಗಳನ್ನು ಹಾಕುವ ಮೂಲಕ, ಬೆದರಿಕೆ ಒಡ್ಡಿಯೋ ಬಗ್ಗಿಸಿ ಸೆಳೆಯಲಾಗುತ್ತಿದೆ, ಇಲ್ಲವೇ ಬಾಯಿ ಮುಚ್ಚಿಸಿ ತೆಪ್ಪಗೆ ಕೂಡಿಸಲಾಗುತ್ತಿದೆ.

ಮೊನ್ನೆ ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿದಾಗ ನಡೆಯುತ್ತಿದ್ದ ಒಂದೆರಡು ಪ್ರಸಂಗಗಳ ಅಲ್ಲಿನ ಸ್ಥಿತಿಯನ್ನು ಎತ್ತಿ ತೋರಿಸಬಲ್ಲವು.

ಹೊಸ ಪೇಟೆಯಲ್ಲಿ ಅಕ್ರಮವಾಗಿ ಕೊಂಡೊಯ್ಯುತ್ತಿದ್ದ 8 ಲಕ್ಷ ರೂಪಾಯಿಗಳನ್ನು ವಾಹನಗಳ ಸಮೇತ ವಶಪಡಿಸಿಕೊಳ್ಳಲಾಗಿದೆ, ಬಂಧಿಸಲಾಗಿದೆ. ಮೊಕದ್ದಮೆ ಹೂಡಲಾಗಿದೆ. ಇದು ಡಿವೈಎಸ್‌ಪಿಯವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆ ಎಂದು ಭಾರೀ ಪ್ರಚಾರಿಸಲಾಯಿತು. ಯಾರಿಗೂ ಸಹಜವಾಗಿ ಇದು ಚುನಾವಣೆಯಲ್ಲಿ ಖರ್ಚು ಮಾಡಲು ಕೊಂಡೊಯ್ಯುತ್ತಿದ್ದ ಅಕ್ರಮ ಹಣ ಎಂದು ಭಾವನೆ ಬರುತ್ತದೆಯಲ್ಲವೇ? ಆದರೆ ಅಸಲೀ ಸಂಗತಿಯೆಂದರೆ ಬಹುತೇಕವಾಗಿ ವಶಪಡಿಸಿಕೊಂಡ ಹಣ ಅಲ್ಲಿನ ಟ್ರಾನ್ಸ್‌ಪೋರ್ಟ್ ಸಂಸ್ಥೆಗಳ ಅಥವಾ ಅದಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಕಮಿಷನ್ ಏಜೆಂಟರ ಹಣ ಅದಾಗಿದೆ. ಎಷ್ಟೆಲ್ಲಾ ದಾಖಲೆ ತೋರಿಸಿದರೂ ಕೋರ್ಟ್‌ನಲ್ಲಿ ಮಾತನಾಡಿ ಎಂಬುದು ಉತ್ತರ.

ಆದರೆ ಅದೇ ಹೊತ್ತಿನಲ್ಲಿ 'ಆಪರೇಷನ್ ಕಮಲ'ದ ಕಾರ್ಯಾಚರಣೆಯಲ್ಲಿ ಹೊಸಪೇಟೆಯ 15 ಕೌನ್ಸಿಲರ್‌ಗಳನ್ನು, ಸಂಡೂರಿನ ಪಟ್ಟಣ ಪಂಚಾಯತ್ ಸದಸ್ಯರನ್ನು ಬಿಜೆಪಿಗೆ ಸೆಳೆಯಲು ಪ್ರತಿಯೊಬ್ಬರಿಗೂ ಕನಿಷ್ಠ 15 ಲಕ್ಷ ರೂಪಾಯಿಗಳನ್ನು ನೀಡಲಾಗಿದೆ ಎಂಬುದು ದಟ್ಟವಾದ ಸುದ್ದಿ. ಆದರೆ ಇದುವರೆಗೂ ಯಾರನ್ನೂ ಅನುಮಾನಿಸುವ, ಕ್ರಮ ವಹಿಸುವ ಕಿಂಚಿತ್ತೂ ಯತ್ನಗಳೇ ಇಲ್ಲ. ಅಂದರೆ ಯೆಡ್ಡಿ-ರೆಡ್ಡಿ ರಾಜ್ಯದಲ್ಲಿ ಅವರ ಬಾರಾಖೂನ್ ಮಾಫ್ ಎಂದೇ? ಚುನಾವಣಾ ಆಯೋಗಕ್ಕೆ ಇದು ಕಾಣದೇ?

ಇನ್ನೂ ಮುಂದೆಯೂ ಮತ ಸೆಳೆಯುವಲ್ಲಿ ಅಕ್ರಮ ಹಣ, ಹೆಂಡ ಹರಿಸಲು ಸರ್ವ ಸಿದ್ಧತೆಯಲ್ಲಿ ನಡೆದಿದೆ. ಇತ್ತೀಚಿಗೆ ನಡೆದ ಉಪ ಚುನಾವಣೆಯಲ್ಲಿ ಆಯೋಗ ಅಧಿಕಾರಿಗಳ ಪಾತ್ರ ನೋಡಿಯಾಗಿದೆ. ಇಂತಹ ನೀತಿಗೆಟ್ಟ ಬಿಜೆಪಿಯಿಂದ ಮುಕ್ತ ಸ್ವಚ್ಛ ಚುನಾವಣೆ ಸಾಧ್ಯವೇ?



ಪಶ್ಚಿಮ ಬಂಗಾಳದ ಬೇರು ಮಟ್ಟದ ರಾಜಕೀಯ. ದುಂದುವೆಚ್ಚ, ಹಣದ ಆಮಿಷ ಅಗತ್ಯವೇ ಇಲ್ಲ ಇಲ್ಲಿ.

‘ಭೂ ಹೋರಾಟ ತೀವ್ರಗೊಳ್ಳಲಿ’

ರಾಜ್ಯಮಟ್ಟದ ಭೂ ಸಮಾವೇಶದಲ್ಲಿ ನಿರ್ಣಯ

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ನೇತೃತ್ವದಲ್ಲಿ ಏಪ್ರಿಲ್ 2,2009ರಂದು ಬೆಂಗಳೂರು ನಗರದ ಸೆನೆಟ್ ಹಾಲ್‌ನಲ್ಲಿ ನಡೆದ ಭೂ ಸಮಾವೇಶ ಮುಂದಿನ ದಿನಗಳಲ್ಲಿ ಭೂ ಹೋರಾಟವನ್ನು ಕೈಗೆತ್ತಿಕೊಂಡು ತೀವ್ರಗೊಳಿಸಲು ಹಾಗೂ ಈ ನಿಟ್ಟಿನಲ್ಲಿ ಸ್ಥಳೀಯವಾಗಿ ತಾಲ್ಲೂಕು ಮಟ್ಟಗಳಲ್ಲಿ ಭೂ ಸಮಾವೇಶಗಳನ್ನು ನಡೆಸಲು ನಿರ್ಣಯಿಸಿತು.

ಕೃಷಿ ಭೂಮಿಯನ್ನು ಯಾರೇ ಆದರೂ ಯಾವುದೇ ಉದ್ದೇಶಕ್ಕಾದರೂ ಖರೀದಿ ಮಾಡಲು ಅವಕಾಶ ನೀಡುವ ತಿದ್ದುಪಡಿಯನ್ನು ರಾಜ್ಯ ಬಿಜೆಪಿ ಸರ್ಕಾರವು ತಂದಿದ್ದು ಅದು ಅತ್ಯಂತ ರೈತ ವಿರೋಧಿ ಮತ್ತು ಜನವಿರೋಧಿ ಎಂದೂ ಸಮಾವೇಶದಲ್ಲಿ ಪಾಲ್ಗೊಂಡ ಮುಖಂಡರು ವಿವರಿಸಿದರು.

ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶವನ್ನು ಎಐಕೆಎಸ್‌ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ: ಕೆ.ವರದರಾಜನ್‌ರವರು ಉದ್ಘಾಟಿಸಿದರು. ಇದಕ್ಕೆ ಮೊದಲು ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿಯವರು ದೇವರಾಜ ಅರಸುರವರ ಕಾಲದಲ್ಲಿ ತರಲಾಗಿದ್ದ ಕೃಷಿ ಭೂಮಿಯನ್ನು ಕೃಷಿಕರು ಮಾತ್ರವೇ ಕೊಂಡುಕೊಳ್ಳಲು ಸಾಧ್ಯವೆಂಬ ಭೂ ಸುಧಾರಣಾ ಕಾಯ್ದೆಯ ಉತ್ತಮ ಅಂಶಕ್ಕೆ ಹಾಗೂ ಉಳುವವನಿಗೆ ಭೂಮಿ ಎಂಬ ಭೂ ಸುಧಾರಣೆಯ ಆಶಯಕ್ಕೆ ದ್ರೋಹ ಬಗೆದು ಇತ್ತೀಚೆಗೆ ಫೆಬ್ರವರಿ 2009ರಲ್ಲಿ ಬಿಜೆಪಿ ಸರ್ಕಾರ ತಿದ್ದುಪಡಿ ಮಾಡಿದೆ ಎಂದು ಖಂಡಿಸಿದರು.

ಸಮಾವೇಶ ಉದ್ಘಾಟಿಸಿದ ವರದರಾಜನ್‌ರವರು ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಭಾರತದ ಮುಂದೆ ಎದ್ದು ಬಂದ ದೊಡ್ಡ ಪ್ರಶ್ನೆ ಎಂದರೆ ಭೂಮಿ ಪ್ರಶ್ನೆ. ತೆಲಂಗಾಣ, ವೆಣ್ಮಣಿ ಮುಂತಾದ ಐತಿಹಾಸಿಕ ಹೋರಾಟಗಳು ಈ ಪ್ರಶ್ನೆಯನ್ನು ಮುಂಚೂಣಿಗೆ ತಂದವು. ಜಮೀನ್ದಾರಿ ಪದ್ಧತಿ ನಾಶ, ಈ ಹೋರಾಟಗಳ ಗುರಿಯಾಗಿತ್ತು. ಈ ಹೋರಾಟಗಳು ವಿವಿಧ ರಾಜ್ಯ ಸರ್ಕಾರಗಳ ಮೇಲೂ ಒತ್ತಡ ತಂದವು. ಭೂ ಸುಧಾರಣಾ ಕಾಯ್ದೆಗಳು ಬಂದವು, ಅವು ಪೇಪರ್‌ನಲ್ಲಿ ಉಳಿದವು. ಭೂಮಿ ಕೊಟ್ಟರೂ ಭೂಮಿ ಪಟ್ಟಾ ಕೊಡಲಿಲ್ಲ. ಪಟ್ಟಾ ಕೊಟ್ಟರೂ ಎಷ್ಟೋ ಕಡೆ ಭೂಮಿಯನ್ನೇ ಕೊಡಲಿಲ್ಲ ಎಂದರು. ಆದರೆ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ರಾಜ್ಯಗಳಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರ್ಕಾರಗಳು ಭೂ ಸುಧಾರಣೆಯನ್ನು ಜಾರಿಗೆ ತಂದವು.

ಸಿಂಗೂರ್‌ನಲ್ಲಿ ಸುಮಾರು 1000 ಎಕರೆ ಭೂಮಿಯನ್ನು ಕೈಗಾರಿಕೆಗಾಗಿ ಪಡೆದದ್ದಕ್ಕೆ ಅಲ್ಲಿನ ಸರ್ಕಾರದ ವಿರುದ್ಧ ಕೆಸರೆರಚುವ ಕೆಲಸ ನಡೆಯಿತು. ಅದೇ ಸಿಂಗೂರು, ನಂದಿಗ್ರಾಮಗಳಲ್ಲಿ ಅಲ್ಲಿನ ಸರ್ಕಾರ ಇತ್ತೀಚೆಗೆ 4000 ಎಕರೆ ಭೂಮಿಯನ್ನು ರೈತರಿಗೆ ವಿತರಿಸಿದೆ. ಹಿಂದಿನ ದೊಡ್ಡ ಭೂಮಿ ಹಂಚಿಕೆ ಅಲ್ಲದೆ, ಇತ್ತೀಚಿನ 4 ವರ್ಷಗಳಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ 90,000 ಎಕರೆ ಭೂಮಿ ವಿತರಿಸಿದೆ ಎಂದು ವರದರಾಜನ್ ತಿಳಿಸಿದರು.

ವಿಶೇಷ ಆರ್ಥಿಕ ವಲಯ ಸ್ಥಾಪನೆ ಹೆಸರಿನಲ್ಲಿ, ಕೈಗಾರಿಕೆಗಳ ಸ್ಥಾಪನೆ ಹೆಸರಿನಲ್ಲಿ ರೈತರ ಹೆಸರಿನಲ್ಲಿ



ಭೂಮಿ ಕಸಿಯಲು ಭೂ ಸುಧಾರಣಾ ಕಾಯ್ದೆಗಳು ಅಡ್ಡಿಯಾಗಿತ್ತು. ಇದನ್ನು ತಿದ್ದಲು ಕಾಂಗ್ರೆಸ್ ಬಿಜೆಪಿ ಹೊರಟಿವೆ. ಈ ವಿಚಾರದಲ್ಲಿ ಕಾಂಗ್ರೆಸ್ ಬಿಜೆಪಿ ಎರಡೂ ಒಂದೇ ಎಂದು ವರದರಾಜನ್ ಟೀಕಿಸಿದರು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಯವರು ಭೂಮಿ ಪ್ರಶ್ನೆಯ ಕುರಿತು, ಸಮಗ್ರವಾದ ವಿಚಾರ ಮಂಡಿಸಿದರು.

90ರ ದಶಕದಿಂದ ಆರಂಭವಾದ ಉದಾರೀಕರಣ ನೀತಿಗಳು ಭೂ ಸಂಬಂಧಗಳಲ್ಲಿ ಉಂಟು ಮಾಡಿರುವ ತಲ್ಲಣಗಳು, ಕಂದಾಯ ಭೂಮಿಯ ಅಕ್ರ[...] ಸಾಗುವಳಿ ಸಕ್ರಮಗೊಳಿಸಲು ನಮೂನೆ 50 ಮ[...] 53ರಲ್ಲಿ ಸಲ್ಲಿಸಲಾದ ಸಾವಿರಾರು ಅರ್ಜಿಗ[...] ಇತ್ಯರ್ಥವಾಗದೇ ಉಳಿದಿರುವುದು[...] ಲ್ಯಾಂಡ್‌ಗ್ರಾಂಟ್ ಕಮಿಟಿಗಳಲ್ಲಿ ವ್ಯಾಪ[...] ಭ್ರಷ್ಟಾಚಾರ, ಅರಣ್ಯ ಭೂಮಿ ಸಾಗುವ[...] ಮಾಡುವವರ ಒಕ್ಕಲೆಬ್ಬಿಸುವಿಕೆ, ಇತ್ಯಾದಿ ಪ್ರಶ್ನೆಗಳ[...] ಅವರು ಪ್ರಸ್ತಾಪಿಸಿದರು.

ಭೂ ಸುಧಾರಣೆ ಕಾಯ್ದೆಯಂತೆ ಕರ್ನಾಟಕದ[...] 2.5 ಲಕ್ಷ ಹೆಚ್ಚುವರಿ ಭೂಮಿ ಇರುವುದಾ[...] ಗುರುತಿಸಲಾಗಿದ್ದರೂ ದಕ್ಷಿಣ ಕನ್ನಡ ಜಿಲ್ಲೆ ಬಿ[...] ಬಹುತೇಕ ಕಡೆ ಭೂ ಸುಧಾರಣೆ ಸರಿಯಾ[...] ಜಾರಿಯಾಗದೇ ಉಳಿದಿದೆ. ಕರ್ನಾಟಕದಲ್ಲಿ ಕೇವ[...] 1 ಲಕ್ಷ ಎಕರೆ ಮಾತ್ರವೇ ವಿತರಣೆಯಾ[...] ಭೂ ಸುಧಾರಣೆ ಪ್ರಶ್ನೆ ಹಾಗೇ ಬಾ[...] ಉಳಿದಿದೆ ಯೆಂಬುದನ್ನು ಅವರ[...] ಸಮಾವೇಶದ ಮುಂದೆ ಪ್ರತಿಪಾದಿಸಿದರು.

ಸಮಾವೇಶದ ಅಧ್ಯಕ್ಷರಾದ ಮಾರು[...] ಮಾನ್ಪಡೆಯವರು ರಾಜ್ಯದಲ್ಲಿ ವಿವಿ[...] ಸ್ತರದ ಕುಟುಂಬಗಳ ನಡುವೆ ಭೂ ಹ[...] ಕುರಿತಂತೆ ಅಂಕಿ ಸಂಖ್ಯೆ ನೀಡಿದರು.

ವಿವಿಧ ಜಿಲ್ಲೆಗಳ ಪ್ರತಿನಿಧಿಗಳ[...] ಮಾತನಾಡಿ ತಮ್ಮ ತಮ್ಮ ಪ್ರದೇಶಗಳ[...] ಭಾಗಗಳಲ್ಲಿನ ಭೂಮಿ ಸಂಬಂಧ[...] ಸಮಸ್ಯೆಗಳ ಕುರಿತು ವಿವರಿಸಿದರು.

ಲೋಕಸಭಾ ಚುನಾವಣೆಗಳ ನಂತರದ ದಿನಗಳ[...] ಭೂಮಿ ಹೋರಾಟವನ್ನು ತೀವ್ರಗೊಳಿಸಲು ಸಮಾವೇಶ ತೀರ್ಮಾನಿಸಿತು. ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ವೆಂಕಟಾಚಲಯ್ಯ, ಕಾರ್ಯದರ್ಶಿ ಚಂದ್ರು ತೇಜಸ್ವಿ, ಪ್ರಾಂತ ಕೃಷಿ ಕೂಲಿಕಾರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ವೇದಿಕೆಯಲ್ಲಿದ್ದರು.

ಗಣನೀಯ ಸಂಖ್ಯೆಯ ಮಹಿಳೆಯರು ಸೇರಿದಂತೆ ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಮುಖಂಡ ಅಂದ ಮೇಲೆ ಮುಖವಾಡ ಬೇಡವೇ ?

ಶ್ರೀ

ಮಾರ್ಚ್ ಇಪ್ಪತ್ತೆಂಟರಂದು ರಾತ್ರಿ ಒಂದು ಗಂಟೆ ವಿದ್ಯುತ್ ಬಳಸದೇ ‘ಅರ್ತ್ ಅವರ್’ ಆಚರಿಸಲಾಯಿತು. ಇಧರ ಯಶಸ್ಸಿನಿಂದ ಸ್ಫೂರ್ತಿಗೊಂಡು ದೆಹಲಿಯಲ್ಲಿ ಪ್ರತಿ ತಿಂಗಳಲ್ಲೂ ಒಂದು ದಿನ ‘ಅರ್ತ್ ಅವರ್’ ಆಚರಿಸುತ್ತಾರಂತೆ. ಇದನ್ನು ಕಂಡು ನಮ್ಮರಾಜ್ಯದ ವಿದ್ಯುತ್ ಇಲಾಖೆ ಅಧಿಕಾರಿಗಳು ಭಾಳ ಬೇಜಾರ್ ಮಾಡಿಕೊಂಡರಂತೆ, ಅಲ್ಲ ನಾವು ನಮ್ಮ ರಾಜ್ಯದಲ್ಲಿ ಪ್ರತಿ ದಿನವೂ ,ರಾತ್ರಿಯೂ ಲೆಕ್ಕವಿಲ್ಲದಂಗೆ ‘ಅರ್ತ್ ಅವರ್’ ಆಚರಿಸುತ್ತಿದ್ದೇವೆ , ಇದೇನು ಒಂದು ದಿನ ಒಂದು ಗಂಟೆಗೆ ಇಷ್ಟೊಂದು ಪ್ರಚಾರಾನ? ಅಂದುಕೊಂಡು ‘ಸಾರ್ ಇನ್ಮೇಲೆ ಪವರ್ ಕಟ್ಟು, ಲೋಡ್ ಶೆಡ್ಡಿಂಗು, ವಿದ್ಯುತ್ ಅಭಾವ, ವಿದ್ಯುತ್ ಖೋತಾ ಅಂತೆಲ್ಲ ಹೇಳೋದು ಬೇಡ ಸಾರ್ ‘ಅರ್ತ್ ಅವರ್’ ಆಚರಿಸುತ್ತೇವೆ ಅಂತ ಹೇಳಿಬಿಡಿ ಎಂದು ಇಂಧನ ಸಚಿವರಿಗೆ ಹೇಳಿದ್ದಾರಂತೆ. ಆದರೆ ಇಂಧನ ಸಚಿವರಿಗೆ ಇದನ್ನೆಲ್ಲ ಕೇಳೋ ಮೂಡು ಇರಲಿಲ್ಲವಂತೆ. ಶಾನೆ ಬೇಜಾರ್ ಮಾಡ್ಕೊಂಡು ಕೂತಿದ್ದರಂತೆ. ಯಾಕಪಾ ಅಂದ್ರೆ, ಈಚೆಗೆ ಬೆಂಗಳೂರಿನ ಯಾವುದೋ ಒಂದು ಸಂಸ್ಥೆ ಎಲ್ಲ ಪಕ್ಷಗಳ ಮುಖಂಡರ ಮುಖವಾಡಗಳನ್ನು ತಯಾರಿಸಿದೆಯಂತೆ. ಯಡಿಯೂರಪ್ಪನವರ ಬಚ್ಚಾ ರಾಘವೇಂದ್ರನ ಮುಖವಾಡ ವನ್ನೂ ತಯಾರಿಸಿದೆಯಂತೆ. ಆದರೆ, ರಾಜ್ಯ ಬೀ.ಜೇ.ಪಿ ಯಲ್ಲಿ ಸನ್ಮಾನ್ಯ ಯಡಿಯೂರಪ್ಪನವರ ಸರಿ ಸಮಾನ ನಾಯಕ ಎಂದುಕೊಂಡಿದ್ದ ಸನ್ಮಾನ್ಯ ಇಂಧನ ಸಚಿವರು ಇದರಲ್ಲಿ ನನ್ನ ಮುಖವಾಡವೇ ಇಲ್ಲವೆಂದಮೇಲೆ ನಾನು ಮುಖಂಡನೇ ಅಲ್ಲ ಎಂದ ಹಾಗಾಯಿತು ಅಂತ ಬಾಳ ನೊಂದ್ಕೊಂಡಿದಾರಂತೆ. ದೇವರಾಣೆ ಮಾಡಿ ಹೇಳಿದ್ದೇ ನಡಿಯೋದಿಲ್ಲ ಅಂದ ಮೇಲೆ ಈ ಅಂತೆ ಕಂತೆಗಳೆಲ್ಲ ನಿಜವೋ ಇಲ್ಲವೋ ಹೇಗೆ ಹೇಳುವುದು?

▲▲▲

ಆಪರೇಷನ್ ಕಾ.. ಮಲ ಅಂತ ಹೇಳ್ಕೊಂಡು ಸಿಕ್ಕ ಸಿಕ್ಕ ಬೀಡಾಡಿ ದನಗಳನ್ನೆಲ್ಲ ದೊಡ್ಡಿಗೆ ತುಂಬುವಂತೆ ಅನ್ಯ ಪಕ್ಷದ ‘ನಾಯಿ ಕರು’ಗಳನ್ನ ಬಿಜೆಪಿಗೆ ತುಂಬಿಸಿಕೊಳ್ಳುತ್ತಿದ್ದಾರೆ. ಅದೇನಾರ ಹಾಳಾಗಿ ಹೋಗಲಿ ಅಂದರೆ ಕಮ್ಯುನಿಷ್ಟ್ ಪಕ್ಷ ಆರಂಭಿಸಿದ ಆಂದೋಲನವನ್ನೇ ಕದ್ದು ತಾವು ಪ್ರಚಾರ ಮಾಡ್ಕೊತಿದಾರಲ್ಲ! ಸ್ವಿಸ್ ಬ್ಯಾಂಕಿನಲ್ಲಿರುವ ಅಕ್ರಮ ಹಣವನ್ನು ದೇಶಕ್ಕೆ ತರಬೇಕು ಅನ್ನುವ ಕಮ್ಯುನಿಷ್ಟ್ ಪಕ್ಷದ ಪ್ರಣಾಳಿಕೆಯನ್ನು ಸನ್ಮಾನ್ಯ ಅದ್ವಾನಿಯವರು ನಾನೇ ಆ ಕೆಲಸ ಮಾಡ್ತೀನಿ ಅಂತ ಎಲ್ಲರಿಗೂ ಎಸ್.ಎಂ. ಎಸ್. ಕಳಿಸುತ್ತಿದ್ದಾರೆ. ಸನ್ಮಾನ್ಯ ಅದ್ವಾನಿಯವರೇ, ನೀವು ಮತ್ತು ನಿಮ್ಮ ಪಕ್ಷ ಏನೇನು ಮಾಡ್ತೀವಿ ಅಂತ ಹೇಳ್ತೀರೋ ಅದನ್ನು ಅಧಿಕಾರದಲ್ಲಿದ್ದಾಗ ಮಾಡಿದ ಒಂದೇ ಒಂದು ಉದಾಹರಣೆಯೂ ನೆನಪಿಗೆ ಬರುತ್ತಿಲ್ಲ. ಅದೇ[...] ಇರಲಿ ಸ್ವಿಸ್ ಬ್ಯಾಂಕಿನಿಂದ ಹಣ ತರುವ ಮುಂಚೆ, ಅದೇ..., ಅವಾಗ.., ರಾಮ ಮಂದಿರ ಕಟ್ತೀವಿ ಇಟ್ಟಿಗೆ, ಮಣ್ಣು ಮರಳು ಕಲ್ಲು ಅಂತ ದೇಶದಲ್ಲೆಲ್ಲ ದುಡ್ಡು ಎತ್ತಿದ್ರಲ್ಲಾ..., ಅದೆಷ್ಟು ಬಂತು? ಅದೆಲ್ಲ ಎಲ್ಹೋಯ್ತು ಅಂತ ಸ್ವಲ್ಪ ಹೇಳ್ತೀರಾ? ಹಾಗೇ ಕರ್ನಾಟಕದಲ್ಲಿ ಆಪರೇಷನ್ ಕಾ ಮಲಕ್ಕೆ ಗಣೆ ದುಡ್ಡು ಎಷ್ಟು ಖರ್ಚಾಗಿದೆ ಅಂತ ಸ್ವಲ್ಪ ಹೇಳ್ತೀರಾ?

▲▲▲

ಆರ್ಥಿಕ ಹಿಂಜರಿತದಿಂದ ಲಕ್ಷಾಂತರ ಉದ್ಯೋಗಗಳ ‘ಕಡಿತ’ ಆಗ್ತಿದೆ. ಈ ಉದ್ಯೋಗ ಕಡಿತವನ್ನು ತಡಿಯೋದು ಹೇಗೆ ಅಂತ ಮೂರನೇ ರಂಗ ಹೇಳ್ತಿರ ಬೇಕಾದರೆ, ಇನ್ನೆರಡು ಪಕ್ಷಗಳು ಕೈ ಕಡಿತಿವಿ, ಕಾಲು ಕಡಿತಿವಿ, ನಾಲಿಗೆ ಕಡಿತಿವಿ.., ಅಂತ ಕಡಿದಾಡುವುದನ್ನೇ ಉದ್ಯೋಗ ಮಾಡಿಕೊಂಡಿವೆ. ಈ ಕಡು ಬೇಸಿಗೆಯಲ್ಲಿ ವಿದ್ಯುತ್ ಕಡಿತ, ಸೊಳ್ಳೆ ಕಡಿತಗಳ ಜೊತೆಗೆ ಇವರುಗಳ ಕಡಿತ ಬೇರೆ.

ಮೈಸೂರಿನಲ್ಲಿ ಕೋಮುಗಲಭೆ -ಹಿಂಸಾಚಾರ ಭುಗಿಲೆದ್ದಿದೆ. ಈ ಹಿಂಸಾಚಾರದ ಹಿಂದೆ ಇರುವವರು ಯಾರು? ಯಾಕೆ ಇದು ಇಷ್ಟೆಲ್ಲಾ ಬೆಳೆಯಿತು. ಅದು ಲೋಕಸಭಾ ಚುನಾವಣೆಗಳು ಸಮಿಪೀಸುತ್ತಿರುವಾಗ!!

ಕೋಮು ಕಾಡ್ಗಿಚ್ಚಿಗೆ ಮೈಸೂರು ಪ್ರಕ್ಷುಬ್ಧ

ನಿತ್ಯಾನಂದಸ್ವಾಮಿ

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕರ್ನಾಟಕ ಎಂಬುದು ಬೇಸಿಗೆಯಲ್ಲಿ ಒಣಗಿ ನಿಂತ ಅರಣ್ಯದಂತಾಗಿದೆ. ಒಂದು ಸಣ್ಣ ಕಿಡಿ ಇಡೀ ಅರಣ್ಯವನ್ನೇ ಭಸ್ಮಮಾಡುವ ಸ್ಥಿತಿ ಇದೆ. ಇಬ್ಬರೂ ವಿಭಿನ್ನ ಧರ್ಮೀಯರ ನಡುವೆ ಒಂದು ಸಣ್ಣ ವಿವಾದ, ಮಾತಿನ ಚಕಮಕಿಯಿಂದ ಉಂಟಾಗುವ ಒಂದು ಸಣ್ಣ ಜಗಳ ಕೋಮುಗಲಭೆಯಾಗಿ ಮಾರ್ಪಡದೆ ಇರುವುದಿಲ್ಲ ಎನ್ನುವಂತಾಗಿದೆ. ಕ್ಷುಲ್ಲಕ ಕಾರಣಕ್ಕಾಗಿ ಆರಂಭವಾಗುವ ವಿವಾದದ ಸಂದರ್ಭದಲ್ಲಿ ಇಬ್ಬರಿಗೂ ಅಥವಾ ಎರಡೂ ಕಡೆಯವರಿಗೂ ಬುದ್ಧಿ ಹೇಳಿ ಪರಿಸ್ಥಿತಿಯನ್ನು ತಿಳಿಗೊಳಿಸುವ ಬದಲಾಗಿ ಸುಳ್ಳು ವದಂತಿಗಳನ್ನು ಹಬ್ಬಿಸಿ, ಜನಜಂಗುಳಿಯನ್ನು ಸೇರಿಸಿ ಗಲಭೆಗಳನ್ನು ಉಂಟುಮಾಡುವುದು ಸಾಮಾನ್ಯವಾಗುತ್ತಿದೆ. ಸಂಘ ಪರಿವಾರದ ಸಂಘಟನೆಗಳಂತೂ ಯಾವುದೋ ನಿಗೂಢವಾದ ಆದೇಶವನ್ನು ಜಾರಿ ಮಾಡಲು ಹೊರಟವರಂತೆ ಸಜ್ಜಾಗಿ ನಿಂತಿವೆ. ಗಲಭೆ ನಡೆದಲೆಲ್ಲಾ ಅವರು ಇರುತ್ತಾರೆ. ಗಲಭೆ ನಡೆದ ತಕ್ಷಣ ಇವರು ಸಕ್ರಿಯರಾಗಿರುವುದನ್ನು ಗಮನಿಸಿದರೆ ಗಲಭೆಗಳೆಲ್ಲಾ ಪೂರ್ವನಿಯೋಜಿತ ಕೃತ್ಯಗಳೇ ಆಗಿವೆ ಎಂದು ಸ್ಪಷ್ಟವಾಗುತ್ತದೆ.

ಮೈಸೂರಿನಲ್ಲಿ ಮೊನ್ನೆ ನಡೆದ ಗಲಭೆಗೂ ಸಹ ನಂಬಲಾಗದಂತಹ ಕ್ಷುಲ್ಲಕ ಸಂಗತಿಯೊಂದು ಕಾರಣವೆನ್ನಲಾಗಿದೆ. ಈ ಬೆಳವಣಿಗೆ ಕರಾವಳಿ ಜಿಲ್ಲೆಗಳಿಗೆ ಮಾತ್ರ ಸೀಮಿತವಲ್ಲ. ಮೈಸೂರಿನಲ್ಲಿಯೂ ಹಾಗೆ ಆಗಬಹುದು ಎನ್ನುವುದಾದರೆ, ಎಲ್ಲಿ ಬೇಕಾದಲ್ಲಿ ಹಾಗೇ ಆಗಬಹುದು ಎಂಬ ಆತಂಕ ನಮ್ಮ ಮುಂದಿದೆ. ಬುಧವಾರ ರಾತ್ರಿ ಮೈಸೂರು ನಗರದ ಉದಯಗಿರಿ ಪೋಲೀಸ್ ಠಾಣಾ ವ್ಯಾಪ್ತಿಯ ಕ್ಯಾತಮಾರನಹಳ್ಳಿಯಲ್ಲಿ, ಯುವಕರಿಬ್ಬರೂ ಒಂದು ಎಸ್‌ಟಿಡಿ ಬೂತ್‌ಗೆ ಬಂದು ಅಲ್ಲಿದ್ದ ಕಾಯಿನ್ ಬಾಕ್ಸ್‌ಗೆ 50 ಪೈಸೆ ನಾಣ್ಯಹಾಕಿ, ಲೈನ್ ಸಿಗುತ್ತಿಲ್ಲ. ಒಂದು ರೂ. ವಾಪಸ್ ಕೊಡು ಎಂದು ಕೇಳಿದ್ದಾರೆ. ಬೂತ್ ನಡೆಸುತ್ತಿದ್ದ ಮಹಿಳೆ ಅದಕ್ಕೆ ಒಪ್ಪದಿದ್ದಾಗ ಆ ಯುವಕರು ಮಹಿಳೆಯ ಮೇಲೆ ಕೈ ಮಾಡಲು ಮುಂದಾಗಿದ್ದಾರೆ. ಪೋಲೀಸರಿಗೆ ಸಲ್ಲಿಸಲಾದ ದೂರಿನ ಮೇರೆಗೆ ಆ ಯುವಕರನ್ನು ಪೋಲೀಸರು ಕರೆದೊಯ್ದು, ಅವರು ಪಾನಮತ್ತರಾಗಿರುವುದನ್ನು ಗಮನಿಸಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆ ನಂತರ ಬಿಡುಗಡೆ ಮಾಡಿದ್ದಾರೆ ಎಂದು ಪೋಲೀಸ್ ಮೂಲಗಳು ಹೇಳಿವೆ. ಟೆಲಿಫೋನ್ ಬೂತ್ ಹತ್ತಿರ ಇದ್ದವರು ಆ ಯುಕವರನ್ನು ಥಳಿಸಿದ್ದರು ಎಂದು ಹೇಳಲಾಗುತ್ತಿದೆ. ಈ ಘಟನೆಯ ಸುದ್ದಿ ಹರಡುತ್ತಿದ್ದಂತೆ ಗಲಭೆ ಭುಗಿಲೆದ್ದು ಕ್ಯಾತಮಾರನಹಳ್ಳಿ ಮತ್ತು ಗೌಸಿಯಾನಗರ ಬಡಾವಣೆಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದೆ. ಗಲಭೆಗೆ ಇದೊಂದೇ ಕಾರಣ ಇರಲಾರದು ಎನ್ನಲಾಗುತ್ತದೆ. ಒಂದು ಮೂಲದ ಪ್ರಕಾರ ಯುಗಾದಿ ಹಬ್ಬದ ದಿನ ಜೂಜಾಟಕ್ಕೆ ಸಂಬಂಧಿಸಿದಂತೆ ಎರಡು ಕೋಮುಗಳ ಯುವಕರ ನಡುವೆ ನಡೆದ ಒಂದು ಸಣ್ಣ ಜಗಳವೂ ಈ ಘರ್ಷಣೆಗೆ ಕಾರಣ ಎನ್ನಲಾಗಿದೆ.

ಅಪಾರ ಹಾನಿ

ಗಲಭೆಯಲ್ಲಿ ತೊಡಗಿದ್ದ ಎರಡೂ ಗುಂಪಿನ ಯುಕವರು ಕೈಯಲ್ಲಿ ಮಾರಾಕಾಸ್ತ್ರಗಳನ್ನು ಹಿಡಿದು, ಸಿಕ್ಕಸಿಕ್ಕವರನ್ನು ಥಳಿಸುತ್ತಾ ಅಪಾರ ಆಸ್ತಿಪಾಸ್ತಿ ನಾಶಮಾಡಿದ್ದಾರೆ. ಉದ್ರಿಕ್ತರು ಸಿಕ್ಕ ಸಿಕ್ಕ ಮನೆಗಳಿಗೆ ನುಗ್ಗಿ ಲೂಟಿ ಮಾಡಿದ್ದಾರೆ. ಮನೆಯ ಹೊರಗಡೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಹತ್ತಕ್ಕೂಹೆಚ್ಚು ಮನೆಗಳಿಗೆ ಅಗ್ನಿ ಸ್ಪರ್ಶ ಮಾಡಲಾಗಿದೆ. ನಾಲ್ಕು ದೇವಾಲಯಗಳು ಮತ್ತು ಒಂದು ಮಸೀದಿ ಹಾನಿಗೊಳಗಾಗಿವೆ. ಘಟನೆಯಲ್ಲಿ 3 ಕಾರು 8 ಬೈಕುಗಳು, 3 ಆಟೋರಿಕ್ಷಾ 3 ಎತ್ತಿನ ಗಾಡಿಗಳಲ್ಲಿ ಒಂದು ಸೌದೆ ಡಿಪೋ ಬೆಂಕಿಗೆ ಆಹುತಿಯಾಗಿವೆ. 1 ಹಸು ಮತ್ತು 3 ಮೇಕೆಗಳು ಕಣ್ಮರೆಯಾಗಿವೆ.

ಉದ್ರಿಕ್ತ ಗುಂಪೊಂದು ಕ್ಯಾತಮಾರನಹಳ್ಳಿ ವೃತ್ತದ ಬಳಿ ಇರುವ 60ನೇ ವಾರ್ಡ್‌ನ ನಗರಪಾಲಿಕೆ ಸದಸ್ಯ, ಮಾಜಿ ಮೇಯರ್ ಎಚ್.ಎನ್.ಶ್ರೀಕಂಠಯ್ಯ ಅವರ ಮನೆಗೆ ನುಗ್ಗಿ, ಪೀಠೋಪಕರಣಗಳನ್ನು ಧ್ವಂಸ ಮಾಡಿದಲ್ಲದೆ ಶ್ರೀಕಂಠಯ್ಯ ಅವರ ಮೇಲೂ ಹಲ್ಲೆ ನಡೆಸಿತು. ಶ್ರೀಕಂಠಯ್ಯ ಅವರ ನಿವಾಸದ ಎದುರಿನ ಅಂಗನವಾಡಿ ಕೇಂದ್ರದ ಬಾಗಿಲು ಮುರಿದು ಹಾನಿ ಮಾಡಲಾಗಿದೆ. ಬೆಳಗಿನ ಜಾವದವರೆಗೂ ನಡೆದ ಈ ಗಲಭೆಯಲ್ಲಿ ಕೆಲವು ಪೋಲೀಸರೂ ಸೇರಿದಂತೆ ಅನೇಕ ಜನ ಅಮಾಯಕರು ಗಾಯಗೊಂಡಿದ್ದಾರೆ. ಪೋಲೀಸರು ಅಶ್ರುವಾಯು ಸಿಡಿಸಿ, ಲಾಠಿಪ್ರಹಾರ ಮಾಡಿದರೂ ಪರಿಸ್ಥಿತಿಯ ನಿಯಂತ್ರಣಕ್ಕೆ ಬಂದಿರಲಿಲ್ಲ. ಘಟನೆಗೆ ಸಂಬಂಧಿಸಿದ 20 ಕ್ಕೂ ಹೆಚ್ಚು ಮಂದಿಯನ್ನು ಪೋಲಿಸರು ವಶಕ್ಕೆ ತೆಗೆದುಕೊಂಡು ನಿಷೇದಾಜ್ಞೆ ಜಾರಿಗೊಳಿಸಿದ ನಂತರ ಶುಕ್ರವಾರವಷ್ಟೇ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ.

ಆಪರೇಷನ್ ಕಮಲದ ಪ್ರಚೋದನೆ

ಮೈಸೂರು ಗಲಭೆಯಲ್ಲಿ ಎರಡೂ ಕೋಮಿನ ಜನ ಪ್ರಚೋದನೆಗೆ ಒಳಗಾಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ಮುಂಖಾನು ಮುಂಖವಾಗಿ ಹರಡಿದ ವದಂತಿಗಳು ಎರಡೂ ಕೋಮಿನವರನ್ನು ಬೀದಿಗೆ ಎಳೆದು ತಂದಿದೆ. ಕ್ಯಾತ ಮಾರನಹಳ್ಳಿ ಮತ್ತು ಗೌಸಿಯಾನಗರ ಬಡಾವಣೆಯ ಸಾವಿರಾರು ಮಂದಿ ರಸ್ತೆಗಳಲ್ಲಿ ಮಾರಕಾಸ್ತ್ರ ಸಮೇತ ನಿಂತು ತಮ್ಮ ತಮ್ಮ ಬಡಾವಣೆಗಳ ಕಾವಲು ಕಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ಹೇಳಲಾಗುತ್ತಿದ್ದು ಎರಡೂ ಕೋಮಿನ ಜನ ತೀವ್ರ ಆತಂಕಕ್ಕೆ ಒಳಗಾಗಿದ್ದನ್ನು ಯಾರಾದರೂ ಅರ್ಥಮಾಡಿ ಕೊಳ್ಳಬಹುದು.

ಲೋಕಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟುಕೊಂಡು ಬಿಜೆಪಿ ಕೈಗೊಂಡಿರುವ 'ಆಪರೇಷನ್ ಕಮಲ' ಎಂಬ ಅತ್ಯಂತ ಕೀಳುಮಟ್ಟದ ರಾಜಕೀಯ ಪರಿಸ್ಥಿತಿಯನ್ನು ಸಹಜವಾಗಿ ಪ್ರಕ್ಷುಬ್ಧಗೊಳಿಸುತ್ತಿದೆ. ಕ್ಯಾತಮಾರನಹಳ್ಳಿಯಲ್ಲಿ ದಾಳಿಗೆ ಸಿಕ್ಕ ನಗರಪಾಲಿಕೆಯ ಸದಸ್ಯ ಹಾಗೂ ಮಾಜಿ ಮೇಯರ್ ಶ್ರೀಕಂಠಯ್ಯ ಇತ್ತೀಚೆಗೆ ಆಪರೇಷನ್ ಕಮಲದ ಪರಿಣಾಮದಿಂದ ಜೆಡಿ(ಎಸ್) ತೊರೆದು ಬಿಜೆಪಿ ಸೇರಿದ್ದರು. ಜೆಡಿ(ಎಸ್) ಮೂಲಕ ಅವರನ್ನು ಗೆಲ್ಲಿಸಲು ಶ್ರಮಿಸಿದ ಅವರ ವಾರ್ಡಿನ ಜನರಲ್ಲಿ ಅವರ ವಿರುದ್ಧ ಸಹಜವಾಗಿ ಆಕ್ರೋಶ ಬೆಳೆದಿರಬಹುದು. ಇದು ಮೈಸೂರಿನಲ್ಲಿ ಮಾತ್ರವಲ್ಲ, ರಾಜ್ಯದ ಬೇರೆ ಬೇರೆ ಕಡೆಗಳಲ್ಲಿಯೂ ಕಂಡು ಬರುತ್ತಿರುವ ಬೆಳವಣಿಗೆಯಾಗಿದೆ. ಚುನಾವಣೆಯ ಕಾವು ಏರುತ್ತಾ ಹೋದಂತೆಲ್ಲಾ 'ಆಪರೇಷನ್ ಕಮಲ'ದಿಂದ ವಿವಿಧ ರಾಜಕೀಯ ಗುಂಪುಗಳು ಸಹನೆ ಕಳೆದುಕೊಂಡು ಅನಾಹುತಕಾರಿ ದಾರಿ ಹಿಡಿಯುವ ಅಪಾಯವಿದೆ. ಚುನಾವಣಾ ಆಯೋಗ ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುವುದು ಅಗತ್ಯವಿದೆ.

ರಾಜಕೀಯ ದ್ವೇಷ ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಮೈಸೂರಿನ ಈ ಬೆಳವಣಿಗೆ ಸಾಕ್ಷಿಯಾಗಿದೆ. ಜೆಡಿ(ಎಸ್) ಬಿಟ್ಟು ಬಿಜೆಪಿ ಸೇರಿದ ಶ್ರೀಕಂಠಯ್ಯ ತನ್ನ ರಾಜಕೀಯ ಪ್ರಬಾವ ಬೆಳಸಿಕೊಂಡು ಕೆಲವು ಯುವಕರ ವಿರುದ್ಧ ಪೋಲೀಸರಿಗೆ ದೂರು ನೀಡಿ ಅವರ ಬಂಧನ ಆಗುವಂತೆ ನೋಡಿಕೊಂಡಿದ್ದ ಎನ್ನಲಾಗಿದೆ. ಗಲಭೆ ನಡೆದ ಬುಧವಾರ ರಾತ್ರಿ ಕೂಡ ಆ ಯುವಕರ ವಿರುದ್ಧ ಶ್ರೀಕಂಠಯ್ಯ ಮೌಖಿಕ ದೂರು ನೀಡಿದ್ದರಿಂದ ಪೋಲೀಸರು ಅವರನ್ನು ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದ್ದರು ಎನ್ನಲಾಗಿದೆ. ಠಾಣೆಯಿಂದ ಹಿಂತಿರುಗಿದ ಆ ಯುವಕರು ಶ್ರೀಕಂಠಯ್ಯನವರ ಮನೆಯ ಮೇಲೆ ದಾಳಿ ಮಾಡಿರಬಹುದು ಎಂದು ಹೇಳಲಾಗುತ್ತಿದೆ. ಶ್ರೀಕಂಠಯ್ಯ ನಂತವರು ಹಣದ ಆಸೆ, ಅಧಿಕಾರದ ಆಸೆಗೆ ತಮ್ಮನ್ನು ಮತನೀಡಿ ಆಯ್ಕೆ ಮಾಡಿದ ಮತದಾರರಿಗೆ ದ್ರೋಹ ಮಾಡಿದರೆ ಜನ ಸುಮ್ಮನಿರುತ್ತಾರೆ ಎಂದು ಹೇಳಲಾಗದು. ○



ಸರ್ಕಾರಕ್ಕೆ ಕೆಟ್ಟ(?) ಹೆಸರು!

ಕೃಷ್ಣರಾಜಕ್ಷೇತ್ರದ ಬಿಜೆಪಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ವಿಶ್ವ ಹಿಂದೂ ಪರಿಷನತ್ ಮತ್ತು ಭಜರಂಗದಳದ ಕಾರ್ಯಕರ್ತರು ಗಲಭೆ ಪೀಡಿತ ಪ್ರದೇಶಕ್ಕೆ ಪ್ರವೇಶಿಸಿದ್ದು ಗಲಭೆ ಉಲ್ಬಣಗೊಳ್ಳಲು ಕಾರಣವಾಯಿತು ಎಂದು ಹೇಳಲಾಗುತ್ತದೆ ಗಲಭೆ ನಡೆಯುತ್ತಿದ್ದಾಗ ಹೊರಗಿನವರನ್ನು ವಿಶೇಷವಾಗಿ ಗಲಭೆಗೆ ಪ್ರಚೋದನೆ ನೀಡಿ ರಾಜಕೀಯ ಲಾಭ ಪಡೆಯಲು ಬಯಸುವ ಸಂಘ ಪರಿವಾರದವರನ್ನು ಗಲಭೆ ಪೀಡಿತ ಪ್ರದೇಶಕ್ಕೆ, ವಾತಾವರಣ ಇನ್ನೂ ಪ್ರಕ್ಷುಬ್ಧವಾಗಿರುವಾಗ, ಅಲ್ಲಿಗೆ ಹೋಗಲು ಅನುಮತಿ ನೀಡಿದ್ದು, ಎಷ್ಟು ಸಮಂಜಸ? ಮೈಸೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಂಸದ ಸಿ.ಹೆಚ್. ವಿಜಯಶಂಕರ್ ಸಹ ಅಲ್ಲಿಗೆ ಹೋಗಿದ್ದಾರೆ.

ಮಧ್ಯಾಹ್ನದ ವೇಳೆಗೆ ಸ್ಥಳಕ್ಕೆ ಧಾವಿಸಿದ ಜಿಲ್ಲಾ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆ ಅವರು ಹೇಳಿಕೆಯೊಂದನ್ನು ನೀಡಿ 'ಕ್ಯಾತಮಾರನಹಳ್ಳಿಯಲ್ಲಿ ನಡೆದಿರುವ ಕೋಮುಗಲಭೆ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಹಾಗೂ ಚುಣಾವಣೆ ವೇಳೆ ಗೊಂದಲ ಉಂಟು ಮಾಡಲು ನಡೆಸಿರುವ ಷಡ್ಯಂತ್ರ' ಎಂದು ಹೇಳಿದ್ದಾರೆ. ಬಿಜೆಪಿ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಯಾರು ಯಾಕೆ ಪ್ರಯತ್ನಿಸುತ್ತಾರೆ? ಅದಕ್ಕೆ ಎಂದಾದರೂ ಒಂದು ಒಳ್ಳೆಯ ಹೆಸರು ಇತ್ತಾ? ಇಂತಹ ಗಲಭೆಗಳನ್ನು ನಡೆಸುವುದೇ ಅದರ ಕಾರ್ಯಕ್ರಮವಾಗಿರುವಾಗ, ಕೆಟ್ಟ ಹೆಸರು ತರುವ ಪ್ರಮೇಯ ಎಲ್ಲಿದೆ? ಕರಾವಳಿ ಜಿಲ್ಲೆಗಳಲ್ಲಿ ಚರ್ಚುಗಳ ಮೇಲೆ, ಮಸೀದಿಗಳ ಮೇಲೆ ದಾಳಿ ಮಾಡಿಸಿ ಬಿಜೆಪಿಗೆ ಒಳ್ಳೆಯ ಹೆಸರು ಬಂದಿದೆಯಾ? ಚುನಾವಣೆಯಲ್ಲಿ ತನ್ನ ಕಾಲ ಕೆಳಗಿನ ನೆಲ ಕುಸಿಯುವುದನ್ನು ಗಮನಿಸಿ ಕಂಗೆಟ್ಟಿರುವ ಬಿಜೆಪಿ ಇಂತಹ ಇನ್ನಷ್ಟು ಹೆಚ್ಚು ಅನಾಹುತಗಳನ್ನು ಮಾಡುವ ಮೊದಲು ಕರ್ನಾಟಕದ ಜನತೆಗೆ ಎಚ್ಚೆತ್ತುಕೊಳ್ಳಬೇಕಾಗಿದೆ. ಜನರ ನೆಮ್ಮದಿಗೆ ಭಂಗತಂದು ಅಧಿಕಾರಕ್ಕೆ ಬರಲು ಪ್ರಯತ್ನಿಸುವ ಶಕ್ತಿಗಳಿಂದ ಜನಹಿತ ಸಾಧ್ಯವೇ ಇಲ್ಲ. ○

ಸಮಾಜೋತ್ಸವದ ಬಳಿಕ ದುಂಡಾವರ್ತಿ

ಕಾಪು ಮಸೀದಿ ಮೇಲೆ ದಾಳಿ

ಮಾರ್ಚ್ 15 ರಂದು ಮಂಗಳೂರಿನಲ್ಲಿ ಹಿಂದೂ ಸಮಾಜೋತ್ಸವ ಮುಗಿಸಿ ಕುಂದಾಪುರ, ಬೈಂದೂರು ಮತ್ತು ಭಟ್ಕಳದ ಕಡೆಗೆ ಬಸ್ಸುಗಳಲ್ಲಿ ಮರಳುತ್ತಿದ್ದ ಹಿಂದುತ್ವ ವಾದಿಗಳು, ತಮ್ಮ ಬಸ್ಸಿಗೆ ಕಲ್ಲೆಸೆಯಲಾಗಿದೆ ಎಂಬ ನೆಪದಲ್ಲಿ ಕಾಪು ಪರಿಸರದ ಪೋಲೀಸ್ ಕ್ರಾಸ್ ಬಳಿ ಇರುವ ಜಾಮಿಯಾ ಮಸೀದಿಯ ಮೇಲೆ ಕಲ್ಲುಗಳು ಮತ್ತು ಬಾಟಲ್‌ಗಳನ್ನೆಸೆದು ಅಪಾರ ಹಾನಿಯುಂಟು ಮಾಡಿದ್ದಾರೆ.



ಅಸಹ್ಯಕರ ಘೋಷಣೆ

ಅಂದು ಮಧ್ಯಾಹ್ನ ಸಮಾಜೋತ್ಸವಕ್ಕೆ ಮಂಗಳೂರು ಕಡೆಗೆ ಹೋಗುತ್ತಿರುವಾಗಲೇ ಅಟ್ಟಹಾಸ ಗೈಯ್ಯುತ್ತಿದ್ದ ಹಿಂದುತ್ವವಾದಿಗಳು ಕಾಪು ಬಳಿ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿದ್ದ ಮುಸ್ಲಿಂ ದಂಪತಿಗೆ ಕೋಲಿನಿಂದ ತಿವಿದಿದ್ದಾರೆ. ಬುರ್ಖಾಧಾರಿ ಮುಸ್ಲಿಂ ಮಹಿಳೆಯರನ್ನು ಕಂಡಾಗಲೆಲ್ಲ ಅಶ್ಲೀಲ ಘೋಷಣೆಗಳನ್ನು ಕೂಗಿ ಕೇಕೇ ಹಾಕಿದ್ದಾರೆ. ಹಿಂದೂ ಸಮಾಜೋತ್ಸವದ ಮುಗಿಸಿ ಮರಳಿ ಬರುವಾಗ ವಯಸ್ಸಾದ ವ್ಯಕ್ತಿಯೊಬ್ಬರೂ ಸುರತ್ಕಲ್ ಬಳಿ ತನ್ನನ್ನೂ ಬಸ್ಸಿಗೆ ಹತ್ತಿಸಿಕೊಳ್ಳಿ ಎಂದು ಕೇಳಿಕೊಂಡರಂತೆ. ಈ ಹಿಂದುತ್ವವಾದಿಗಳು ಅತ್ಯಂತ ಪ್ರಚೋದನಕಾರಿ ಘೋಷಣೆಗಳುಳ್ಳ ಪಟ್ಟಿಯೊಂದನ್ನು ಅವರಿಗೆ ತೋರಿಸಿ 'ನೀವು ಈ ಘೋಷಣೆಗಳನ್ನು ಕೂಗಿದರೆ ಮಾತ್ರ ನಿಮ್ಮನ್ನು ಬಸ್ಸಿಗೆ ಹತ್ತಿಸಿಕೊಳ್ಳುತ್ತೇವೆ' ಎಂದರಂತೆ. ಆ ಮಹನೀಯರು ಘೋಷಣೆಗಳ ಬಗ್ಗೆ ಅಸಹ್ಯಪಟ್ಟು ಬಸ್ಸು ಏರಲು ನಿರಾಕರಿಸಿದರಂತೆ!


ಮಂಗಳೂರಿನಿಂದ ಮೂಲ್ಕಿಯ ವರೆಗೂ ಸಾಮಾನ್ಯವೇಗದಲ್ಲಿ ಬಂದ ಹಿಂದುತ್ವವಾದಿಗಳನ್ನೊಳಗೊಂಡ ಬಸ್ಸುಗಳು ಮುಸ್ಲಿಮರು ಗಣನೀಯ ಸಂಖ್ಯೆಯಲ್ಲಿರುವ ಪಡುಬದ್ರಿ, ಎರ್ಮಾಳು, ಉಚ್ಚಿಲ, ಮೂಳೂರು ಮತ್ತು ಕಾಪು ಕಡೆಗೆ ಬರುತ್ತಿರುವಂತೆಯೇ ವೇಗವನ್ನು ತಗ್ಗಿಸಿವೆ. ಬಸ್ಸುಗಳಲ್ಲಿದ್ದವರು ಕೀಳು ಅಭಿರುಚಿಯ ಪ್ರಚೋದನಕಾರಿ ಘೋಷಣೆಗಳನ್ನು ಕೂಗಿದ್ದಾರೆ. 'ಶ್ರೀರಾಮನಿಗೆ ಪಟ್ಟ; ಅಲ್ಲಾನಿಗೆ ಚಟ್ಟ' ಎಂಬುದು ಇಂತಹ ಘೋಷಣೆಗಳಲ್ಲೊಂದು! ಈ ಮೊದಲೇ ಏರ್ಪಾಟು ಮಾಡಿಕೊಂಡಿರುವ ರೀತಿಯಲ್ಲಿ ಬಸ್ಸುಗಳನ್ನು ಮೋಟಾರ್ ಬೈಕುಗಳಲ್ಲಿ ಹಿಂಬಾಲಿಸಿಕೊಂಡು ಬಂದ ಕೆಲವು ಯುವಕರು ಬಸ್ಸುಗಳಿಗೆ ಕಲ್ಲು ತೂರಿ ಪರಾರಿಯಾದರೆಂದು ಹೇಳಲಾಗಿದೆ. ಈ ನಡುವೆ ದ.ಕ.ಜಿಲ್ಲೆಯ ವಿಟ್ಲದಲ್ಲಿ ಮದುವೆಯೊಂದನ್ನು ಮುಗಿಸಿ ಹಾವೇರಿ ಜಿಲ್ಲೆಯ ರಟ್ಟಿಹಳ್ಳಿಗೆ ಪ್ರಯಾಣಿಸುತ್ತಿದ್ದ ಮೆಟಡೋರ್ ವ್ಯಾನ್ ಒಂದನ್ನು ಕಾಪು ಸಮೀಪದ ಪೆಟ್ರೋಲ್ ಬಂಕ್‌ವೊಂದರ ಬಳಿ ಪ್ರಯಾಣಿಕರೊಬ್ಬರನ್ನು ಇಳಿಸುವ ಸಲುವಾಗಿ ನಿಲ್ಲಿಸಲಾಗಿತ್ತು. ಮೆಟಾಡೋರ್ ವಾಹನದೊಳಗೆ ಬುರ್ಖಾಧಾರಿ ಮಹಿಳೆಯರಿರುವುದನ್ನು ಕಂಡ ಹಿಂದುತ್ವವಾದಿಗಳ ರಣೋತ್ಸಾಹ ಉಕ್ಕಿ ಹರಿಯಿತು! ಅವರು ಬಾವುಟಕ್ಕೆ ಕಟ್ಟಿರುವ ದೊಣ್ಣೆಯಿಂದ ಮೆಟಡೋರ್‌ನ ಒಳಗಿರುವ ಹೆಂಗಸರನ್ನು ತಿವಿದಿದ್ದಾರೆ. ಕಲ್ಲುಗಳು ಮತ್ತು ಹೋಲೋಬ್ಲಾಕ್‌ಗಳ ತುಂಡುಗಳನ್ನು ಎಸೆದು ಮೆಟಡೋರ್‌ನ ಗಾಜುಗಳನ್ನು ಹುಡಿಗೈದಿದ್ದಾರೆ.

ಭಯಬೀತರಾದ ಮೆಟಡೋರ್ ಪ್ರಯಾಣಿಕರು ಮತ್ತು ಅದರ ಚಾಲಕ(ಈತನೊಬ್ಬ ಹಿಂದೂ) ಆತ್ಮರಕ್ಷಣೆ ಗಾಗಿ ವಾಹನವನ್ನು ಪೊಲಿಸು ಕ್ರಾಸ್ ಬಳಿ ಇರುವ ಕಾಪು ಜಾಮಿಯಾ ಮಸೀದಿಯ ಆವರಣದೊಳಗೆ ಕೊಂಡೊಯ್ಯುದ್ದನ್ನು ಕಂಡ ಬಸ್ಸು ಚಾಲಕರು ಬಸ್ಸುಗಳನ್ನು ಮಸೀದಿಯ ಮುಂದುಗಡೆ ನಿಲ್ಲಿಸಿ ರಸ್ತೆ ತಡೆ ನಡೆಸಿದ್ದಾರೆ. ಕೆಲವೇ ಸೆಕೆಂಡುಗಳಲ್ಲಿ ಇಪ್ಪತ್ತಕ್ಕೂ ಮಿಕ್ಕು ಬಸ್ಸುಗಳು ಮತ್ತು ನೂರಾರು ವಾಹನಗಳು ರಸ್ತೆಯಲ್ಲಿ ಮತ್ತು ಎದುರಿನ ಮೈದಾನದಲ್ಲಿ ನಿಲುಗಡೆಯಾಗಿ ವಾಹನ ಸಂಚಾರ ಸ್ಥಗಿತಗೊಂಡಿದೆ. ಅಷ್ಟರಲ್ಲಿ ವಿದ್ಯುತ್ ವೈಫಲ್ಯವುಂಟಾಗಿ ಕತ್ತಲಾಗಿದೆ. ಇದೆಲ್ಲಾ ನಡೆದುದು ರಾತ್ರಿ ಸುಮಾರು ಎಂಟು ಗಂಟೆಗೆ. ಬಸ್ಸುಗಳಿಂದ ಇಳಿದ ಸಾವಿರಾರು ಜನ ರಸ್ತೆಯಲ್ಲಿ ಜಮಾಯಿಸಿ ಜಾಮಿಯಾ ಮಸೀದಿಯ ಕಡೆಗೆ ಕಲ್ಲುಗಳನ್ನು ಎಸೆದು ಮಸೀದಿಯ ಕಿಟಕಿಯ ಗಾಜುಗಳನ್ನು ಪುಡಿಗುಟ್ಟಿ ವ್ಯಾಪಕ ಹಾನಿಗೈದಿದ್ದಾರೆ. ಮಸೀದಿಯ ಸಂಕೀರ್ಣದೊಳಗಿದ್ದ 'ಏರ್‌ಟೆಲ್' ಅಂಗಡಿಯ ಬೀಗ ಮುರಿದು ಶೆಟರನ್ನು ಬಾಗಿಸಿ ಲೂಟಿ ಮಾಡಲಾಗಿದೆ.

ಅಪಪ್ರಚಾರ

ಇಷ್ಟೆಲ್ಲಾ ನಡೆದ ಮೇಲೆ ಉಡುಪಿಯಿಂದ ಬಂ... ಎಸ್ಪಿ ಶ್ರೀ ಪವಾರ್ ಮತ್ತು ಅವರ ಸಿಬ್ಬಂದಿ ಲಾಠಿ ಛಾರ್ಜ್ ನಡೆಸಿ, ಗಾಳಿಯಲ್ಲಿ ಅಶ್ರುವಾಯು ಸಿಡಿಸಿ ಗಲಭೆಯನ್ನು ತಹಬಂದಿಗೆ ತಂದಿದ್ದಾರೆ. ಎರಡೂ ಕಡೆಯಿಂದ ನಡೆದ ಕಲ್ಲೆಸೆತದಲ್ಲಿ ಎಸ್ಪಿ ಶ್ರೀ ಪವಾರ್ ಅವರ ತಲೆಯ ಹಿಂಭಾಗಕ್ಕೆ ಕಲ್ಲೇಟು ತಗಲಿ ಅವರು ಆ ಬಳಿಕ ಆಸ್ಪತ್ರೆಗೆ ದಾಖಲಾಗಬೇಕಾಯಿತು. "ಎರಡೂ ಕಡೆಯಿಂದ ಕಲ್ಲುಗಳು ಬೀಳುತ್ತಿದ್ದವು. ಆ ಕತ್ತಲೆಯಲ್ಲಿ ಯಾರೂ ಎಸೆದ ಕಲ್ಲು ತನಗೆ ತಾಕೀತು ಎನ್ನುವುದನ್ನು ಹೇಳಲಾಗದು" ಎಂದು ಶ್ರೀ ಪವಾರ್ ಅವರು ಮಸೀದಿಯ ಮುಖಂಡರೊಂದಿಗೆ ಹೇಳಿರುತ್ತಾರೆ.

ಹೀಗಿದ್ದರೂ ಮರುದಿನ ಮುಂಜಾನೆ ಸಂಘ ಪರಿವಾರದ ಮುಖವಾಣಿ ಗಳಾಗಿರುವ ಒಂದೆರಡು ದಿನಪತ್ರಿಕೆಗಳು "ಹಿಂದೂ ಸಮಾಜೋತ್ಸವದಿಂದ ವಾಪಾಸಾಗುತ್ತಿದ್ದ ಬಸ್ಸುಗಳ ಮೇ... ಮಸೀದಿಯೊಳಗಿನಿಂದಲೇ ಕಲ್ಲು, ಬಾಟಲ್ ಎಸೆತ, ಮಸೀದಿಯೊಳಗೆ ಗೋಣಿ ಚೀಲಗಳಲ್ಲಿ ಕಲ್ಲು ಮತ್ತು ಬಾಟಲ್‌ಗಳನ್ನು ತುಂಬಿ ನೀಡಲಾಗಿದೆ." ಎಂದೆಲ್ಲ ಘಟನೆಯಯ್ನು ತಿರುಚಿ ತುತ್ತೂರಿ ಊದಿವೆ. ವಾಸ್ತವವಾಗಿ ರಸ್ತೆಗೆ ಮುಖ ಮಾಡಿರುವ ಮಸೀದಿಯ ಕಿಟಕಿಗಳಿಗೆ ಕಬ್ಬಿಣದ ಗ್ರಿಲ್‌ಗಳನ್ನು ಅಳವಡಿಸಲಾಗಿದ್ದು ಅವುಗಳಿಗೆ ಗಾಜಿನ ಶಟರ್‌ಗಳಿವೆ. ಕಿಟಕಿಯ ಗ್ರಿಲ್‌ಗಳ ರಂಧ್ರಗಳು ಎಷ್ಟು ಸಣ್ಣದಾಗಿವೆಯೆಂದರೆ ಯಾರೂ ಅವುಗಳ ಹೊರಗೆ ತೋಳನ್ನು ತೂರಿಸಿ ಗುರಿಯಿಟ್ಟು ಕಲ್ಲೆಸೆಯಲು ಸಾಧ್ಯವೇ ಇಲ್ಲ. ಪೋಲೀಸರು ಮಸೀದಿಯ ಆವರಣದೊಳಗೆ ಬಿದ್ದಿರುವ ಎಂಟು ಮುಷ್ಟಿ ಗಾತ್ರದ ಕಲ್ಲುಗಳನ್ನು ಇತರ ಎರಡು ಕಲ್ಲುಗಳು ಮತ್ತು ದೊಣ್ಣೆಗಳನ್ನು ಮಹಜರು ಮಾಡಿ ವಶಪಡಿಸಿಕೊಂಡಿದ್ದಾರೆಯೇ ಹೊರತು ಮಸೀದಿಯೊಳಗೆ ಗೋಣಿ ಚೀಲದಲ್ಲಿ ಕಲ್ಲು ಮತ್ತು ಬಾಟಲ್‌ಗಳನ್ನು ಕೂಡಿಡಲಾಗಿತ್ತು ಎಂದು ಎಲ್ಲೂ ಹೇಳಿಲ್ಲ.



ದಾಳಿಗೆ ಗುರಿಯಾದ ಕಾಪು ಮಸೀದಿ

ರಕ್ಷಣೆಗಾಗಿ

ಮಸೀದಿಯೊಳಗೆ ಮದರಸದ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ನಮಾಜ್‌ಗಾಗಿ ಬಂದ ಜನ ಸೇರಿಕೊಂಡಿದ್ದರು. ಹಾವೇರಿ ಜಿಲ್ಲೆಯ ರಟ್ಟಿಹಳ್ಳಿಗೆ ಹೋಗಲಿದ್ದ ಮೆಟಡೋರ್ ವಾಹನದ ಪ್ರಯಾಣಿಕರೂ ಆತ್ಮರಕ್ಷಣೆಗಾಗಿ ಮಸೀದಿಯೊಳಗಿದ್ದರು. ಹಾಗಾಗಿ ರಸ್ತೆಯಲ್ಲಿ ನಿಂತು ಕಲ್ಲೆಸೆಯುತ್ತಿದ್ದ ಜನ ಮಸೀದಿಯ ಆವರಣದೊಳಗೆ ನುಗ್ಗುವುದನ್ನು ತಡೆಯಲು ಮಸೀದಿಯ ಕಾಂಪೌಂಡ್‌ನ ಒಳಗಿದ್ದವರೂ ರಸ್ತೆಯ ಕಡೆ ಕಲ್ಲು ತೂರಲಾರಂಭಿಸಿದರು. ಆಗ ಅಲ್ಲಿದ್ದುದು ಇಬ್ಬರೋ ಮೂವರೋ ಪೋಲೀಸ್ ಸಿಬ್ಬಂದಿ ಮಾತ್ರ. ಹೆಚ್ಚಿನ ಪೋಲಿಸ್ ಪಡೆ ಮತ್ತು ಅಧಿಕಾರಿಗಳನ್ನು ಹಿಂದೂ ಸಮಾಜೋತ್ಸವದ ಬಂದೋಬಸ್ತ್‌ಗಾಗಿ ಮಂಗಳೂರಿಗೆ ರವಾನಿಸಲಾಗಿತ್ತು. ಈ ಬೆರಳೆಣಿಕೆಯಷ್ಟಿದ್ದ ಪೋಲಿಸರ ಸಮ್ಮುಖದಲ್ಲೇ

ಮಸೀದಿಯ ಮಹಡಿಯ ಪ್ರಾರ್ಥನಾ ಹಾಲ್‌ನಲ್ಲಿ ರಕ್ಷಣೆಗಾಗಿ ಉಳಿದುಕೊಂಡಿದ್ದ 27 ಮಂದಿಯಲ್ಲೇ ಅಪ್ರಾಯಸ್ಥರು, ಮುದುಕರು ಮತ್ತು ಮೌಲ್ವಿಗಳೂ ಇದ್ದರು. "ಹೊರಗಡೆ ಅಪಾಯ ಇದೆ; ನೀವು ಇಲ್ಲೇ ಇರಿ. ಆ ಮೇಲೆ ನಿಮ್ಮನ್ನು ಸುರಕ್ಷಿತವಾಗಿ ಮನೆ... ತಲುಪಿಸುತ್ತೇವೆ" ಎಂದು ಕೂಡಿ ಹಾಕಿದ...

ಪುಟ 16 ಕ್ಕೆ

"ಹಿಂದೂತ್ವವಾದಿಗಳು ನಮಗೆ ಹೊಡೆದರು : ಹಿಂದುಗಳು ಕಾಪಾಡಿದರು"

ಕಾಪುವಿನಲ್ಲಿ ಈ ಗಲಭೆಗಳು ನಡೆಯುತ್ತಿದ್ದಾಗ ಬ್ರಹ್ಮಾವರದಲ್ಲಿ ಕ್ರಿಕೆಟ್ ಪಂದ್ಯಾಟವನ್ನು ಗೆದ್ದು ಮೂಲ್ಕಿಗೆ ವಾಪಸಾಗುತ್ತಿದ್ದ ಕ್ರಿಕೆಟ್ ತಂಡದ ಕಾರೊಂದನ್ನು ಹಿಂದುತ್ವವಾದಿಗಳು ತಡೆದರು. ರಸ್ತೆಯಲ್ಲಿ ಸಾಗುತ್ತಿದ್ದ ವಾಹನಗಳಲ್ಲಿ ಮುಸ್ಲಿಮರಿದ್ದರೆ ಅವರನ್ನು ಥಳಿಸುವುದೇ ಇದರ ಉದ್ದೇಶ. ಮೂಲ್ಕಿಯ ಕ್ರಿಕೆಟ್ ತಂಡದ ಕಾರಿನ ಮೇಲೆ 'ಮಾಷಅಲ್ಲಾ' ಎಂದು ಬರೆಯಲಾಗಿತ್ತು ಹಾಗಾಗಿ ಕಾರನ್ನು ನಿಲ್ಲಿಸಿದ ಪುಂಡರು ಒಳಗಿದ್ದ ಪ್ರಯಾಣಿಕರಿಗೆ ಚಚ್ಚಿದರು. ಪ್ರಯಾಣಿಕರಲ್ಲಿ ಒಬ್ಬಾತ ರಾಜೇಶ್ ಎಂಬ ಹಿಂದೂ, ಉಳಿದವರು ಮುಸ್ಲಿಮರು. ಈ ರಾಜೇಶ್ ತನ್ನ ಚುಚ್ಚಿದ ಕಿವಿಗಳನ್ನು ಜನಿವಾರವನ್ನೂ ತೋರಿಸಿ ತಾನೊಬ್ಬ ಹಿಂದೂ ಎಂದಾಗಲೂ ಅವನನ್ನು ಬಿಡದೆ ಹೊಡೆಯಲಾಯಿತು. ಚೆಲ್ಲಾಪಿಲ್ಲಿಯಾಗಿ ಓಡಿದ ಹುಡುಗರು ಯಾರದೋ ಮನೆಯಂಗಳದಲ್ಲಿ ಹೋಗಿ ಬಿದ್ದರು. ಆ ಮನೆಯ ಇಬ್ಬರು ಹಿಂದೂ ಹೆಂಗಸರು ಅವರಿಗೆ ನೀರು ನೀಡಿ ಉಪಚರಿಸಿದರು. ಸೂರಿಶೆಟ್ಟಿ ಎಂಬ ಖಾಸಗಿ ಬಸ್ ಟೈಮ್ ಕೀಪರ್ ಒಬ್ಬರು ದಯೆ ತೋರಿಸಿ ಹುಡುಗರನ್ನು ಆಸ್ಪತ್ರೆಗೆ ಕಳುಹಿಸುವ ಏರ್ಪಾಡು ಮಾಡಿದರು. ಪೆಟ್ಟು ತಿಂದ ಹುಡುಗರು "ಹಿಂದುತ್ವವಾದಿಗಳು ನಮ್ಮನ್ನು ಹೊಡಿದರು; ಹಿಂದೂಗಳೂ ನಮ್ಮನ್ನು ಕಾಪಾಡಿದರು" ಎಂಬುದಾಗಿ ಮಾಧ್ಯಮಗಳಲ್ಲಿ ಹೇಳಿಕೊಂಡಿದ್ದು ಅರ್ಥಪೂರ್ಣವಾಗಿದೆ.

ಚುನಾವಣೆಯ ಮೊದಲೇ ಪ್ರಧಾನಮಂತ್ರಿ ಯಾರು ಎಂದು ಸಾರುವುದು ಮತದಾರರಿಗೆ ಮಾಡುವ ಅವಮಾನ



ಇಬ್ಬರದೂ ಒಂದೇ ರೀತಿಯ ಪ್ರಶ್ನೆ-ಪರ್ಯಾಯ ಜಾತ್ಯಾತೀತ ರಂಗದ ಪ್ರಧಾನ ಮಂತ್ರಿ ಅಭ್ಯರ್ಥಿ ಯಾರು ಎಂದು ಕಾಂಗ್ರೆಸ್ ಮುಖಂಡರು ಕೇಳುತ್ತಿದ್ದಾರೆ, ತಾನೇ ಬಿಜೆಪಿ ರಂಗದ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಹೇಳಿಕೊಳ್ಳುತ್ತಿರುವ ಅಡ್ವಾಣಿಯವರಂತೂ ಅದನ್ನೇ ಕೇಳುತ್ತಿದ್ದಾರೆ. ಈ ಮೂಲಕ ತಾವು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಜನತೆಯ ಸಾರ್ವಭೌಮತೆಯನ್ನೇ ಪ್ರಶ್ನಿಸುತ್ತಿದ್ದೇವೆ ಎಂದು ಅದೇಕೋ ಇವರಿಗೆ ಅರಿವಾಗುತ್ತಿಲ್ಲ!

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಜನತೆ ತಮ್ಮ ಪ್ರತಿನಿಧಿಯನ್ನು ಚುನಾಯಿಸುವಾಗ ತಮ್ಮ ಸಾರ್ವಭೌಮತೆಯನ್ನು ಚಲಾಯಿಸುತ್ತಾರೆ. ಈ ಚುನಾಯಿತ ಪ್ರತಿನಿಧಿಗಳು ಸರಕಾರ ರಚಿಸುತ್ತಾರೆ, ಅವರು ಆರಿಸಿದ ಮುಖಂಡರು ದೇಶದ ಪ್ರಧಾನ ಮಂತ್ರಿಗಳಾಗುತ್ತಾರೆ. ಹೀಗೆ ಪ್ರಧಾನ ಮಂತ್ರಿಯ ಪ್ರಶ್ನೆ ಏಳುವುದು ಚುನಾವಣೆಯ ನಂತರವೇ. ಯಾವುದೇ ಪಕ್ಷ ಅಥವಾ ಮೈತ್ರಿಕೂಟ ತಮ್ಮ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಚುನಾವಣೆಯ ಮೊದಲೇ ಸಾರಿದ ವ್ಯಕ್ತಿಯನ್ನು ಆ ನಿರ್ದಿಷ್ಟ ಚುನಾವಣಾ ಕ್ಷೇತ್ರದ ಮತದಾರರು ಸೋಲಿಸುವ ಸಾಧ್ಯತೆ ಖಂಡಿತಾ ಇದೆ. ಬಲಿಷ್ಟ ಕಾಂಗ್ರೆಸಿನ ಬಲಿಷ್ಟ ನಾಯಕಿ ಇಂದಿರಾ ಗಾಂಧಿಯವರನ್ನು ಅವರ ರಾಯಬರೇಲಿ ಮತದಾರರೇ 1977 ರಲ್ಲಿ ಸೋಲಿಸಿರಲಿಲ್ಲವೇ?

ಚುನಾವಣೆಯ ಮೊದಲೇ ಪ್ರಧಾನ ಮಂತ್ರಿ ಯಾರು ಎಂದು ಸಾರುವುದು ಮತದಾರರಿಗೆ ಮಾಡುವ ಅವಮಾನ, ನಾವು ಅಂಗೀಕರಿಸಿದ ಸಂವಿಧಾನದ ಭಾವನೆಗೆ ತೋರುತ್ತಿರುವ ಧಿಕ್ಕಾರ.


ಸ್ಥಿರತೆಗಿಂತ ಜವಾಬುದಾರಿಕೆ ಮುಖ್ಯ

ದಿವಂಗತ ರಾಷ್ಟ್ರಪತಿ ಶ್ರೀಯುತ ಕೆ.ಆರ್. ನಾರಾಯಣನ್ ಅವರು ನಮ್ಮ ಸಂವಿಧಾನ ಅಂಗೀಕಾರದ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಂಸತ್ತಿನ ಕೇಂದ್ರ ಸಭಾಂಗಣದಲ್ಲಿ ಮಾತನಾಡುತ್ತಾ ಹೇಳಿದ ಮಾತುಗಳು ಗಮನಾರ್ಹ: "ನಮ್ಮ ಸಂವಿಧಾನ ಪಿತೃಗಳು ಆಳವಾದ ಚಿಂತನೆ ಮತ್ತು ಚರ್ಚೆಗಳ ನಂತರ ಸಂಸದೀಯ ಪ್ರಜಾಪ್ರಭುತ್ವ ಸ್ವರೂಪವನ್ನು ಆರಿಸಿದರು. ಕರಡು ತಯಾರಿಕಾ ಸಮಿತಿ ಭಾರತಕ್ಕೆ ಸಂಸದೀಯ ವ್ಯವಸ್ಥೆಯನ್ನು ಆರಿಸುವಾಗ ಹೆಚ್ಚು ಸ್ಥಿರತೆಗಿಂತ ಹೆಚ್ಚು ಜವಾಬುದಾರಿಕೆಗೆ ಆದ್ಯತೆ ಕೊಡಬೇಕು ಎಂದು ಭಾವಿಸಿತು ಎಂಬುದಾಗಿ ಸಂವಿಧಾನ ಸಭೆಯಲ್ಲಿ ಡಾ.ಅಂಬೇಡ್ಕರ್‌ರವರು ವಿವರಿಸಿದರು. ಈ ವ್ಯವಸ್ಥೆಯಲ್ಲಿ ಸರಕಾರ ಪ್ರತಿದಿನ ಒರೆಗಲ್ಲಿನಲ್ಲಿ ಇರುತ್ತದೆ. ಆದರೂ ಪ್ರತಿದಿನ ಜವಾಬುದಾರಿಕೆ ಎಂಬುದು ಕಷ್ಟ ಸಾಧ್ಯವೇ ಎಂದು ಅವರು ಹೇಳಿದರು. ಹೀಗೆ ಸಂಸದೀಯ ವ್ಯವಸ್ಥೆ ಸಂವಿಧಾನ ಸಭೆಯ ಉದ್ದೇಶಪೂರ್ವಕವಾದ, ಬಹಳ ಯೋಚನೆಯ ನಂತರ ಮಾಡಿರುವ ಆಯ್ಕೆ. ಬ್ರಿಟಿಶರ ವ್ಯವಸ್ಥೆಯನ್ನು ನಕಲು ಮಾಡುವುದಕ್ಕೆ ಅಥವ ಭಾರತ ವಸಾಹುಶಾಹೀ ಕಾಲದಲ್ಲಿ ಆ ಬಗ್ಗೆ ಪಡೆದ ನಿಕಟ ಪರಿಚಯದಿಂದಾಗಿ ಈ ವ್ಯವಸ್ಥೆಯನ್ನು ಆರಿಸಿಕೊಂಡದ್ದು ಅಲ್ಲ."

ಅವರು ಇನ್ನೊಂದು ಅಂಶದತ್ತವೂ ಗಮನ ಸೆಳೆದಿದ್ದರು. ಭಾರತ ದೇಶ ಅತ್ಯಂತ ವೈವಿಧ್ಯಮಯವಾದ, ಅಪಾರ ವಿಭಿನ್ನತೆಗಳಿರುವ ದೊಡ್ಡ ದೇಶ. ಅದರ ವಿಸ್ತಾರ ಮತ್ತು ಸಾಮಾಜಿಕ ಮತ್ತು ಅಭಿವೃದ್ಧಿ ಸಮಸ್ಯೆಗಳ ಕ್ಲಿಷ್ಟತೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಇಂತಹ ದೇಶದಲ್ಲಿ ವಿವಿಧ ಜನವಿಭಾಗಗಳ ಅಸಂತೃಪ್ತಿಗಳಿಗೆ, ಹತಾಶೆಗಳ ಅಭಿವ್ಯಕ್ತಿಗೆ ಇಂಬು ಕೊಡುವ ವ್ಯವಸ್ಥೆ ಇಲ್ಲದಿದ್ದರೆ ಸಮಾಜದಲ್ಲಿ ದೊಡ್ಡ ಸ್ಫೋಟಗಳಾಗುವುದನ್ನು ತಪ್ಪಿಸಲು ಸಾಧ್ಯವಾಗದು. ಸ್ಥಿರತೆಗಿಂತ ಉತ್ತರದಾಯಿತ್ವಕ್ಕೆ ಹೆಚ್ಚಿನ ಆದ್ಯತೆ ಕೊಡುವ ಸಂಸದೀಯ ವ್ಯವಸ್ಥೆಯಲ್ಲಿ ಮಾತ್ರ ಇಂತಹ ಅಭಿವ್ಯಕ್ತಿಗೆ ಅವಕಾಶ ಸಿಗಬಲ್ಲದೆಂದು ಅವರು ಹೇಳಿದರು.

ಮತ್ತೆ ಅಧ್ಯಕೀಯ ಮಾದರಿಯ ಮಾತು

ದುರದೃಷ್ಟವಶಾತ್ ಕಾಂಗ್ರೆಸ್ ಮುಖಂಡರೂ ಇದನ್ನು ಮರೆಯುತ್ತಾರೆ. ಅಡ್ವಾಣಿ ಮತ್ತು ಬಿಜೆಪಿ ಮುಖಂಡರಿಗಂತೂ ಜವಾಬುದಾರಿಕೆಗಿಂತ ಪಟ್ಟಭದ್ರರ ಸ್ಥಿರತೆಗೇ ಹೆಚ್ಚು ಆದ್ಯತೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಆರೆಸ್ಸೆಸ್ ಸದಾ ಅಧ್ಯಕ್ಷೀಯ ಮಾದರಿ ಸರಕಾರವನ್ನೆ ಬಯಸುತ್ತಾ ಬಂದಿದೆ. ಏಕೆಂದರೆ ಆಗ ನಮ್ಮ ಈಗಿನ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ಸ್ವರೂಪವನ್ನು ಬದಲಿಸಿ ಅವರ "ಹಿಂದೂರಾಷ್ಟ" ಎಂಬ ಅವರ ಕಣ್ಣೋಟವನ್ನು ಹೇರುವುದು ಸಾಧ್ಯ.



ತಾನು ಏಕಾಂಗಿಯಾಗಿ ಎಂದೂ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ ಎಂದು ಮೊದಲೇ ಮನಗಂಡಿರುವ ಬಿಜೆಪಿಗೆ, ತನ್ನ ಎನ್‌ಡಿಎ ಮಿತ್ರರು ಒಬ್ಬೊಬ್ಬರಾಗಿ ದೂರವಾಗುತ್ತಿರುವಾಗ, ಈಗ ಮತ್ತೊಮ್ಮೆ ಸಂಸದೀಯ ವ್ಯವಸ್ಥೆಯನ್ನು ಬುಡಮೇಲು ಮಾಡುವ, ಜತೆಗೆ ಕೋಮುಧ್ರುವೀಕರಣಕ್ಕೆ ಪ್ರಚೋದನೆ ಕೊಡುವ ತನ್ನ ಎಂದಿನ ದಾರಿ ಮಾತ್ರ ಕಾಣುತ್ತಿದೆ.



ಆದ್ದರಿಂದಲೇ ಬಿಜೆಪಿ ತನ್ನ 1991ರ ಚುನಾವಣಾ ಪ್ರಣಾಳಿಕೆಯಲ್ಲಿ ಅಧ್ಯಕ್ಷ ಮಾದರಿ ಸರಕಾರದ ಬಗ್ಗೆ ಅಧ್ಯಯನ ಮಾಡಲು ಆಯೋಗ ರಚಿಸುವುದಾಗಿ ಹೇಳಿತು. ನಂತರ 1996 ಮತ್ತು 1998ರಲ್ಲಿ ಈ ಪ್ರಸ್ತಾಪವಿಲ್ಲದಿದ್ದರೂ ಬಿಜೆಪಿ ಈಗಲೂ ಬಯಸುವುದು ಅದನ್ನೇ.

ಇತ್ತೀಚಿಗೆ ಅಡ್ವಾಣಿಯವರು ಮನಮೋಹನಸಿಂಗ್‌ರನ್ನು ಅಮೆರಿಕಾದ ಅಧ್ಯಕ್ಷೀಯ ಚುನಾವಣಾ ಪ್ರಚಾರದ ಮಾದರಿಯಲ್ಲಿ ಒಂದು ರಾಷ್ಟ್ರೀಯ ಚರ್ಚೆಗೆ ಬನ್ನಿ ಎಂದು ಸವಾಲು ಹಾಕಿದುದರ ಹಿಂದೆ ಇರುವುದು ಇದೇ ಮನೋಸ್ಥಿತಿ. ಒಂದು ರಾಷ್ಟ್ರೀಯ ಚರ್ಚೆಯ ಮೂಲಕ ಜನಗಳು ಒಂದು ತರ್ಕಪೂರ್ಣ ತೀರ್ಮಾನಕ್ಕೆ ಬರಲಿ ಎಂಬುದು ಖಂಡಿತ ಅವರ ಆಶಯವಲ್ಲ. ಭಾರತದ ರಾಜಕಾರಣದಲ್ಲಿ ಎರಡೇ ಧ್ರುವಗಳಿರುವುದು, ಮೂರನೇ ಶಕ್ತಿಗೆ ಅವಕಾಶವಿಲ್ಲ ಎಂಬ ಅವರ ಇತ್ತೀಚಿನ ಹೇಳಿಕೆಯ ಜತೆಗೆ ಇದನ್ನು ನೋಡಬೇಕು. ಭಾರತದ ರಾಜಕಾರಣ ಅಮೆರಿಕಾದ ರಾಜಕೀಯ ವ್ಯವಸ್ಥೆಯಂತೆ ಎರಡು ಪಕ್ಷಗಳ ರಾಜಕಾರಣವಾಗಲಿ ಎಂಬುದು ಅವರ ಬಯಕೆ. ಆಗ ಅವರಿಗೆ ಆಳುವ ವರ್ಗಗಳ ಕಣ್ಣೋಟಕ್ಕಿಂತ ಭಿನ್ನವಾದ ಜನಪರ ಪರ್ಯಾಯ ಮೂಡಿ ಬರುವ ಭಯವಿರುವುದಿಲ್ಲ!

ಅಧ್ಯಕ್ಷೀಯ ಮಾದರಿಯಲ್ಲಿ ಎಲ್ಲಾ ಅಧಿಕಾರಗಳು ಒಬ್ಬನೇ ಮುಖಂಡನ ಕೈಗಳಲ್ಲಿ ಕೇಂದ್ರೀಕೃತವಾಗಿರುತ್ತದೆ. ಆತ ಪ್ರಭುತ್ವ ಯಂತ್ರವನ್ನು ನಡೆಸಲು ಪ್ರಮುಖ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತಾನೆ. ಈ ಮಂದಿ ನೇರವಾಗಿ ಸಂಸತ್ತಿಗೆ ಅಥವಾ ಜನತೆಗೆ ಜವಾಬುದಾರರಾಗಿರುವುದಿಲ್ಲ. ಆರೆಸ್ಸೆಸ್‌ಗೆ ತನ್ನ ಕಣ್ಣೋಟವನ್ನು ಹೇರಲು ಇಂತಹ ವ್ಯವಸ್ಥೆಯೇ ಬೇಕು. ಆದರೆ ಶ್ರೀಯುತ ಕೆ.ಆರ್ .ನಾರಾಯಣನ್ ಹೇಳಿದಂತೆ ಇದು ಭಾರತಕ್ಕೆ ತಕ್ಕುದಾದ ವ್ಯವಸ್ಥೆಯಲ್ಲ. ನಮ್ಮ ಸಂವಿಧಾನ ಸಭೆ ಬಹಳಷ್ಟು ಚರ್ಚೆಗಳ ನಂತರ ಆರಿಸಿಕೊಂಡ ಸಂಸದೀಯ ವ್ಯವಸ್ಥೆ ದೇಶದ ಜಾತ್ಯಾತೀತ ಬುನಾದಿಗೆ ಮತ್ತು ಒಕ್ಕೂಟ ಸ್ವರೂಪಕ್ಕೆ ತಕ್ಕುದಾದ ವ್ಯವಸ್ಥೆ.

ಆರೆಸ್ಸೆಸ್ ಅಜೆಂಡಾ

ಆದರೆ ತಾನು ಪ್ರಧಾನ ಮಂತ್ರಿ ಅಭ್ಯರ್ಥಿಯೆಂದುಕೊಳ್ಳುವ ಅಡ್ವಾಣಿಯವರು ಅಮೆರಿಕನ್ ಅಧ್ಯಕೀಯ ಮಾದರಿ ಚರ್ಚೆಗೆ ಕರೆ ನೀಡುತ್ತಾ ಮತ್ತೊಮ್ಮೆ ಆರೆಸ್ಸೆಸ್ ಮತ್ತು ಬಿಜೆಪಿಯ ಅಜೆಂಡಾವನ್ನು ಮುಂದೊತ್ತಲು ಯತ್ನಿಸಿದ್ದಾರೆ. ತಮ್ಮ ಎನ್‌ಡಿಎ ಮಿತ್ರರು ಒಬ್ಬೊಬ್ಬರಾಗಿ ದೂರವಾಗುತ್ತಿರುವಾಗ, ತಾವು ಏಕಾಂಗಿಯಾಗಿ ಎಂದೂ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ ಎಂದು ಮೊದಲೇ ಮನಗಂಡಿರುವ ಬಿಜೆಪಿ ಈಗ ಮತ್ತೊಮ್ಮೆ ಸಂಸದೀಯ ವ್ಯವಸ್ಥೆಯನ್ನು ಬುಡಮೇಲು ಮಾಡುವ ಹಂಚಿಕೆಯಲ್ಲಿದ್ದಂತೆ ಕಾಣುತ್ತದೆ.

ಜತೆಗೆ ಅದಕ್ಕೀಗ ಚುನಾವಣಾ ಬೆಂಬಲ ಗಿಟ್ಟಿಸಲು ಕಾಣುತ್ತಿರುವುದು ಅದರ ಎಂದಿನ ಮಾರ್ಗವೇ-ಅಂದರೆ ಕೋಮು ಧ್ರುವೀಕರಣಕ್ಕೆ ಪ್ರಚೋದನೆ ಕೊಡುವುದು. ಪಿಲಿಭಿತ್‌ನಲ್ಲಿ, ಕರ್ನಾಟಕದಲ್ಲಿ ಅದು ಕಾಣಬರುತ್ತಿದೆ. ಮುಂದಿನ ಚುನಾವಣೆಗಳಲ್ಲಿ ಅದರ ಈ ಹುನ್ನಾರಗಳನ್ನು ವಿಫಲಗೊಳಿಸಬೇಕು. ಆಧುನಿಕ ಭಾರತವನ್ನು ಉಳಿಸಿಕೊಳ್ಳಲು ಇದು ಅಗತ್ಯ.



ಕಾರ್ಮಿಕರು ಶ್ರಮಜೀವಿಗಳು. ಶ್ರಮಜೀವಿಗಳ ಪರಿಶ್ರಮವಿಲ್ಲದೆ ಹೋದರೆ ಜಗತ್ತೇ ಸ್ತಬ್ಧವಾಗಿ ಹೋಗುತ್ತದೆ. ಅಂತಹ ಕಾರ್ಮಿಕ ವರ್ಗದ ಹಿತ ರಕ್ಷಿಸಬೇಕಾದರೂ ಭಾರಿ ಹೋರಾಟವೇ ಬೇಕು. ಆಳುವ ವರ್ಗಗಳು ಏನನ್ನೂ ಹಾಗೇ ಕೊಡಲಾರರು. ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಕಾರ್ಮಿಕವರ್ಗಕ್ಕೆ ಕೊಟ್ಟ ಭರವಸೆಗೆ ದ್ರೋಹ ಬಗೆದ ಯುಪಿಎ ಸರ್ಕಾರ ಅದೇ ಬಂಡವಾಳಿಗರ, ಶ್ರೀಮಂತರ, ಮಾಲೀಕರ ಪರ ನೀತಿಯನ್ನೇ ಅನುಸರಿಸಿತು, ದ್ರೋಹ ಎಸಗಿತು. ವಿವರಗಳು ಇಲ್ಲಿವೆ.

ಯುಪಿಎ ಸರ್ಕಾರ ದೇಶದ ಕಾರ್ಮಿಕ ವರ್ಗಕ್ಕೆ ನೀಡಿದ ಭರವಸೆ ಏನು? ಮಾಡಿದ ವಂಚನೆ ಏನು?

ಇದೋ ಇಲ್ಲಿದೆ ಕಾರ್ಮಿಕ ವರ್ಗದ ಆರೋಪ ಪಟ್ಟಿ

ಜಾಗತಿಕ ಆರ್ಥಿಕ ಹಿಂಜರಿತ ದೇಶದ ಲಕ್ಷಾಂತರ ಕಾರ್ಮಿಕರ ಬದುಕನ್ನು ತಟ್ಟಿದೆ. ಹೀಗಾಗಿ ಈ ಲೋಕಸಭಾ ಚುನಾವಣೆ ಕಾರ್ಮಿಕ ವರ್ಗಕ್ಕೆ ಒಂದು ರಾಜಕೀಯ ಸವಾಲು. ಯಾಕೆಂದರೆ ಇಲ್ಲಿ ಹೊರಹೊಮ್ಮುವ ಫಲಿತಾಂಶ ದೇಶದ ಕಾರ್ಮಿಕ ವರ್ಗದ ಭವಿಷ್ಯ ನಿರ್ಧರಿಸುವಂತಹದ್ದು.

ಐದು ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ

- ದೇಶದ ಕೋಟ್ಯಾಂತರ ಅಸಂಘಟಿತ ಕಾರ್ಮಿಕರ ಸೇವಾ ಪರಿಸ್ಥಿತಿ ಸುಧಾರಣೆಗೆ ಏನೇನೂ ಗಮನಹರಿಸಲಿಲ್ಲ.
- ಕಾರ್ಪೋರೇಟ್ ಸಂಸ್ಥೆ- ಕಂಪನಿಗಳಿಗೆ ಮಾತ್ರ ಒಂದರ-ಮೇಲೊಂದು ರಿಯಾಯಿತಿಗಳ ಘೋಷಿಸಿತು.
- ಸಾರ್ವಜನಿಕ ಕ್ಷೇತ್ರದ ನೌಕರರ ವೇತನ ಪರಿಷ್ಕರಣೆ 2007ರ ಜನವರಿಯಿಂದ ಬಾಕಿ ಇದೆ. ಆ ಬಗ್ಗೆ ಸರ್ಕಾರ ಗಮನಹರಿಸಲಿಲ್ಲ.
- ಮುಷ್ಕರದ ಮೇಲೆ ನ್ಯಾಯಾಲಯದ ಕಣ್ಣಿದೆ. ಆದರೆ ಕಾರ್ಮಿಕ ವರ್ಗಕ್ಕೆ ಮುಷ್ಕರದ ಹಕ್ಕನ್ನು ಯುಪಿಎ ಸರ್ಕಾರ ಖಾತ್ರಿಪಡಿಸಲು ಯಾವ ಕ್ರಮಕ್ಕೂ ಮುಂದಾಗಲಿಲ್ಲ.
- ಬದಲಾಗಿ-ಕಾರ್ಮಿಕ ವರ್ಗದ ಮೇಲೆ ಮತ್ತಷ್ಟು ಒಂದರ-ಮೇಲೊಂದು ಧಾಳಿಗಳನ್ನು ಹರಿಯಬಿಟ್ಟಿತು.

ಸಿಎಂಪಿಯಲ್ಲಿ ಯುಪಿಎ ನೀಡಿದ್ದ ಭರವಸೆ ಏನು?

ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಎಡಪಕ್ಷಗಳ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ಕೆಲವು ದುಡಿಯುವ ವರ್ಗದ ಜನರ ಪರವಾದ ಭರವಸೆಗಳನ್ನು ತನ್ನ ಸಮಾನ ಕನಿಷ್ಠ ಕಾರ್ಯಕ್ರಮ(ಸಿಎಂಪಿ)ಯಲ್ಲಿ ಸೇರಿಸಿತ್ತು. ಅವು ಯಾವುವೆಂದರೆ..

- ಶೇ.93 ರಷ್ಟಿರುವ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಸಾಮಾಜಿಕ ಸುರಕ್ಷೆ, ಆರೋಗ್ಯವಿಮೆ, ಮತ್ತಿತರೆ ಸವಲತ್ತುಗಳು.
- ಕೈಗಾರಿಕಾ ಕ್ಷೇತ್ರದಲ್ಲಿ ವ್ಯಾಪಾಕವಾಗಿರುವ 'ಹೈರ್‌ಅಂಡ್‌ಫೈರ್' ನೀತಿ ರದ್ದು, ಕಾರ್ಮಿಕ ವರ್ಗದ ಪರವಾಗಿ ಕಾನೂನು ಸುಧಾರಣೆ ವಿವಾದ ಬಗೆಹರಿಸುವಲ್ಲಿ 'ಕಾರ್ಮಿಕ ಸಂಘ'ಗಳಿಗೆ ಮಾನ್ಯತೆ.
- ವಿವಾದಗಳನ್ನು ಸಂಘರ್ಷದ ಬದಲಾಗಿ ಸೌಹಾರ್ದಯುತವಾಗಿ ಸಂಧಾನದ ಮೂಲಕ ಪರಿಹರಿಸಿಕೊಳ್ಳುವುದು, ಮುಷ್ಕರ ಹಕ್ಕಿನ ಖಾತ್ರಿ.
- ಲಾಭದಾಯಕ ಸಾರ್ವಜನಿಕ ಉದ್ದಿಮೆಗಳಿಗೆ ಖಾಸಗೀಕರಣಕ್ಕೆ ತಡೆ.
- ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ, ಉದ್ಯೋಗ ಖಾತ್ರಿ ಕಾನೂನು ಜಾರಿಗೊಳಿಸಿ ಪ್ರತಿ ಕುಟುಂಬಕ್ಕೆ ವರ್ಷಕ್ಕೆ ನೂರು ದಿನಗಳ ಕೆಲಸ ಒದಗಿಸುವುದು.

ಮಾಡಿದ್ದೇನು?

ಐದು ವರ್ಷ ದೇಶವನ್ನು ಆಳಿದ ಕಾಂಗ್ರೆಸ್ ಮೇಲ್ಕಂಡ ಭರವಸೆಗಳನ್ನು ನೀಡಿದ್ದರೂ, ವಾಸ್ತವವಾಗಿ ಅದು ಆ ಭರವಸೆಗಳ ವಿರುದ್ಧವೇ ನಡೆಯಿತು. ಹಾಗೆ ನೋಡಿದರೆ ಯುಪಿಎ ಸರ್ಕಾರ ಪ್ರತಿ ವಿಚಾರದಲ್ಲೂ ಕಾರ್ಮಿಕ ವರ್ಗಕ್ಕೆ ವಂಚನೆಯನ್ನು ಮಾಡಿದೆ. ಕಾರ್ಮಿಕವರ್ಗದ ವಿರುದ್ಧ ಮೊದಲಿದ್ದ ಕಾಂಗ್ರೆಸ್ ಚಾಳಿ ಬದಲಾಗಿಲ್ಲ. ಅದು ಈಗಲೂ ಮುಂದುವರೆದಿದೆ. ಹಾಗಾಗಿ ಈ ಲೋಕಸಭಾ ಚುನಾವಣೆಯಲ್ಲಿ ದೇಶದ ಕಾರ್ಮಿಕ ವರ್ಗ ಕಾಂಗ್ರೆಸ್ ನೇತೃತ್ವ ಯುಪಿಎ ವಿರುದ್ಧ ಈ ಆಪಾದನಾ ಪಟ್ಟಿ (ದೋಷರೋಪ-ಚಾರ್ಜ್‌ಶೀಟ್) ಸಲ್ಲಿಸುತ್ತಿದೆ.

ಆರೋಪ ಒಂದು: ಉದ್ಯೋಗಗಳನ್ನು ನಾಶಪಡಿಸಿದಿರಿ

- ನಿಮ್ಮ ಆಡಳಿತದಲ್ಲಿ ಹೊಸ ಉದ್ಯೋಗ ಸೃಷ್ಟಿಸಲಿಲ್ಲ. ಬದಲಾಗಿ ಗುತ್ತಿಗೆ ಪದ್ಧತಿ, ಉದ್ಯೋಗ ನೇಮಕಾತಿ ಮೇಲಿನ ನಿರ್ಬಂಧ, ಖಾಲಿ ಹುದ್ದೆಗಳ ಮೂಲಕ ಒಂದು ಕೋಟಿ ಉದ್ಯೋಗ ನಾಶಪಡಿಸಿದಿರಿ.
- ಹಿಂದಿನ ಎನ್‌ಡಿಎ ಸರ್ಕಾರದ ರೀತಿಯಲ್ಲೇ.. ಹೊರಗುತ್ತಿಗೆ, ಕೆಲಸದ ಪರಿಸ್ಥಿತಿಯಲ್ಲಿ ಬದಲಾವಣೆ, ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಸಿಕೊಳ್ಳುವದು, ಕಾನೂನುಬದ್ಧ ಸೌಲಭ್ಯಗಳ ನಿರಾಕರಣೆ ಪರಿಸ್ಥಿತಿ ನಿರ್ಮಿಸಿದಿರಿ.
- ರೈಲ್ವೆಯಲ್ಲಿ ಖಾಯಂ ಕೆಲಸಗಳನ್ನು ನಾಶಪಡಿಸಿದಿರಿ. ಮತ್ತು ಅಲ್ಲಿನ ಎಲ್ಲಾ ಸೌಲಭ್ಯಗಳನ್ನು ಖಾಸಗೀಕರಿಸಿದಿರಿ.
- ಸರ್ಕಾರಿ ಇಲಾಖೆಗಳಲ್ಲಿ, ರಕ್ಷಣಾ ವಲಯಗಳಲ್ಲಿ, ಸಾರ್ವಜನಿಕ ಹಣಕಾಸು ಸಂಸ್ಥೆಗಳಲ್ಲಿ ಯಾವುದೇ ನೇಮಕಾತಿ ಮಾಡಲಿಲ್ಲ.
- ಖಾಸಗಿ ಕ್ಷೇತ್ರದ ಸಂಘಟಿತ ವಲಯದಲ್ಲೂ ಖಾಯಂ ನೌಕರರನ್ನು ಅವರ ಇಚ್ಛೆಗೆ ವಿರುದ್ಧವಾದ ಸ್ವಯಂ ನಿವೃತ್ತಿಗೊಳಿಸದಿರಿ. ಅವರ ಸ್ಥಾನದಲ್ಲಿ ಗುತ್ತಿಗೆ ಕಾರ್ಮಿಕರನ್ನು ನೇಮಿಸಿ ಶೋಷಿಸಲು ಅವಕಾಶ ನೀಡಿದಿರಿ.
- ಮಾಹಿತಿ ತಂತ್ರಜ್ಞಾನ(ಐಟಿ), ನಾಗರೀಕ ವಿಮಾನಯಾನ, ಸೇವಾ ವಲಯ, ಗಣಿ ಮತ್ತಿತರೆ ಕ್ಷೇತ್ರಗಳಲ್ಲಿ ಉದ್ಯೋಗ ಭದ್ರತೆಯನ್ನು ತೀವ್ರವಾಗಿ ಕಡಿತಗೊಳಿಸಿದಿರಿ.



ಕಾರ್ಮಿಕ ಸಚಿವಾಲಯದ ವರದಿ ಹೇಳುವ ಸತ್ಯವೇನು?

ನಿಮ್ಮ ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲಯವೇ ಕಳೆದ ದಶಕದಲ್ಲಿ ಖಾಯಂ ಉದ್ಯೋಗಗಳಲ್ಲಿ ಶ್ರಮ ಶಕ್ತಿಯ ಪ್ರಮಾಣ ಶೇ.9 ರಿಂದ ಶೇ.5 ಇಳಿದಿದೆ ಎಂದು ಹೇಳಿದೆ.

- ಇದರರ್ಥ ಸುಮಾರು ಒಂದು ಕೋಟಿ ಉದ್ಯೋಗಗಳು ನಾಶಹೊಂದಿವೆ ಎಂದು ಅದು ದೃಢಪಡಿಸಿದೆ.
- ಯುಪಿಎ ಅಧಿಕಾರಕ್ಕೆ ಬರುವಾಗ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿಯಾಗಿದ್ದ ನಿರುದ್ಯೋಗಿಗಳ ಸಂಖ್ಯೆ:36.4 ಮಿಲಿಯನ್
- 2007 ಮತ್ತು 2008ರ ಅವಧಿಯಲ್ಲಿ ಅದು 41.4 ಮಿಲಿಯನ್ ಆಗಿದೆ ಎಂದು ಅದೇ ಕಾರ್ಮಿಕ ಸಚಿವಾಲಯದ ಅಂಕಿ-ಸಂಖ್ಯೆ ತಿಳಿಸುತ್ತಿವೆ. ಅಂದರೆ ಐದು ವರ್ಷದಲ್ಲಿ 5 ಲಕ್ಷ ಯುವಜನರು 'ನಿರುದ್ಯೋಗಿಗಳ ಪಟ್ಟಿಗೆ' ಹೊಸ ಸೇರ್ಪಡೆಯಾಗಿದ್ದಾರೆ.
- ಆದರೆ ಜಾಗತಿಕ ಆರ್ಥಿಕ ಕುಸಿತದಿಂದಾಗಿ 'ಐವತ್ತು ಲಕ್ಷ' ಜನರು ಕೆಲಸ ಕಳೆದುಕೊಂಡಿದ್ದಾರೆ. ಅದು ಮೇಲ್ಕಂಡ ಲೆಕ್ಕದಲ್ಲಿ ಬಂದಿಲ್ಲ.

ಆರೋಪ ಎರಡು: ನಮ್ಮನ್ನು 'ಗುಲಾಮ ಕಾರ್ಮಿಕ'ರನ್ನಾಗಿಸಿದರಿ

ನವ ಉದಾರೀಕರಣದ ನೆಪದಲ್ಲಿ, 'ಇನ್‌ಸ್ಪೆಕ್ಟರ್ ರಾಜ್' ವ್ಯವಸ್ಥೆಯನ್ನು ರದ್ದುಪಡಿಸುವ ನೆಪ... 'ಉದ್ಯೋಗ' ಪರಿಸ್ಥಿತಿಯಲ್ಲಿ 'ಅನಿಯಂತ್ರಣ' ಜಾರಿ ಮಾಡಿದೀರಿ. ಅದರ ಪರಿಣಾಮವೆಂದರೆ...

- ಕಾರ್ಮಿಕರ ಕೆಲಸದ ಅವಧಿಯಲ್ಲಿ ಹೆಚ್ಚಳ, ಸಾಮಾಜಿಕ ಸುರಕ್ಷಾ ಕ್ರಮಗಳಿಗೆ ತಿಲಾಂಜಲಿ, ಕಾರ್ಮಿಕರನ್ನು ವಜಾಗೊಳಿಸಲು ಕಾರ್ಮಿಕರಿಗೆ ಮುಕ್ತ ಸ್ವಾತಂತ್ರ್ಯ.
- ಕಾರ್ಮಿಕರಿಗೆ ಅಲ್ಪಸ್ವಲ್ಪ ಕಾನೂನು ಜಾರಿ ಮಾಡುತ್ತಿದ್ದ 'ಕಾನೂನು ಜಾರಿ(Enforcement mechinery) ವ್ಯವಸ್ಥೆಯನ್ನು ನಾಶಪಡಿಸಲು ಹಿಂದಿನ ಎನ್‌ಡಿಎ ದಾರಿಯಲ್ಲೇ ಸಾಗಿದಿರಿ.
- ಕಂಪನಿ ಕಾಯ್ದೆ ನಿಗದಿಗೊಳಿಸಿದ್ದ 8 ಗಂಟೆ ಕೆಲಸದ ಅವಧಿಯನ್ನು 12 ಗಂಟೆಗೆ ವಿಸ್ತರಿ... ಕೆಲಸಕ್ಕೆ ಕೈ ಹಾಕಿದಿರಿ. ಇದು ಈಗಾಗಲೇ ಗಮನಾರ್ಹ ಉದ್ದಿಮೆಯಲ್ಲಿ (ಓ.ಟಿ. ಇಲ್ಲದೆ) 12 ಗಂಟೆ ಅವಧಿ ಜಾರಿಯಲ್ಲಿದೆ.
- ಕೇಂದ್ರ ಸರ್ಕಾರದ ನೀತಿಯ ಪರಿಣಾಮ ಈಗಾಗಲೇ ಹಲವು ರಾಜ್ಯಗಳಲ್ಲಿ 'ಕನಿಷ್ಠ ಕೂಲಿ' ಜಾರಿ ಕುರಿತು ಇದ್ದ 'ಪರಿಶೀಲನಾ' ವ್ಯವಸ್ಥೆಯನ್ನು ಹಿಂಪಡೆಯಲಾಗಿದೆ. ಇದರಿಂದ 'ಕನಿಷ್ಠ ಕೂಲಿಯಿಂದಲೂ' ಕಾರ್ಮಿಕರು ವಂಚಿತರಾಗಿದ್ದಾರೆ.
- ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ)ಯೇ ಭಾರತದಲ್ಲಿ ಕೋಟಿ ಕಾರ್ಮಿಕರ ದಿನದ ಆದಾಯ ಒಂದು ಡಾಲರ್ (ರೂ.50.00) ಗಿಂತ ಕಡಿಮೆ ಎಂದು ಹೇಳಿದೆ.
- ಕಾರ್ಮಿಕರ ಪರಿಸ್ಥಿತಿ ಹೀಗಿದ್ದರೂ ಅಧಿಕಾರ ನಡೆಸಿದ ಎನ್‌ಡಿಎ-ಯುಪಿಎ ಸರ್ಕಾರಗಳು ಮಾತ್ರ ಮಾಲೀಕರು ಅಪಾರ ಪ್ರಮಾಣದ ಲಾಭ ಮಾಡಲು ಸಹಾಯ ಮಾಡುತ್ತಲೇ ಬಂದಿವೆ.
- ಆತಂಕದ ಸಂಗತಿ ಎಂದರೆ, ಭಾರತದ ಕೈಗಾರಿಕಾ ವಲಯದಲ್ಲಿ ಕಾರ್ಮಿಕರ ಒಟ್ಟು ವೇತನದ ಮೌಲ್ಯದ ಪಾಲು ಜಗತ್ತಿನಲ್ಲೇ ಅತ್ಯಂತ ಕಡಿಮೆಯಾಗಿದೆ.
- ರಾಷ್ಟ್ರೀಯ ಸ್ಯಾಂಪಲ್ ಸರ್ವೆ(ಎನ್‌ಎಸ್‌ಎಸ್) ಅಂಕಿ ಸಂಖ್ಯೆ ಪ್ರಕಾರ ತೊಂಭತ್ತರಲ್ಲಿ ಕೈಗಾರಿಕಾ ವಲಯದಲ್ಲಿ ಒಟ್ಟು ಮೌಲ್ಯದಲ್ಲಿ ಕಾರ್ಮಿಕನ

ಮೀಸಲಾತಿಗೆ ಪೆಟ್ಟು!

- ಉದ್ಯೋಗ ನೇಮಕಾತಿ ಮೇಲೆ ಹೇರಿರುವ ನಿರ್ಬಂಧದ ಪರಿಣಾಮ ನೇರವಾಗಿ ತಟ್ಟಿರುವುದು ದಲಿತ ಮತ್ತು ಆದಿವಾಸಿ ಯುವಜನರ ಮೇಲೆ. ಯಾತಕ್ಕೆಂದರೆ ಮೀಸಲಾತಿ ಹುದ್ದೆಗಳು ಕಡಿಮೆಯಾಗಿವೆ.
- ಇದಲ್ಲದೆ ಖಾಸಗಿ ಕ್ಷೇತ್ರದಲ್ಲಿ 'ಮೀಸಲಾತಿ' ಜಾರಿ ಮಾಡಬೇಕೆನ್ನುವ ಬೇಡಿಕೆ ಬಗ್ಗೆ ನಿಮ್ಮ ಸರ್ಕಾರ ಗಮನ ನೀಡಲಿಲ್ಲ.
- ನಾವೇ ಶ್ರೇಷ್ಠ ಜಾತಿ ಎಂಬಂತೆ ವರ್ತಿಸುತ್ತಿರುವ ದೊಡ್ಡ ಕಾರ್ಪೋರೇಟ್ ವಲಯಕ್ಕೆ ಮಣಿದಿರುವ ಸರ್ಕಾರ ಅಲ್ಲಿ 'ಮೀಸಲಾತಿ' ಜಾರಿಗೊಳಿಸುವ ಯಾವುದೇ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಲಿಲ್ಲ.

ಪಾಲು ಶೇ.30 ರಷ್ಟಿದ್ದರೆ. 2006ರಲ್ಲಿ ಅದು ಶೇ.12ಕ್ಕೆ ಇಳಿದಿದೆ.

- ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ, ಅದು ಅನಾರೋಗ್ಯ ಸ್ಪರ್ಧೆಯ ವಿರುದ್ಧ ಹೋರಾಡಲು ಬೇಕಾದ ಯಾವುದೇ ಸಹಾಯವನ್ನು ಮಾಡಲಿಲ್ಲ. ಬದಲಾಗಿ ಅಲ್ಲಿ ಕಾರ್ಮಿಕರಿಗೆ ಸಿಗಬೇಕಾದ ಇಎಸ್‌ಐ, ಪಿಎಫ್, ಅಪಘಾತ ಪರಿಹಾರ ಸೌಲಭ್ಯ ಮೊದಲಾದ ಸೌಲಭ್ಯಗಳು ಕಾರ್ಮಿಕರಿಗೆ ಸಿಗದಂತೆ, ಮಾಲೀಕರಿಗೆ ಅವಕಾಶ ಕಲ್ಪಿಸಿತು. ಕಾರ್ಮಿಕರನ್ನು 2-3 ಗುಂಪುಗಳಲ್ಲಿ ವಿಂಗಡಿಸಿ ಅವರು ಹೆಸರು ಗುರುತಿಲ್ಲದೆ ಕೆಲಸ ಮಾಡಿಸಲಾಗುತ್ತಿದೆ.
- ಮಾಲೀಕರಿಗೆ, ಪ್ರತಿವರ್ಷ ನೀಡುವ 'ಆದಾಯ ಪ್ರಮಾಣಪತ್ರ' ದಿಂದ ಯುಪಿಎ ಸರ್ಕಾರ ವಿನಾಯ್ತಿ ನೀಡಿದೆ. ಇದರಿಂದ ಶೇ.94 ರಷ್ಟು ಅಸಂಘಟಿತ ಕಾರ್ಮಿಕರಿಗೆ ಯಾವುದೇ ಭದ್ರತೆ ಇಲ್ಲದಂತಾಗಿದೆ.
- ಇನ್ನೂ 'ಐಟಿ' ಉದ್ದಿಮೆಗಳಿಗೆ ಬಾರಿ ರಿಯಾಯ್ತಿಗಳನ್ನು ನೀಡಲಾಗಿದೆ. ಅದರೆ ಅದೇ ವೇಳೆಗೆ ಐಟಿ ನೌಕರರನ್ನು ರೋಮ್ ಸಾಮ್ರಾಜ್ಯದ ಗುಲಾಮರಂತೆ ದುಡಿಸಿಕೊಳ್ಳಲಾಗುತ್ತಿದೆ. ಕೆಲಸ ಕಳೆದುಕೊಳ್ಳುವ ಬೆದರಿಕೆ ಸಹಾ ಅವರ ಮೇಲಿದೆ. ಸಾವಿರಾರು ಸಂಖ್ಯೆಯಲ್ಲಿ ಅಕ್ಷರಶಃ ಅವರು ಕೆಲಸ ಕಳೆದುಕೊಂಡಿದ್ದಾರೆ. ಅವರ ಆದಾಯದಲ್ಲಿ ಬಾರಿ ಕುಸಿತ ಕಂಡುಬಂದಿದೆ. ಕನಿಷ್ಠ 'ಸಾಮೂಹಿಕ ಚೌಕಾಸಿ ಸಂಧಾನ' ಮತ್ತಿತರೆ ಸೌಲಭ್ಯಗಳನ್ನು ಅವರಿಗೆ ನಿರಾಕರಿಸಲಾಗಿದೆ.
- 'ಎಸ್‌ಇಜೆಡ್' ಕಾನೂನಿಗೆ ತಿದ್ದುಪಡಿ ತರಲು, ಅಲ್ಲಿ ಕಾರ್ಮಿಕ ಕಾನೂನು ಅನ್ವಯಿಸಲು ಯುಪಿಎ ತಯಾರಿಲ್ಲ, ಮತ್ತು ಕಾನೂನು ಪ್ರಕಾರ ಸಂಘಟನೆ ಮಾಡಲು ಅವಕಾಶ ನೀಡಿಲ್ಲ. ಬದಲಾಗಿ ಅಲ್ಲಿನ ಕಾರ್ಮಿಕರನ್ನು ಎಲ್ಲಾ ಕಾರ್ಮಿಕ ಕಾನೂನನ್ನು ದೂರವಿರಿಸಲಾಗಿದೆ.

ಆರೋಪ ಮೂರು : ಅಸಂಘಟಿತರ ಬಗ್ಗೆ ... ಬರೀ ಅಣಕ

- ದೇಶದ-ನಗರ-ಗ್ರಾಮೀಣ ಪ್ರದೇಶದಲ್ಲಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ 40 ಕೋಟಿಗಿಂತ ...ಧಿಕ. ಅದರಲ್ಲಿ ಮಹಿಳೆಯರ ಸಂಖ್ಯೆ ಗಣನೀಯ.
- ಅಸಂಘಟಿತ ಕಾರ್ಮಿಕರ ಕುರಿತಾದ ರಾಷ್ಟ್ರೀಯ ಆಯೋಗವು ಈ ವಿಭಾಗದ ಸುರಕ್ಷತಾ ಕ್ರಮಗಳ ಬಗ್ಗೆ ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚಿಸಿ ಹಲವು ಮಹತ್ವದ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತ್ತು.
- ಆದರೆ ಆ ಶಿಫಾರಸ್ಸುಗಳನ್ನು ಜಾರಿ ಮಾಡಲು ಅದಕ್ಕೆ ಹಣ ವಿನಿಯೋಗಿಸಲು ಯುಪಿಎ ಸರ್ಕಾರ ನಿರಾಕರಿಸಿತು. ಬದಲಾಗಿ ಆ ಬಗ್ಗೆ ಕರಡನ್ನು ತಯಾರಿಸಿ ಅದನ್ನು ಸಂಸತ್ತಿನ ಸ್ಥಾಯಿ ಸಮಿತಿಗೆ ವಹಿಸಿತು. ಆದರೆ ಸಂಸತ್ತಿನ ಸ್ಥಾಯಿ ಸಮಿತಿ ಸರ್ಕಾರದ ಅಣತಿಯಂತಿದ್ದ ಆ ಕರಡನ್ನು ತಿರಸ್ಕರಿಸಿ, ಆಯೋಗದ ಶಿಫಾರಸ್ಸುಗಳನ್ನೊಳಗೊಂಡ ಹೊಸ ಕರಡು ರಚಿಸಲು ಸೂಚಿಸಿತು.
- ಆದರೆ ಸರ್ಕಾರ ಕೇವಲ ಕಣ್ಣೊರೆಸುವ ಸಲುವಾಗಿ ಒಂದು ಕಾನೂನು ತರಲು ಹೊರಟಿದೆ. ಅದರ ಪ್ರಕಾರ ಕೇವಲ ಬಿಪಿಎಲ್ ಚೀಟಿ ಹೊಂದಿದವರಿಗೆ ಮಾತ್ರ ಕೆಲವು ಸವಲತ್ತು ನೀಡಲಾಗಿದೆ. ವಿಪರ್ಯಾಸವೆಂದರೆ ನಮ್ಮ ದೇಶದ ಬಹುಪಾಲು ದಿನನಿತ್ಯ ಬಿಪಿಎಲ್ ಕಾರ್ಡ್‌ಗಳಿಗಾಗಿಯೇ ಹೋರಾಡುತ್ತಿದ್ದಾರೆ.
- ಈಗ ತಂದಿರುವ ಕಾನೂನಿನಿಂದ ಅಸಂಘಟಿತ ಕಾರ್ಮಿಕರ ಪ್ರಶ್ನೆಯನ್ನು ಬಗೆಹರಿಸಲು ಸಾಧ್ಯವೇ ಇಲ್ಲ. ಈ ಕಾಯ್ದೆಯ ಸಾಮಾಜಿಕ ಸುರಕ್ಷಾ ಕೆಲಸಗಳಿಗಾಗಿ ಮೀಸಲಿರಿಸಬೇಕಾದ ನಿಧಿಯ ಬಗೆ ಏನನ್ನೂ ಹೇಳುತ್ತಿಲ್ಲ.
- ಇನ್ನೂ ದೇಶದ ಕೋಟ್ಯಾಂತರ ಕೃಷಿ ಕೂಲಿಕಾರರಗಾಗಿಯೇ 'ಸಮಗ್ರ ಶಾಸನ ತರುವ



ಭರವಸೆಯನ್ನು ಯುಪಿಎ ತನ್ನ ಎನ್‌ಸಿಎಂಪಿಯಲ್ಲಿ ಹೇಳಿತ್ತು. ಆದರೆ ಅದನ್ನು ಮರತೆಬಿಟ್ಟಿತು ಈ ಯುಪಿಎ ಸರ್ಕಾರ.

ಆರೋಪ ನಾಲ್ಕು: ದುಡಿಯುವ ಮಹಿಳೆಯರ ಮೇಲೆ ಹೆಚ್ಚಿದ ಧಾಳಿಗಳು

- ಬಹು ಸಂಖ್ಯೆಯಲ್ಲಿರುವ ದುಡಿಯುವ ಮಹಿಳೆಯರ ಬಗ್ಗೆ ಯುಪಿಎ ಸರ್ಕಾರ ಅತ್ಯಂತ ಕಠೋರ ನಿಲುವು ತಾಳಿತ್ತು.
- ಅಂಗನವಾಡಿ ಬಿಸಿಯೂಟ ಕಾರ್ಯಕರ್ತೆಯರಿಗೆ ಅತ್ಯಂತ ಕಡಿಮೆ ಸಂಬಳ ನೀಡಿ ಅತಿಯಾದ ಕೆಲಸದ ಹೊರೆ ಹೇರಲಾಯಿತು.
- ಆದರೆ ಅವರಿಗೆ ನಿಮ್ಮ ಸರ್ಕಾರ ಕನಿಷ್ಠ ಸವಲತ್ತು ನೀಡಲಿಲ್ಲ.
- ಬಹುಪಾಲು ಗ್ರಾಮೀಣ ಮಹಿಳೆಯ ಆರೋಗ್ಯಕ್ಕಾಗಿ ದುಡಿಯುತ್ತಿರುವ ಮಹಿಳೆಯರಿಗೆ ಸಿಗುವ ರೂ.600 ಗೌರವಧನವೂ ಸರಿಯಾಗಿ ಸಿಗುತ್ತಿಲ್ಲ. ಶಾಲೆಗಳಲ್ಲಿ ಬಿಸಿಯೂಟ ಮಾಡುತ್ತಿರುವ ಮಹಿಳೆಯರಿಗೆ ನಿಗದಿತ ವೇತನವೆಂಬುದೇ ಇಲ್ಲ.
- ಎರಡು ದಶಕಗಳಿಂದ ದುಡಿಯುತ್ತಿದ್ದರೂ ಅಂಗನವಾಡಿ ನೌಕರರು ಮತ್ತು ಸಹಾಯಕರಿಗೆ ನಿವೃತ್ತಿ ಸಮಯದಲ್ಲಿ ಒಂದು ಪೈಸೆಯು ಸಿಗದಂತ ಧಾರುಣ ಸ್ಥಿತಿ.
- ಇನ್ನೂ ಸಂಘಟಿತ-ಅಸಂಘಟಿತ ವಿಭಾಗ ಎರಡರಲ್ಲೂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು ಹೆಚ್ಚುತ್ತಲೇ ಇದೆ.
- ಸರ್ವೋಚ್ಛ ನ್ಯಾಯಾಲಯವೇ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ನಿಯಮಾವಳಿ ರೂಪಿಸಲು 12 ವರ್ಷಗಳ ಹಿಂದೆಯೇ ಸೂಚಿಸಿತ್ತು.
- ಆದರೆ ಯುಪಿಎ ಸರ್ಕಾರ ಆ ಬಗ್ಗೆ ಯಾವುದೆ ಕಾನೂನು ರೂಪಿಸಲಿಲ್ಲ. ಈಗಲೂ ಅಸಂಖ್ಯಾತ ಯುವತಿಯರು ಐಟಿ ಕ್ಷೇತ್ರದಲ್ಲಿ ರಾತ್ರಿ ಕೆಲಸ ಮಾಡುತ್ತಿದ್ದಾರೆ.
- ಹಲವು ಕಡೆಗಳಲ್ಲಿ ದುಡಿಯುವ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ಹಲ್ಲೆಗಳು, ಕೊಲೆಯಂತಹ ಕೃತ್ಯಗಳು ನಡೆಯುತ್ತಿದ್ದರೂ ಸರ್ಕಾರ ಮಾತ್ರ ಅವುಗಳನ್ನು ತಡೆಯುವ ಪ್ರಯತ್ನ ಮಾಡಲಿಲ್ಲ.

ಆರೋಪ ಐದು: ನಮ್ಮ ಭವಿಷ್ಯನಿಧಿ ನಿವೃತ್ತಿ ವೇತನವನ್ನು ಕಿತ್ತುಕೊಂಡಿರಿ

- ದೇಶದಲ್ಲಿ ಪಿಎಫ್ ಸೌಲಭ್ಯ ಪಡೆಯುತ್ತಿರುವ ಕಾರ್ಮಿಕರ ಸಂಖ್ಯೆ ಕೇವಲ 4 ಕೋಟಿ ಮಾತ್ರ.
- ಫಿಮಾಸ್‌ಗೆ ಒಳಪಡಲು ಇರುವ ಮಿತಿಯನ್ನು 20 ರಿಂದ 10ಕ್ಕೆ ಇಳಿಸಬೇಕೆಂಬುದು ಕಾರ್ಮಿಕ ವರ್ಗದ ಹಲವು ದಶಕಗಳ ಬೇಡಿಕೆ.
- ಈ ಬಗ್ಗೆ ಯುಪಿಎ ಸರ್ಕಾರ ಕ್ರಮ ಕೈಗೊಂಡಿದ್ದರೂ ಅದನ್ನು ಕೇವಲ ಕಾಗದದಲ್ಲಿ ಮಾತ್ರ ಇದೆ.
- ಹಿಂದಿದ್ದ ಎನ್‌ಡಿಎ ಮತ್ತು ಈಗಿನ ಯುಪಿಎ ಸರ್ಕಾರಗಳು ಶೇ.12 ರಷ್ಟಿದ್ದ ಪಿಎಫ್ ಬಡ್ಡಿದರವನ್ನು ಶೇ.8.5ಕ್ಕೆ ಇಳಿಸಿದವು. ಆದರೆ ಇನ್ನೂ ಕೆಳಗಿಳಿಸಬೇಕು ಎನ್ನುವ ಸರ್ಕಾರದ ಪ್ರಯತ್ನಕ್ಕೆ ಕಾರ್ಮಿಕ ಸಂಘಗಳು, ಎಡಪಕ್ಷಗಳು ತಡೆ ಮಾಡಿದ್ದವು.
- ಬಾರೀ ಪ್ರಮಾಣದಲ್ಲಿ ಶೇಖರವಾಗಿರುವ ಪಿಎಫ್ ಹಣದ ಬಹುಭಾಗವನ್ನು ಇತರೆ ಯೋಜನೆಗಳಲ್ಲಿ ತೊಡಗಿಸಿದಿರಿ.
- ಮಾಲೀಕರಿಗೆ ಮಾತ್ರ ಅತಿ ಕಡಿಮೆ ಬಡ್ಡಿದರದಲ್ಲಿ ಸಾಲ, ಮತ್ತಿತರೆ ಭಾರಿ ಕೊಡುಗೆಗಳನ್ನು ನೀಡಿದಿರಿ. ಆದರೆ ಕಾರ್ಮಿಕರಿಗೆ ಸಿಗುತ್ತಿರುವುದ ವೃದ್ಧಾಪ್ಯ ಸೌಲಭ್ಯ ಮಾತ್ರ. ಅದು ಅತ್ಯಂತ ಕಡಿಮೆ ದರದಲ್ಲಿ.
- ನೀವು ಜಾರಿ ಮಾಡಿದ ಇಪಿಎಸ್-95 ಯೋಜನೆಯಿಂದ ಮಾಲೀಕರು ಹಣ ನೀಡುತ್ತಿಲ್ಲ ಎಂಬ ಕಾರಣದಿಂದ ಒಂದು ಕೋಟಿಗಿಂತ ಹೆಚ್ಚಿನ ಕಾರ್ಮಿಕರನ್ನು ಹೊರಗಿಟ್ಟಿದ್ದೀರಿ.
- ಇಪಿಎಸ್-95 ಯೋಜನೆ ಎನ್ನುವುದು ಕಾರ್ಮಿಕರಿಗೆ ಬರೀ ಮೋಸ.
- ಕಾರ್ಮಿಕ ವರ್ಗದ ತೀವ್ರ ವಿರೋಧದ ನಡುವೆಯೂ ಕೋಟ್ಯಾಂತರ ಪಿಎಫ್ ಹಣವನ್ನು ನಾಚಿಕೆಯಿಲ್ಲದೆ ಹೆಚ್‌ಎಸ್‌ಬಿಸಿ, ರಿಲೆಯನ್ಸ್, ಕ್ಯಾಪಿಟೆಲ್, ಐಸಿಐಸಿಐ ಪ್ರಾವಿಡೆಂಟ್‌ಗಳ ಮೂಲಕ ಷೇರು ಮಾರುಕಟ್ಟೆಗೆ ಬಿಟ್ಟು ಕಾರ್ಮಿಕರ ಬೆವರಿನ ಉಳಿತಾಯದ ಹಣವನ್ನು ಜೂಜಾಟಕ್ಕೆ ತೊಡಗಿಸಿದಿರಿ.
- ಎಡಪಕ್ಷಗಳು ಕೇಂದ್ರ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದ ನಂತರವಷ್ಟೇ ಈ ಕ್ರಮಕ್ಕೆ ಮುಂದಾಗಲು ನಿಮಗೆ ಸಾಧ್ಯವಾಯಿತು.



ಎಡಪಕ್ಷಗಳು ನಿರ್ವಹಿಸಿದ ಜವಾಬ್ದಾರಿಯುತ ಪಾತ್ರ

ಈ ಅವಧಿಯಲ್ಲಿ ದೇಶದ ಕಾರ್ಮಿಕ ವರ್ಗದ ಮೇಲಾಗುತ್ತಿರುವ ಧಾಳಿಗಳ ವಿರುದ್ಧ ಸಂಸತ್ತಿನ ಒಳಗೆ ಮತ್ತು ಹೊರಗೂ ನಿರಂತರ ಹೋರಾಡಿದ್ದು, ಚಳುವಳಿ ನಡೆಸಿದ್ದು, ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳು ಮಾತ್ರ. ಅವುಗಳ ಹೋರಾಟ ಮಾತ್ರವೇ ಇಂದು ದೇಶವನ್ನು ಭಾರತದ ಆರ್ಥಿಕತೆಯನ್ನು ದಿವಾಳಿ ಅಂಚಿನಿಂದ ಪಾರು ಮಾಡಿದೆ.

ಸಾರ್ವಜನಿಕ ಉದ್ದಿಮೆಗಳ ರಕ್ಷಣೆ


- ಈ ಅವಧಿಯಲ್ಲಿ ಸಾರ್ವಜನಿಕ ಕ್ಷೇತ್ರಗಳ 'ನವರತ್ನ' ಗಳಲ್ಲಿ ಒಂದೇ ಒಂದನ್ನು ಖಾಸಗೀಕರಿಸಲು ಎಡಪಕ್ಷಗಳು ಬಿಡಲಿಲ್ಲ. ಇದೊಂದು ಐತಿಹಾಸಿಕ ಪಾತ್ರ.
- ಹಿಂದಿನ ಎನ್‌ಡಿಎ ಸರ್ಕಾರದ ನೀತಿಗಳನ್ನೇ ಅನುಸರಿಸಿ ಯುಪಿಎ ಸರ್ಕಾರ 'ನವರತ್ನ'ಗಳಲ್ಲಿ ಒಂದಾದ ಬಿಹೆಚ್‌ಇಎಲ್‌ನ ಷೇರು ವಿಕ್ರಯಕ್ಕೆ ಮುಂದಾಯಿತು. ಆದರೆ ಎಡಪಕ್ಷಗಳು ಹೋರಾಟ ಮಾಡಿ ಅದಕ್ಕೆ ಅವಕಾಶವನ್ನು ಕೊಡಲಿಲ್ಲ.
- ಇದೇ ಅವಧಿಯಲ್ಲಿ ಲಾಭದಾಯಕವಾಗಿದ್ದ 4 ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸುವ ತೀರ್ಮಾನ ಮಾಡಿತ್ತು. ಆದರೆ ಎಡಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದವು. ಕೊನೆಗೆ ನಾಲ್ಕರ ಬದಲು ಅದನ್ನು ಎರಡಕ್ಕಿಳಿಸಿತು. ಅದಕ್ಕೂ ಎಡಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದವು.
- ಖಾಸಗೀಕರಣದ ವಿರುದ್ಧ ವಿಮಾನ ನಿಲ್ದಾಣ ನೌಕರರು ಹೋರಾಟಕ್ಕಿಳಿದರು. ಅದರ ವಿರುದ್ಧ ಸರ್ಕಾರ 'ಎಸ್ಮಾ' ಜಾರಿ ಮಾಡಲು ಹೊರಟಿತು. ಆದರೆ ಎಡಪಕ್ಷಗಳು ನೌಕರರೊಂದಿಗೆ ಮಾತುಕತೆ ನಡೆಸಲು ಒತ್ತಡ ಹೇರಿದವು.
- ಆದರೆ ಸರ್ಕಾರ ಅಂದು ನೀಡಿದ್ದ ಭರವಸೆಯನ್ನು ಇಂದು ಮರೆತ ಸರ್ಕಾರ ಅಲ್ಲಿನ ನೌಕರರನ್ನು ಕೆಲಸದಿಂದ ತೆಗೆದುಹಾಕಿ ತಾನು ನೀಡಿದ್ದ ಭರವಸೆಯನ್ನು ಉಲ್ಲಂಘಿಸಿದೆ. ಇದರಿಂದಾಗಿ ಮುಂಬೈ ದೆಹಲಿ ನಿಲ್ದಾಣಗಳ ಬಹುತೇಕ ನೌಕರರು ತೊಂದರೆಗೆ ಸಿಲುಕಿದ್ದಾರೆ.
- ತಮಿಳುನಾಡಿನ ನವೇಲಿ ಮತ್ತು ನಾಲ್ಕೋ ಉದ್ದಿಮೆಗಳ ಖಾಸಗೀಕರಣಕ್ಕೂ ಎಡಪಕ್ಷಗಳು ತಡೆಯೊಡ್ಡಿದವು.

ಪುಟ 11ಕ್ಕೆ

ಬ್ಯಾಂಕ್ ವಿಮಾ ಉಳಿದಿದ್ದು ಎಡಪಕ್ಷಗಳಿಂದ

- ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ(ಎಫ್‌ಡಿಐ)ಕ್ಕೆ ಅವಕಾಶ ನೀಡಲು ಕಾನೂನು ರೂಪಿಸಲು ಭಾರಿ ಪ್ರಯತ್ನವನ್ನೇ ಮಾಡಿತು. ಒಂದು ವೇಳೆ ಅದಕ್ಕೆ ಅವಕಾಶ ಸಿಕ್ಕಿದ್ದರೆ, ಇವತ್ತು ಬಂಡವಾಳಶಾಹಿ ಜಗತ್ತಿನಲ್ಲಿ ಹೇಗೆಲ್ಲಾ ಬ್ಯಾಂಕಿಂಗ್, ಹಣಕಾಸು ಕ್ಷೇತ್ರ ದಿವಾಳಿಯಾಗಿವೆಯೂ ಅದೇ ಸ್ಥಿತಿ ಭಾರತದ ಹಣಕಾಸು ವಲಯಕ್ಕೂ ಬರುತ್ತಿತ್ತು.
- ಹಾಗಾಗಿಯೇ ಎಡಪಕ್ಷಗಳು ವಿಮಾ ಕ್ಷೇತ್ರದಲ್ಲಿ ಶೇ.26 ರಿಂದ ಶೇ.49ಕ್ಕೆ ನೇರ ಬಂಡವಾಳಕ್ಕೆ ಅವಕಾಶ ನೀಡಲಿಲ್ಲ.
- ಮುಕ್ತ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅದರ ಪ್ರಾತಿನಿಧ್ಯ ಶೇ.74 ರಷ್ಟಕ್ಕೆ ಸೀಮಿತಗೊಳಿಸಲು ಸಾಧ್ಯವಾಗಿತ್ತು.
- ಈ ಎರಡೂ ಕಾನೂನುಗಳನ್ನು 'ದೇಶದ ಹಿತಾಸಕ್ತಿ' ಯಿಂದಾಗಿ ಎಡಪಕ್ಷಗಳು ಜಾರಿಗೊಳಿಸಲು ಬಿಡಲಿಲ್ಲ.

ನರೇಂದ್ರಮೋದಿ ನಾಯಕತ್ವದಡಿಯಲ್ಲಿ ಗುಜರಾತ್ ಬಾರಿ ಅಭಿವೃದ್ಧಿಯಾಗಿದೆ. ಗುಜರಾತ್ ದೇಶಕ್ಕೇ ಮಾದರಿ. ಮೋದಿ ಇಂದಲ್ಲ ನಾಳೆ ದೇಶದ ಪ್ರಧಾನಿ ಆಗಬೇಕು ಎಂಬ ವ್ಯವಸ್ಥಿತ ಪ್ರಚಾರವೊಂದು ನಡೆಯುತ್ತಿದೆ. ಗುಜರಾತಿನಲ್ಲಿ ಆಗಿರುವ ಅಭಿವೃದ್ಧಿ ನಿಜರೂಪವೇನು? ಅಲ್ಲಿನ ಜನರ ಬದುಕು ಹೇಗಿದೆ



ಫ್ಯಾಸಿಸ್ಟ್ ಮೋದಿಯ ಗುಜರಾತ್ ಹೊಳೆಯುತ್ತಿದೆಯೋ ಇಲ್ಲ ಜನರನ್ನು ಸುಡುತ್ತಿದೆಯೋ ?

ಫ್ಯಾಸಿಸ್ಟ್ ಮೋದಿಯನ್ನು ಪ್ರಧಾನಮಂತ್ರಿ ಮಾಡಹೊರಟವರು :

ಇತ್ತೀಚೆಗೆ ಗುಜರಾತಿನ ಮೋದಿ ಸರ್ಕಾರ ಬಂಡವಾಳ ಹೂಡಿಕೆದಾರರ ಸಮಾವೇಶ ಏರ್ಪಡಿಸಿತ್ತು. ಅದರಲ್ಲಿ ಸುಮಾರು ರೂ. 12,50,000 ಕೋಟಿ ಬಂಡವಾಳ ಹೂಡಿಕೆಯಾಗಿದೆಯೆಂದು, ಇದು ಇನ್ನುಳಿದೆಲ್ಲ ರಾಜ್ಯ ಸರ್ಕಾರಗಳಿಗೆ ಹೋಲಿಸಿದಲ್ಲಿ ಅತಿ ದೊಡ್ಡ ಮೊತ್ತದ ಬಂಡವಾಳ ಹೂಡಿಕೆ ರಾಜ್ಯವೆಂದು, ಹಲವು ಪ್ರಮುಖವಾಹಿನಿ ದಿನಪತ್ರಿಕೆಗಳಲ್ಲಿ ಸುದ್ದಿ ರಾರಾಜಿಸಿತ್ತು.

ಈ ಸಮಾವೇಶದಲ್ಲಿ ಭಾಗವಹಿಸಿದ್ದ ಹಲವು ದಿಗ್ಗಜ ಬಂಡವಾಳ ಹೂಡಿಕೆದಾರರ ಪೈಕಿ ಪ್ರಮುಖವಾಗಿ ಟಾಟಾ, ಅಂಬಾನಿ ಮತ್ತು ಮಿತ್ತಲ್‌ಗಳು ಪೈಪೋಟಿಗೆ ಬಿದ್ದವರಂತೆ ನರೇಂದ್ರ ಮೋದಿಯನ್ನು 'ಮಹಾನ್ ದೂರದೃಷ್ಟಿಯುಳ್ಳ ನಾಯಕ' ಉದಾರವಾದಿ, ಇತ್ಯಾದಿಯೆಂದು ನಾಯಕತ್ವದ ಗುಣಗಾನ ಮಾಡಿದರಷ್ಟೇ ಅಲ್ಲ, ಮೋದಿಯು ಪ್ರಧಾನಮಂತ್ರಿಯಾಗುವ ಎಲ್ಲ ಸಾಮರ್ಥ್ಯ ಮತ್ತು ಅರ್ಹತೆಗಳನ್ನು ಹೊಂದಿದ್ದಾರೆಂದು ಸರ್ಟಿಫಿಕೇಟ್ ಕೂಡ ನೀಡಿದರು ಎನ್ನುವುದಕ್ಕಿಂತ ಮೋದಿ ಪ್ರಧಾನಮಂತ್ರಿಯಾಗುವುದನ್ನು ಬಯಸಿದರು ಎಂದರೆ ಸರಿಯಾದೀತು !

ಮತ್ತೊಂದು ಕಡೆ, ಈ ಹಿಂದೆಯೆಲ್ಲ ನಮ್ಮದೇ ರಾಜ್ಯದಲ್ಲಿ ತಾವೇನಾದರೂ ಅಧಿಕಾರಕ್ಕೆ ಬಂದರೆ ರಾಮ ರಾಜ್ಯ ಮಾಡುತ್ತೇವೆಂದು (ರಾಮರಾಜ್ಯದಲ್ಲಿ ಸಾಮಾನ್ಯ ಜನರ ಪಾಡೆಂಥದು ಎಂಬುದನ್ನು ಮಾತ್ರ ಅವರು ವಿವರಿಸುವ ಗೋಜಿಗೆ ಹೋಗುವುದಿಲ್ಲ!) ಮಾತುಗಳನ್ನು ಉದ್ಧರಿಸುತ್ತಿದ್ದ ಬಿಜೆಪಿ ಇತ್ತೀಚಿಗೆ ನಮ್ಮದು 'ಮೋದಿ ಮಾದರಿ', 'ಗುಜರಾತ್ ಮಾದರಿ' ಎಂದು ಟ್ಯೂನ್ ಬದಲಾಯಿಸಿದೆ.

ಗುಜರಾತಿನ ಕರ್ಮಕಾಂಡ :

2002ರಲ್ಲಿ ಮೋದಿ ಸರ್ಕಾರದ ನಾಯಕತ್ವದಲ್ಲಿ ಸುಮಾರು 1000ಕ್ಕೂ ಹೆಚ್ಚು ಮುಸ್ಲಿಮರ ಮಾರಣಹೋಮ ನಡೆಸಿದ 'ಪ್ರಭುತ್ವ ಪ್ರಾಯೋಜಿತ ಭಯೋತ್ಪಾದನೆ' ಯ ಫಲಶ್ರುತಿಯಿಂದ 2.0ಲಕ್ಷ ಮುಸ್ಲಿಮರು ಇನ್ನೂ ನಿರಾಶ್ರಿತರಾಗಿಯೇ ನಿರಾಶ್ರಿತ ಶಿಬಿರಗಳಲ್ಲಿ ಕಾಲನೂಕುತ್ತಿದ್ದಾರೆ.



ರಾಷ್ಟ್ರೀಯ ಮಾದರಿ ಸಂಗ್ರಹಣೆ ಸಂಸ್ಥೆ (NSSO) ಪ್ರಕಾರ 1999-2000 ದಿಂದ 2004-05 ರವರೆಗೆ ಗ್ರಾಮೀಣ ಪ್ರದೇಶದ ಜನತೆಯ ತಲಾದಾಯ ಹೆಚ್ಚಾಗಿಲ್ಲ. ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ ಪ್ರಕಾರ ಗುಜರಾತ್ ರಾಜ್ಯದ ಮೂಲ ಆರೋಗ್ಯ ಮತ್ತು ಪೌಷ್ಟಿಕಾಂಶ ಸೂಚಕಗಳು ಅಧೋಗತಿಯಲ್ಲಿವೆ. ಉದಾಹರಣೆಗೆ, 2005-06ರಲ್ಲಿ ಶೇ. 47ರಷ್ಟು ಮಕ್ಕಳು ಪೌಷ್ಟಿಕಾಂಶ ಕೊರತೆಯಿಂದ ಬಳಲುತ್ತಿದ್ದರು. ಇದು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿನ ಪ್ರಮಾಣದ್ದು. 4ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ. 80 ರಷ್ಟು ಮಕ್ಕಳು ರಕ್ತಹೀನತೆಯನ್ನು ಹೊಂದಿದ್ದರು. 12 ರಿಂದ 23 ತಿಂಗಳು ವಯಸ್ಸಿನ ಬಹುತೇಕ ಅರ್ಧದಷ್ಟು ಮಕ್ಕಳಿಗೆ ಲಸಿಕೆಯನ್ನೇ ಹಾಕಿರಲಿಲ್ಲ. ಶೇ. 60ಕ್ಕೂ ಹೆಚ್ಚಿನ ಗರ್ಭಿಣಿಯರು ಪೌಷ್ಟಿಕಾಂಶ ಕೊರತೆಯಿಂದಾಗಿ ನಿಶ್ಯಕ್ತಿ ಸಮಸ್ಯೆ ಹೊಂದಿದ್ದರು. ಶೇ. 60ರಷ್ಟು ಗ್ರಾಮೀಣ ಹೆರಿಗೆಗಳಿಗೆ ಆಸ್ಪತ್ರೆ ಸೌಲಭ್ಯವೇ ಇಲ್ಲ. ಇವೆಲ್ಲ ಅಂಕಿಅಂಶಗಳು ಬರೇ ಮುಸ್ಲಿಮರನ್ನು ಕುರಿತದ್ದು ಮಾತ್ರವೇ ಅಲ್ಲ, ಇದರಲ್ಲಿ ಮೋದಿ ಮತ್ತು ಅವರ ಪಕ್ಷವ ಓಲೈಸುವ ಅಮಾಯಕ ಹಿಂದೂಗಳು ಸೇರಿದ್ದಾರೆ.

ಆದರೆ ಬಂಡವಾಳಿಗರ ಕಣ್ಣಿಗೆ ಇವೆಲ್ಲ ಭೀಕರ ಕ್ರೌರ್ಯಗಳು ಬೀಳುವುದೇ ಇಲ್ಲ. ರಕ್ತದ ರುಚಿಕಂಡ ಚಿರತೆಯು ಹಾಗೆ ಲಾಭದ ಬೆನ್ನುಹತ್ತಿರುವ ಬಂಡವಾಳಿಗರ ಕೂಟ ತಾವು ಲಾಭ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವ ರಾಜಕೀಯ ನಾಯಕರು ಮತ್ತು ಪಕ್ಷಗಳು ಸಿಕ್ಕಾಗೆಲ್ಲ ಅವರ ಹೆಗಲಿಗೆ ಹೆಗಲು ಕೊಡುವುದು ಹೊಸತೇನಲ್ಲ. ಅನಿಶ್ಚಿತ ಭವಿಷ್ಯದ ಬದಲು ಬಂಡವಾಳಿಗರಿಗೆ ಬೇಕಿರುವುದು ಬಂಡವಾಳ ಸಾಗರದಂತೆ ಹರಿದು ಲಾಭಗಳಿಸಲು ಅನಿರ್ಬಂಧಿತ ಮತ್ತು ಮುಕ್ತ ವಾತಾವರಣ, ಸರ್ಕಾರದಿಂದ ತೆರಿಗೆ ವಿನಾಯಿತಿ, ಸಹಾಯಧನ, ಕಾರ್ಮಿಕರನ್ನು ಮನಸೋಇಚ್ಛೆ ಕೆಲಸದಿಂದ ತೆಗೆದುಬಿಸಾಡಲು ಪೂರ್ಣ ಸ್ವಾತಂತ್ರ್ಯ. ಬಂಡವಾಳಕ್ಕೆ ಇವಿಷ್ಟು ವಾತಾವರಣ ಕಲ್ಪಿಸಿಕೊಡಲು ಸಾಧ್ಯವಿರುವುದು



ಸರ್ವಾಧಿಕಾರಿಗಳಿಗೆ ಮಾತ್ರ. ಆದಕ್ಕಾಗಿ ಬಂಡವಾಳ ಬಯಸುವುದು ಸರ್ವಾಧಿಕಾರಿಗಳನ್ನೇ.

ಅಲ್ಲಿ ಹೂಡಿಕೆಯಾಗುವ ಬಂಡವಾಳ ಜನರ ಅಭಿವೃದ್ಧಿಗೆ ಸಹಕಾರಿ ಯಾಗಿದೆಯೇ?

ವಾಸ್ತವವಾಗಿ ಗುಜರಾತ್ ಒಂದು ಸಂಪನ್ಮೂಲ ಶ್ರೀಮಂತ ರಾಜ್ಯ. ಅರಬ್ಬಿ ಸಮುದ್ರದ ಆಯಕಟ್ಟಿನ ಜಾಗವನ್ನು ಹೊಂದಿರುವ ಅದು ಭಾವ್‌ನಗರದಲ್ಲಿ ಇಡೀ ಭಾರತದಲ್ಲೇ ಅತಿ ದೊಡ್ಡ ಹಡಗು ನಿರ್ಮಾಣ ಮತ್ತು ನಿಲ್ದಾಣ ಎರಡನ್ನೂ ಹೊಂದಿದೆ. ಜಾಮ್‌ನಗರದಲ್ಲಿ ದೈತ್ಯ ರಿಲಾಯನ್ಸ್ ಕಂಪನಿಯು ಅತಿದೊಡ್ಡ ಪೆಟ್ರೋಲಿಯಂ ಉತ್ಪನ್ನ ಕಾರ್ಖಾನೆ ಹೊಂದಿದೆ. ಈ ಕಾರಣಗಳಿಗಾಗಿ ಅದು ದೇಶದ ಶೇ. 49ರಷ್ಟು ಪೆಟ್ರೋಲಿಯಂ ಅನ್ನು ಸಂಸ್ಕರಣ ಮಾಡುತ್ತಿರುವುದು ಮೋದಿ ಅಧಿಕಾರಕ್ಕೆ ಬರುವ ಮೊದಲೇ ಬಂಡವಾಳ ಹೂಡಿಕೆಯಲ್ಲಿ 1990ರಲ್ಲಿ ಅದು ಭಾರತದಲ್ಲೇ ಮೂರನೇ ಸ್ಥಾನದಲ್ಲಿತ್ತು. ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಬಹುತೇಕ ರಾಜ್ಯಗಳು ಅನುಸರಿಸುತ್ತಿರುವ ಪೈಪೋಟಿಯಿಂದ ಜನತೆಗೆ ಅದೆಷ್ಟು ಪ್ರಯೋಜನವೆಂಬುದು ಬೇರೆ ಪ್ರಶ್ನೆ. ಜೊತೆಗೆ ಹೂಡಿಕೆಯಾದ ಬಂಡವಾಳವು ಅಲ್ಲಿನ ಜನತೆಯ ಜೀವನಾಧಾರಕ್ಕೆ ಆಸರೆಯಾಗಿದೆಯೇ ಎಂಬುದು ಮತ್ತೊಂದು ಪ್ರಶ್ನೆ. ಅಲ್ಲದೆ ಬಂಡವಾಳಿಗರು ಹೂಡಿಕೆದಾರರ ಸಮಾವೇಶದಲ್ಲಿ ಬಂದು ಆಶ್ವಾಸನೆ ನೀಡ... ಬಂಡವಾಳದಲ್ಲಿ ವಾಸ್ತವವಾಗಿ ಹೂಡಿಕೆಯಾ... ಬಂಡವಾಳದ ಪ್ರಮಾಣ ಶೇ. 30 ರಿಂದ 40 ಅಷ್ಟೆ.

ಹೀಗೆ ಸರ್ಕಾರದ ಸಂಪೂರ್ಣ ಸೌಲಭ್ಯ ಪಡೆದು ಸ್ಥಾಪಿತವಾಗುವ ಕೈಗಾರಿಕೆಗಳಲ್ಲಿ ಅಲ್ಲಿ ದುಡಿಯುವ ಕಾರ್ಮಿಕ ಸ್ಥಿತಿಗತಿ ಕೇಳಿದರೆ ನಡುಕವುಂಟಾಗುತ್ತದೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಫಲವಾಗಿ ಅಲ್ಲಿನ ವಜ್ರ ಮತ್ತು ಆಭರಣ ಕೈಗಾರಿಕೆ, ಸಿದ್ಧ ಉಡುಪು, ಚರ್ಮ ಕೈಗಾರಿಕೆ, ಇತ್ಯಾದಿಗಳ ರಫ್ತು ಪ್ರಮಾಣ ನೆಲಕಚ್ಚಿದ್ದು ಆ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ತೀವ್ರ ಸಂಕಷ್ಟದಲ್ಲಿದ್ದಾರೆ. ಕೆಲವು ವಾರಗಳ ಹಿಂದೆಯಷ್ಟೆ ವಜ್ರ ಕೈಗಾರಿಕೆಯಲ್ಲಿನ ಸುಮಾರು 71 ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಲ್ಲಿ ಕಾರ್ಮಿಕ ಕಾನೂನುಗಳು ಹಲ್ಲಿಲ್ಲದ ಹಾವಿನಂತಾಗಿದ್ದು ಮಾಲೀಕರ ಪರವಾಗಿವೆ. ಆ ರಾಜ್ಯ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೇರಳ, ಪಂಜಾಬ್, ತಮಿಳುನಾಡು, ಮಹಾರಾಷ್ಟ್ರ, ಇತ್ಯಾದಿ ರಾಜ್ಯಗಳಿಗಿಂತಲೂ ಕೆಳಗಿನ ಸ್ಥಾನದಲ್ಲಿದೆ. 2008ರಲ್ಲಿ ಅಂತರಾಷ್ಟ್ರೀಯ ಆಹಾರ ನೀತಿ ಸಂಶೋಧನಾ... ಪ್ರಕಟಿಸಿರುವ ವರದಿ ಪ್ರಕಾರ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಗುಜರಾತ್ 69ನೇ ಸ್ಥಾನದಲ್ಲಿದ್ದು, ಇದು ಹೈಟಿಯಂತಹ ದೇಶಕ್ಕಿಂತಲೂ ಕೆಳಮಟ್ಟದಲ್ಲಿದೆ. ಹೈಟಿಯಲ್ಲಿ ಆಹಾರಕ್ಕಾಗಿ ದೊಡ್ಡ ಕಲಹಗಳೇ ಜರುಗಿ ಹತ್ಯೆಗಳು ಸಂಭವಿಸುತ್ತವೆಂಬುದನ್ನು ನಾವಿಲ್ಲಿ ಸ್ಮರಿಸಬಹುದು.

ಅತಿ ದೊಡ್ಡ ಸಾಲಗಾರ ರಾಜ್ಯ ಗುಜರಾತ್:

2005ರಲ್ಲಿ ರೂ. 70,228ರಷ್ಟು ಸಾಲ ಪಡೆದಿದ್ದ ಗುಜರಾತ್, 2008ರಲ್ಲಿ ರೂ. 95,000 ಕೋಟಿ ಸಾಲ ಪಡೆದು ಅತಿ ದೊಡ್ಡ ಸಾಲಗಾರ ರಾಜ್ಯವಾಗಿ ಹೊರಹೊಮ್ಮಿದೆ. ಅಲ್ಲಿನ 5 ಕೋಟಿ ಜನತೆಗೆ ಪ್ರತಿಯೊಬ್ಬರ ಮೇಲೂ ರೂ. 19,000 ರೂಪಾಯಿ ಸಾಲವಿದೆ.

ಬಡತನವನ್ನು ಕಡಿಮೆಗೊಳಿಸುವ ನವನವೀನ ವಿಧಾನವನ್ನೇ ಗುಜರಾತ್ ಆವಿಷ್ಕರಿಸಿದೆಯೆಂದರೆ ತಪ್ಪಾಗಲಾರದು. ವಿಶ್ವಸಂಸ್ಥೆಯ ಮಾನದಂಡ ಪ್ರಕಾರ ದಿನವೊಂದಕ್ಕೆ 1 ಡಾಲರ್‌ಗಿಂತಲೂ ಕಡಿಮೆ

ಪುಟ 15 ಕ್ಕೆ

...ಯುಪಿಎ ಮಾಡಿದ ವಂಚನೆ ಏನು?

ಪುಟ 9 ರಿಂದ

- ಎನ್‌ಡಿಎ ಅವಧಿಯಲ್ಲಿ ಎಗ್ಗಿಲ್ಲದೆ ಸಾಗಿದ್ದ 'ಸಾರ್ವಜನಿಕ ಉದ್ದಿಮೆಗಳು' ಖಾಸಗೀಕರಣಕ್ಕೆ ಯುಪಿಎ ಅವಧಿಯಲ್ಲಿ ಕಡಿವಾಣ ಹಾಕಲಾಯಿತು.ಇದಕ್ಕೆ ಕಾರಣ ಎಡಪಕ್ಷಗಳೇ.

ಚಿಲ್ಲರೆ ಮಾರಾಟ ರಕ್ಷಣೆ

ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ 'ಜಗತ್ತಿನ ದೈತ್ಯ' ವಾಲ್‌ಮಾರ್ಟ್ ಭಾರತದಲ್ಲಿ ಕಾಲಿಡಲು ಸಾಧ್ಯವಾಗಿಲ್ಲದಿರುವುದು ಎಡಪಕ್ಷಗಳಿಂದಾಗಿಯೇ, ಒಂದು ವೇಳೆ ಅದು ಭಾರತ ಪ್ರವೇಶಿದ್ದರೆ ಕೋಟ್ಯಾಂತರ ಬದುಕನ್ನು ಕಸಿದುಕೊಳ್ಳುತ್ತಿತ್ತು.

ನಿವೃತ್ತಿ ಹಣ ರಕ್ಷಣೆಯಾದದ್ದು

ಕೋಟ್ಯಾಂತರ ಕಾರ್ಮಿಕರ ನೌಕರರ ಬೆವರಿನ ಪಾಲು 'ನಿವೃತ್ತಿ ಹಣ' ವನ್ನು ಷೇರು ಮಾರುಕಟ್ಟೆಗೆ ತೊಡಗಿಸಲು ಯುಪಿಎ ಸರ್ಕಾರ ಹಲವು ...ಗಳನ್ನು ನಡೆಸಿತು. ಆದರೆ ಎಡಪಕ್ಷಗಳು ಅದಕ್ಕೆ ಅವಕಾಶ ನೀಡಲಿಲ್ಲ. ಏತಕ್ಕೆಂದರೆ ಅಮೇರಿಕಾದಲ್ಲಿ ಈ ರೀತಿ ನಿವೃತ್ತಿ ಹಣವನ್ನು ಖಾಸಗೀಕರಣ ಮಾಡಿದ ಪರಿಣಾಮ ಲಕ್ಷಾಂತರ ಜನರು ತಮ್ಮ ನಿವೃತ್ತಿ ನಂತರದ ಬದುಕನ್ನು ಕಳೆದುಕೊಂಡಿದ್ದಾರೆ.

ಕಾರ್ಮಿಕ ಕಾನೂನು ರಕ್ಷಣೆಯಲ್ಲಿ

- ಸಂಸತ್ತಿನ ಪ್ರತಿ ಅಧಿವೇಶನದಲ್ಲೂ ಯುಪಿಎ ಸರ್ಕಾರ ಕಾರ್ಮಿಕರನ್ನು ಮನಬಂದಂತೆ ಕೆಲಸದಿಂದ ಕಿತ್ತುಹಾಕಲು ಮಾಲೀಕರಿಗೆ ಅವಕಾಶ ನೀಡುವ ಶಾಸನ ರೂಪಿಸಲು ಯತ್ನಿಸಿತು. ಹಾಗೆ ಎಡಪಕ್ಷಗಳು ಅಂತಹ ಕಾನೂನು ಸಂಸತ್ತಿನಲ್ಲಿ ಜಾರಿಮಾಡಿದಂತೆ ತಡೆ ಹಿಡಿದವು.

ಎಡ ಸರ್ಕಾರಗಳ ಪರ್ಯಾಯ ಗಳಿವು.. ಸಾರ್ವಜನಿಕ ಕ್ಷೇತ್ರ ರಕ್ಷಣೆಯಿಲ್ಲ.

- 2006ಕ್ಕಿಂತ ಮುಂಚೆ ಕೇರಳದಲ್ಲಿದ್ದ ಯುಡಿಎಫ್ ಸರ್ಕಾರ ಹಲವಾರು ರಾಜ್ಯ ಸರ್ಕಾರದ ಒಡೆತನದ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು ಖಾಸಗೀಕರಿಸಲು ಇಲ್ಲವೇ ಮುಚ್ಚಲು ತೀರ್ಮಾನಿಸಿತ್ತು.
- ಆದರೆ 2006ರಲ್ಲಿ ಅಧಿಕಾರಕ್ಕೆ ಬಂದ ಎಲ್‌ಡಿಎಫ್ ಸರ್ಕಾರ ಕಾಂಗ್ರೆಸ್ ಹಿಂದೆ ಕೈಗೊಂಡಿದ್ದ ನಿರ್ಧಾರವನ್ನು ರದ್ದು ಮಾಡಿತ್ತು.
- ಪಶ್ಚಿಮ ಬಂಗಾಳದಲ್ಲಿ ಅಲ್ಲಿನ ಸರ್ಕಾರ ಲಾಭ ಮಾಡದಿರುವ ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದ ರಾಜ್ಯ ಸರ್ಕಾರಿ ಒಡೆತನದ ಹಲವಾರು ಉದ್ದಿಮೆಗಳು ಲಾಭದಾಯಕವಾಗುವಂತಹ ಕ್ರಮಗಳನ್ನು ಕೈಗೊಂಡಿದೆ.
- ವಿದ್ಯುತ್ ಕ್ಷೇತ್ರಗಳ ಖಾಸಗೀಕರಣಕ್ಕೆ ಕೇಂದ್ರ ಸರ್ಕಾರ ನಿರಂತರ ಒತ್ತಡ ತರುತ್ತಿದ್ದಾಗ್ಯೂ, ಕೇರಳ, ಪಶ್ಚಿಮಬಂಗಾಳ, ತ್ರಿಪುರಾಗಳಲ್ಲಿ ಈಗಲೂ ಈ ಕ್ಷೇತ್ರ ರಾಜ್ಯ ಸರ್ಕಾರದ ಒಡೆತನದಲ್ಲೇ ಇರಿಸುವಲ್ಲಿ ಯಶಸ್ವಿಯಾಗಿವೆ.
- ರೋಗಗ್ರಸ್ತ ಸಾರ್ವಜನಿಕ ಉದ್ದಿಮೆಗಳನ್ನು ಉಳಿಸಿಕೊಳ್ಳುವಲ್ಲಿ ಪಶ್ಚಿಮ ಬಂಗಾಳ- ಕೇರಳ- ರಾಜ್ಯ ಸರ್ಕಾರಗಳು ಕಾರ್ಮಿಕ ಸಂಘಗಳ ಸಹಾಯ ದಿಂದ ಕೇಂದ್ರದ ಮೇಲೆ ಒತ್ತಡ ಹಾಕಿವೆ.

ಕಾರ್ಮಿಕರಿಗಾಗಿ ಯೋಜನೆಗಳು:

- ಪಶ್ಚಿಮಬಂಗಾಳ ಸರ್ಕಾರ ಮುಚ್ಚಿರುವ ಕೈಗಾರಿಕೆಗಳ ಕಾರ್ಮಿಕರಿಗೆ ಪ್ರತಿ ತಿಂಗಳು 1000 ಪರಿಹಾರ ನೀಡುತ್ತಿದೆ.
- ಅಸಂಘಟಿತ ಕಾರ್ಮಿಕರಿಗಾಗಿ ಮತ್ತು ಭೂಹೀನ ಕೃಷಿ ಕಾರ್ಮಿಕರುಗಳಿಗಾಗಿ ಭವಿಷ್ಯ ನಿಧಿ ಯೋಜನೆಯನ್ನು ಪಶ್ಚಿಮಬಂಗಾಳ ಜಾರಿಗೊಳಿಸಿದೆ.

ಆರ್ಥಿಕ ಬಿಕ್ಕಟ್ಟಿಗೆ ವಿಶೇಷ ಪ್ಯಾಕೇಜ್:

- ಜಾಗತಿಕ ಆರ್ಥಿಕ ಕುಸಿತದಿಂದ ತೊಂದರೆ ಗೊಳಗಾಗಿರುವ ಕಾರ್ಮಿಕರಿಗಾಗಿಯೇ ಪಶ್ಚಿಮಬಂಗಾಳ, ಕೇರಳ, ಸರ್ಕಾರಗಳು ವಿಶೇಷ ಪ್ಯಾಕೇಜ್‌ಗಳನ್ನು ಜಾರಿಗೊಳಿಸಿವೆ.
- ಪಶ್ಚಿಮಬಂಗಾಳದಲ್ಲಿ 5106 ಕೋಟಿ ಪ್ಯಾಕೇಜ್ ಘೋಷಣೆ
- ವಸತಿ ಯೋಜನೆ
- ಬಡತನ ರೇಖೆ ಕೆಳಗಿರುವವರಿಗೆ ರೂ.2 ದರದಲ್ಲಿ ಅಕ್ಕಿ
- ಸ್ವಸಹಾಯ ಸಂಘಗಳು ಶೇ.4 ರ ಬಡ್ಡಿದರದಲ್ಲಿ ಸಾಲ.
- ಹೈನುಗಾರಿಕೆ - ತೋಟಗಾರಿಕೆ - ಮೀನುಗಾರಿಕೆಯಲ್ಲಿ ಹೊಸ ಉದ್ಯೋಗಗಳ ಸೃಷ್ಟಿ
- ಕೈಮಗ್ಗ ಉದ್ಯಮಕ್ಕೆ ನೆರವು
- ಭತ್ತ ಮತ್ತಿತರೆ ಆಹಾರ ರಾಜ್ಯಗಳಿಗೆ ಬೆಂಬಲ ಬೆಲೆ, ಶೇಖರಣೆ ಕ್ರಮ
- ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ
- ಭೂ ಬ್ಯಾಂಕ್‌ಗಳ ಸ್ಥಾಪನೆ, ಆ ಮೂಲಕ ಬೃಹತ್ ಕೈಗಾರಿಕೆ, ರಸ್ತೆ ಅಭಿವೃದ್ಧಿ, ಸೇತುವೆ, ಮೆಟ್ರೋ ನಿರ್ಮಾಣ
- 1000 ವೃತ್ತಿ ತರಬೇತಿ ಕಾಲೇಜುಗಳ ಸ್ಥಾಪನೆ
- 50 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ
- ಮದರಸಾಗಳ ಸ್ಥಾಪನೆ
- ಅರೆಕಾಲಿಕಾ ಶಾಲಾ ಶಿಕ್ಷಕರಿಗೆ, ಉಪನ್ಯಾಸಕರಿಗೆ, ಮತ್ತಿತರಿಗೆ ಗೌರವಧನ ಹೆಚ್ಚಳ.

ಕೇರಳದಲ್ಲಿ


- ರೂ.2 ರದಲ್ಲಿ ಅಕ್ಕಿ ವಿತರಣೆ
- ರಾಜ್ಯ ಸರ್ಕಾರದ ನಿವೃತ್ತಿ ವೇತನದಲ್ಲಿ ಹೆಚ್ಚಳ
- 41500 ಕುಟುಂಬಗಳಿಗೆ ವಸತಿ ಸಾಲದಿಂದ ಮುಕ್ತಿ.
- ಮೂಲಸೌಲಭ್ಯಗಳಾದ, ಕುಡಿಯುವ ನೀರು, ನೀರಾವರಿ, ವಸತಿ, ಲೋಕೋಪಯೋಗಿ ಕೆಲಸಗಳಿಗೆ 1,00,000 ಕೋಟಿ ಹಣ ಮೀಸಲು
- ರಾಜ್ಯ ಸರ್ಕಾರಿ ಒಡೆತನದ ಉದ್ದಿಮೆಗಳ ಪುನಶ್ಚೇತನಕ್ಕೆ ರೂ.2 ಕ್ಕೆ ಅಕ್ಕಿ ವಿತರಣೆಯ ಭತ್ತ ಶೇಖರಣೆಗಾಗಿ 800 ಕೋಟಿ ಮೀಸಲು
- ರೈತರ ಸಾಲಕ್ಕಾಗಿ 25 ಕೋಟಿ ಮೀಸಲು
- ಮೀನುಗಾರಿಕೆ ಸಾಲಕ್ಕಾಗಿ 10 ಕೋಟಿ
- ಆರ್ಥಿಕ ಕುಸಿತದಿಂದ ಕೊಲ್ಲಿ ದೇಶಗಳಿಂದ ವಾಪಸಿಸುವ ಕುಟುಂಬಗಳಿಗೆ ನೆರವು.

ಕಾರ್ಮಿಕ ದ್ರೋಹಿ ಎನ್‌ಡಿಎ

ಇದೇ ಅವಧಿಯಲ್ಲಿ ಪ್ರಮುಖ ವಿರೋಧ ಪಕ್ಷದ ಬಿಜೆಪಿ ನೇತೃತ್ವದ ಎನ್‌ಡಿಎ 'ಕಾರ್ಮಿಕ ವಿರೋಧಿ'ಯಾಗಿ ಕೆಲಸ ಮಾಡಿತು.

ಕಾರ್ಮಿಕರ ವಿಚಾರವಾಗಿ ಅದು ಸಂಸತ್ತಿನಲ್ಲಿ ಒಂದೇ ಒಂದು ಪ್ರಶ್ನೆಯನ್ನು ಎತ್ತಲಿಲ್ಲ. ಬದಲಾಗಿ ಅದು ಬಲವಾದ ಆಕ್ಷೇಪಣೆ ಎತ್ತಿದ್ದು ಯಾವುದಕ್ಕೇ ಗೊತ್ತೇ? ಯುಪಿಎ ಸರ್ಕಾರ ಎಡಪಕ್ಷಗಳಿಗೆ ಮಣಿದು 'ಕಾರ್ಮಿಕ ಸುಧಾರಣೆ' ಕಾನೂನು ಜಾರಿ ಮಾಡಲಿಲ್ಲ ಎಂಬುದಕ್ಕೆ ○

ಮೂರನೇ ರಂಗವನ್ನು ಕಟ್ಟುವ ಕೆಲಸ ಕಷ್ಟದ್ದು ಎಂಬುದು ನಿಜ, ಆದರೆ ಜನಸಾಮಾನ್ಯರ ಹಿತ ರಕ್ಷಿಸಲು ಅದು ಆಗುವಂತೆ ಮಾಡಲೇಬೇಕಾಗಿದೆ, ಈಗಲೇ ಮಾಡಬೇಕಾಗಿದೆ ಎಂದು ದೇಶದ ಹಿರಿಯ ಮುತ್ಸದ್ದಿ, ಪಶ್ಚಿಮ ಬಂಗಾಳದಲ್ಲಿ ಸತತ ಇಪ್ಪತ್ತೈದು ವರ್ಷಗಳ ಕಾಲ ಒಂದು ಜನಪರ ಸರಕಾರದ ನೇತೃತ್ವದ ವಹಿಸಿದ್ದ ಜ್ಯೋತಿ ಬಸು ಒಂದು ಸಂದರ್ಶನದಲ್ಲಿ ಹೇಳಿದ್ದಾರೆ. ಆ ಸಂದರ್ಶನದ ಎರಡು ಪ್ರಶ್ನೆಗಳನ್ನು ಇಲ್ಲಿ ಕೊಡುತ್ತಿದ್ದೇವೆ.



ಮೂರನೇ ರಂಗದ ಸರ್ಕಾರ ಈಗಿನ ತುರ್ತು ಅವಶ್ಯಕತೆ

ಜ್ಯೋತಿಬಸು

ಈ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಯಾವ ರೀತಿಯ ಸರಕಾರವನ್ನು ನೀವು ಪ್ರತಿಪಾದಿಸುತ್ತಿದ್ದೀರಿ?

ಜ್ಯೋತಿಬಸು: ನಮಗೆ ಕೇಂದ್ರದಲ್ಲಿ ದೇಶದ ಸಾಮಾನ್ಯ ಜನರ ಪ್ರಯೋಜನಕ್ಕಾಗಿ ದುಡಿಯುವ ಸರಕಾರ ಬೇಕು. ಅದು ಕೋಮುವಾದದ ಅಪಾಯವನ್ನು ಎದುರಿಸುವಲ್ಲಿ ಒಂದು ಜಾತ್ಯಾತೀತ ಧೋರಣೆಯನ್ನು ಅನುಸರಿಸಬೇಕು. ಅವರು ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ತಲೆ ಬಗ್ಗಿಸಬಾರದು, ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಬೇಕು. ಇಂತಹ ಸರಕಾರದ ಅಡಿಯಲ್ಲಿ ಒಂದು ಸ್ವಾವಲಂಬೀ ಆರ್ಥಿಕ ನಮ್ಮ ದೇಶಕ್ಕೆ ಮಾರ್ಗದರ್ಶನ ನೀಡಬೇಕೇ ಹೊರತು ಪರಾವಲಂಬೀ ಆರ್ಥಿಕ ಧೋರಣೆಗಳಲ್ಲ. ದೇಶಾದ್ಯಂತ ನಾವು ಈ ವಿಚಾರಗಳನ್ನು ಪ್ರಚಾರ ಮಾಡುತ್ತಿದ್ದೇವೆ. ನಮ್ಮ ಪಕ್ಷ ಕೇಂದ್ರದಲ್ಲಿ ಒಂದು ಕಾಂಗ್ರೆಸ್ಸೇತರ, ಬಿಜೆಪಿಯೇತರ ಜಾತ್ಯಾತೀತ ಪ್ರಜಾಸತ್ತಾತ್ಮಕ ಸರಕಾರವನ್ನು ಕಟ್ಟುವ ಬಗ್ಗೆ ಒತ್ತು ಕೊಡುತ್ತಿದ್ದೇವೆ. ಇದನ್ನು ನಾವು ಮೂರನೇ ರಂಗ ಎನ್ನುತ್ತಿದ್ದೇವೆ. ಈ ಬಗ್ಗೆ ನಮ್ಮ ಕೇಂದ್ರ ಸಮಿತಿ ಸಭೆಗಳಲ್ಲಿ ಚರ್ಚೆಗಳೂ ಆಗಿವೆ. ನನ್ನ ಅನಾರೋಗ್ಯದಿಂದ ನಾನು ಅವುಗಳಲ್ಲಿ ಭಾಗವಹಿಸಲಾಗಿಲ್ಲ.

ಪ್ರ : ಆದರೆ ಮೂರನೇ ರಂಗದ ಇಂತಹ ಸರಕಾರದ ಬಗ್ಗೆ ಜನಗಳ ಮನಸ್ಸಿನಲ್ಲಿ ಸ್ವಲ್ಪ ಮಟ್ಟಿನ ಗೊಂದಲಗಳಿವೆ. ಇಂತಹ ಒಂದು ಸರಕಾರ ನಿಜಕ್ಕೂ ಸಾಧ್ಯವೇ, ಇಂತಹ ಒಂದು ಸರಕಾರದ ಎಲ್ಲ ಅಂಗಪಕ್ಷಗಳು ಬಹಳ ಸಮಯದ ವರೆಗೆ ಒಂದಾಗಿ ಇರುತ್ತವೆಯೇ, ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಸಮಾನ ದೂರವನ್ನು ಉಳಿಸಿಕೊಳ್ಳುವುದು ಅವರಿಗೆ ಸಾಧ್ಯವಾಗುತ್ತದೆಯೇ- ಈ ಪ್ರಶ್ನೆಗಳನ್ನು ಇಂತಹ ಪ್ರಯತ್ನದ ವಿರುದ್ಧ ಎತ್ತಲಾಗುತ್ತಿದೆ. ನೀವೇನನ್ನುತ್ತೀರಿ?

ಜ್ಯೋತಿ ಬಸು: ನಮ್ಮ ಕರೆಗೆ ವಿವಿಧ ರಾಜಕೀಯ ಪಕ್ಷಗಳು ಸಕಾರಾತ್ಮಕವಾಗಿ ಸ್ಪಂದಿಸಿವೆ ಎಂದು ನಮ್ಮ ಪಕ್ಷದ ಮುಖಂಡರು ತಿಳಿಸಿದ್ದಾರೆ.ಕೆಲವು ನೀತಿಗಳ ಆಧಾರದಲ್ಲಿ ಒಂದಾಗಿ ಎಂದು ನಾವು ಅವರಿಗೆ ಹೇಳುತ್ತಿದ್ದೇವೆ. ನಿಜ, ಮೂರನೇ ರಂಗವನ್ನು ಕಟ್ಟುವ ಕೆಲಸ ಬಹಳ ಕಷ್ಟದ್ದು. ಆದರೆ ಅದು ಆಗುವಂತೆ ಮಾಡಲೇ ಬೇಕಾಗಿದೆ. ಏಕೆಂದರೆ, ಕೇಂದ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸರಕಾರಗಳನ್ನು ನಡೆಸುತ್ತಿದ್ದಾಗ ಅಂಗೀಕರಿಸಿದ ಧೋರಣೆಗಳು ಸಂಪೂರ್ಣವಾಗಿ ಜನಸಾಮಾನ್ಯರ ಹಿತಾಸಕ್ತಿಗಳಿಗೆ ವಿರುದ್ಧವಾದದ್ದು. ಆದ್ದರಿಂದ ಇದೀಗಲೇ ಕೇಂದ್ರದಲ್ಲಿ ಒಂದು ಮೂರನೇ ರಂಗದ ಸರಕಾರ ರಚನೆಯಾಗಬೇಕಾಗಿದೆ. ಮೂರನೇ ರಂಗವೇ ನಿಜವಾದ ಪರ್ಯಾಯ. ನಮ್ಮ ದೇಶದ ವಿವಿಧ ರಾಜ್ಯಗಳಲ್ಲಿ ಜನತೆ ಮುಂಬರುವ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಮೂರನೇ ರಂಗದ ರಚನೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಖಂಡಿತವಾಗಿಯೂ ಕೊಡುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ. ○

ತೃತೀಯ ರಂಗದ ರ್‍ಯಾಲಿ - ದಾಬಸ್‌ಪೇಟೆ





ಚುನಾವಣೆಗಳು ಮತ್ತು ಮಹಿಳಾ ಸಮುದಾಯ

ಕೆ.ಎಸ್.ವಿಮಲ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವೆಂಬುದು ಜನರ ಕೈಯ್ಯಲ್ಲಿರುವ ಅತ್ಯಂತ ಅಮೂಲ್ಯ ಅಸ್ತ್ರ. ರಾಜಕೀಯ ವ್ಯವಸ್ಥೆಯೊಳಗಿನ ಭ್ರಷ್ಟಾಚಾರ, ಅನ್ಯಾಯ, ಅಕ್ರಮ, ಸ್ವಜನ ಪಕ್ಷಪಾತಗಳು ಮೇರೆ ಮೀರಿದ ಕಾರಣದಿಂದಾಗಿ ವಿದ್ಯಾವಂತರೆನಿಸಿಕೊಂಡ ಮತದಾರರು ಮತದಾನದಿಂದಲೇ ವಿಮುಖರಾಗುತ್ತಿರುವುದು, ಸಿನಿಕತನ ಬೆಳೆಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಇನ್ನೊಂದೆಡೆ ಆಳುವ ವರ್ಗದ ಸ್ವಹಿತ ಸಾಧನೆಯ ಉಳ್ಳವರ ಪರವಾದ ನೀತಿಗಳು ಜನಸಾಮಾನ್ಯರಿಗೆ ತಂದಿತ್ತ ಕೊಡುಗೆಗಳಾದ ಬಡತನ, ಹಸಿವು, ದಾರಿದ್ರ್ಯಗಳಿಂದ ತತ್ತರಿಸಿದ ಜನ ಚುನಾವಣೆಯ ಸಂದರ್ಭದಲ್ಲಾದರೂ ಒಂದಿಷ್ಟು ಹಣ ಸಿಗುವುದಾದರೆ ತೆಗೆದುಕೊಂಡರೆ ತಪ್ಪೇನು ಎಂಬ ಮಟ್ಟಕ್ಕೆ ಬಂದಿದ್ದಾರೆ. ನಮ್ಮ ಮತ ಪಡೆದ ವ್ಯಕ್ತಿ ಒಂದು ಅವಧಿಯ ಸ್ಥಾನದಿಂದಲೇ ತಲೆ ತಲಾಂತರಕ್ಕೆ ಸಾಲುವಷ್ಟು ಆಸ್ತಿ, ಸಂಪತ್ತುಗಳಿಸುತ್ತಾರೆ. ಅದರಲ್ಲಿ ಸ್ವಲ್ಪ ಪಾಲು ನಮಗೂ ಕೊಡಲಿ ಎಂದ ಭಾವ ಬೆಳೆಯುತ್ತದೆ. ಎಂದರೆ ಚುನಾವಣಾ ಅಕ್ರಮಗಳು ಒಂದುರೀತಿಯ ಸಾಮಾಜಿಕ ಮನ್ನಣೆ ಪಡೆದುಕೊಳ್ಳುವ ಸ್ಥಿತಿ ಬಂದಾಗಿದೆ.


ಸಾರಾಯಿ ಸಿಗುತ್ತದೆ

ಸಾರಾಯಿ ಅಧಿಕೃತವಾಗಿ ನಿಷೇಧಗೊಂಡಿದ್ದರು ಚುನಾವಣೆಗೆ ಹಂಚಲು ಯಥೇಚ್ಛವಾಗಿ ಸಿಗುತ್ತವೆ. ಜನಪರ ನೀತಿಗಳಿಲ್ಲದ ರಾಜಕೀಯ ಪಕ್ಷಗಳಿಗೆ ಸ್ಥಾನಗಳಿಕೆಗೆ ಇಂತಹ ಅಕ್ರಮಗಳೇ ಮಾರ್ಗವಾಗಿದ್ದು ಈ ವಿಧಾನದ ಮೂಲಕ ತಾವು ಮೂಲತ: ಭ್ರಷ್ಟರೇ ಆಗಿರುವ ಈ ಜನ ಸಾಮಾನ್ಯ ಮತದಾರರನ್ನೂ ಭ್ರಷ್ಟರನ್ನಾಗಿಸಿದ್ದಾರೆ. ಚುನಾವಣೆಗಳ ಸಂದರ್ಭದಲ್ಲಿ ಇಂತಹ ಪಕ್ಷದವರು ಇಷ್ಟು ಕೊಟ್ಟಿದ್ದಾರೆ. ನೀವೇನು ಕೊಡುತ್ತೀರಿ ಎಂದು ಮತದಾರರು ಕೇಳುವ ಸ್ಥಿತಿ ತಲುಪಿಯಾಗಿದೆ. ಒಮ್ಮೆಯಂತೂ ಒಬ್ಬ ಬಡ ಹೆಂಗಸು "ಅಕ್ಕ ಕನಿಷ್ಟ ಚುನಾವಣೆಯ ಸಂದರ್ಭ ಅಂತ ನಮ್ ಕೈಗೆ ಒಂದಿಷ್ಟು ಹಣ ಸಿಕ್ಕಿದೆ. ಮಕ್ಕಳಿಗೆ ತರಕಾರಿ ಹಾಕಿದ ಸಾರು ಬಡಿಸಿ ಎಷ್ಟೋ ಕಾಲವಾಯಿತು.

ಈ ಸಿಕ್ಕ ಹಣದಿಂದ ಎರಡು ದಿನ ನನ್ನ ಮಕ್ಕಳಿಗೆ ಹೊಟ್ಟೆ ತುಂಬ ಊಟ ಹಾಕ್ತಿನಿ. ಅದಕ್ಕೂ ಯಾಕೆ ಕಲ್ಲು ಹಾಕ್ತೀರಿ" ಎಂದಿದ್ದಳು. ಹಾಗನ್ನುವಾಗ ಹೊಟ್ಟೆ ತುಂಬ ಮಕ್ಕಳು ಊಟ ಮಾಡುತ್ತಿದ್ದುದನ್ನು ಸಂತೃಪ್ತಭಾವದಲ್ಲಿ ನೋಡುವ ತಾಯಿಯ ಭಾವ ಮುಖದಲ್ಲಿ ಒಡೆದು ಕಾಣುತ್ತಿತ್ತು.

ಆಳುವ ಸರ್ಕಾರಗಳ ತಪ್ಪು ನೀತಿಗಳಿಂದಾಗಿ ಬಡತನ, ಹಸಿವು, ದಾರಿದ್ರ್ಯ, ಹಸಿವು, ಬಡತನ, ದಾರಿದ್ರ್ಯಗಳಿಂದಾಗಿ ಸಿಕ್ಕಾಗ ಸಿಕ್ಕಷ್ಟನ್ನು ಬಾಚಿಕೊಳ್ಳುವ ತವಕ, ಮೆತಗಳಿಸಲು ಖರ್ಚು ಮಾಡಿದ ಮತ್ತು ಸಿಕ್ಕ ಒಂದು ಅವಧಿಯಲ್ಲಿ ಹಣಗಳಿಸಲು ಮತ್ತೆ ಭ್ರಷ್ಟಾಚಾರ. ಇದೆಂತಹ ವಿಷ ಚಕ್ರ! ಭ್ರಷ್ಟಾಚಾರವನ್ನೇ ಜೀವನ ಕ್ರಮವನ್ನಾಗಿಸಿಕೊಂಡ ಪರಿಸರದಲ್ಲಿ ಚುನಾವಣೆಗಳು ನಡೆಯುವಾಗ ಜನರಿಗೆ ಆಡಳಿತದಲ್ಲಿ ತಾವೇನು ಕೊಡುತ್ತೇವೆ ಎಂಬುದು ಮುಖ್ಯವಾಗದೇ ಅಧಿಕಾರ ಪಡೆಯಲು ತಾವೇನು ಕೊಡುತ್ತೇವೆ ಎಂಬುದು ಮುಖ್ಯವಾಗುತ್ತಿದೆ. ಹಾಗೆಂದೇ ಪ್ರಣಾಳಿಕೆಗಳು ಚುನಾವಣಾ ಪ್ರಚಾರದ ಪ್ರಮುಖ ಅಂಶವಾಗುತ್ತಿಲ್ಲ. ಅದರ ಬದಲು ವ್ಯಕ್ತಿಗತ ಟೀಕೆ, ಪರಸ್ಪರ ಕೆಸರೆರೆಚಾಟಗಳೇ ತುಂಬಿ ತುಳುಕುತ್ತವೆ.

ಭ್ರಷ್ಟತೆಯ ಪ್ರಮಾಣ ಎಷ್ಟು ಹೆಚ್ಚಿದೆಯೆಂದರೆ ಮಹಿಳೆಯರ ಮಧ್ಯೆ, ಅದರಲ್ಲೂ ಗ್ರಾಮೀಣ ಮಹಿಳೆಯರ ಮಧ್ಯೆ ಒಂದು ಮೌನ ಕ್ರಾಂತಿಯನ್ನೇ ಮಾಡಿದ ಸ್ವಸಹಾಯ, ಸ್ತ್ರೀ ಶಕ್ತಿ ಗುಂಪುಗಳೂ ಇಂದು ಮತ ಬ್ಯಾಂಕ್‌ಗಳಾಗಿ ಪರಿವರ್ತಿತಗೊಂಡಿವೆ. ನಾಲ್ಕು ಗೋಡೆಯಾಚೆಗಿನ ಪ್ರಪಂಚಕ್ಕೆ ಬಂದು ಆತ್ಮವಿಶ್ವಾಸದ ಹೆಚ್ಚೆಯಿಡಲು ಪ್ರಯತ್ನಿಸುತ್ತಿರುವ ಈ ಮಹಿಳೆಯರ ನಿಜವಾದ ಸಬಲೀಕರಣದತ್ತ ಎಂದೂ ಯೋಚಿಸದ ಭ್ರಷ್ಟ ರಾಜಕಾರಣಗಳು ಕೆಲವು ಏಜೆಂಟರುಗಳ ಮೂಲಕ ಹಣದ ಪ್ರಲೋಭನೆ ಒಡ್ಡಿ ಮತ ಖರೀದಿಸಿದ ಸಂಗಾತಿಗಳು ಈ ಹಿಂದೆ ಬೆಳಕಿಗೆ ಬಂದಿವೆ. ಬೀದಿ ನಾಯಿಗಳಿಗೆ ಬ್ರೆಡ್ ಹಾಕಿದಂತೆ



ಜನರನ್ನು ನಡೆಸಿಕೊಳ್ಳುವ ಈ ಭ್ರಷ್ಟರಿಗೆ ಏನೆನ್ನಬೇಕು? ಈ ಎಲ್ಲ ಸಂಗತಿಗಳ ಮಧ್ಯೆಯೇ ಕೇಂದ್ರ ಸರ್ಕಾರ ಹೇಗೋ ತನ್ನ 5 ವರ್ಷಗಳನ್ನು ಪೂರೈಸಿದೆ. ಸಂವಿಧಾನ ನೀಡಿದ ಹಕ್ಕು ಚಲಾಯಿಸಿ ಪ್ರಜೆಯೇ ಪ್ರಭುವಾಗುವ ಪ್ರಜಾಪ್ರಭುತ್ವದ ಮಹಾ ಸಮರಕ್ಕೆ ದೇಶ ಸಜ್ಜಾಗುತ್ತಿದೆ. ಈ ಸಂದರ್ಭದಲ್ಲಿ ವಿವಿಧ ಜನಸಮುದಾಯಗಳ ಆಶೋತ್ತರಗಳೇನು, ಮಹಿಳೆಯರ ಬೇಡಿಕೆಗಳೇನು. ಕಳೆದ ಅವಧಿಯಲ್ಲಿ ಗುರುತಿಸಿದ ಬಹುಮುಖ್ಯ ಸವಾಲುಗಳೇನು. ನಿರೀಕ್ಷಿಸುವ ಪರ್ಯಾಯಗಳೇನು? ಆಶೋತ್ತರಗಳ ಈಡೇರಿಕೆಗೆ ಮಹಿಳಾ ಚಳುವಳಿ ಕೈಗೊಳ್ಳಬೇಕಾದ ಚಟುವಟಿಕೆಗಳೇನು? 15ನೇ ಲೋಕಸಭಾ ಚುನಾವಣೆ ಮಹಿಳೆಯರ ದೃಷ್ಟಿಯಲ್ಲಿ....

2004 ರ ಚುನಾವಣೆಯಲ್ಲಿ ಆರ್ಥಿಕ ದುರಾಡಳಿತ ಹಾಗೂ ಕೋಮುವಾದಿ ರಾಜಕಾರಣಕ್ಕೆ ಬೇಸತ್ತು ಮಹಿಳೆಯರು ಎನ್.ಡಿ.ಎ. ಸರ್ಕಾರದ ವಿರುದ್ಧ ಮತ ಚಲಾಯಿಸಿದರು.

ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರ ಎಡಪಕ್ಷಗಳ ಬಾಹ್ಯ ಬೆಂಬಲದೊಂದಿಗೆ ಆಡಳಿತದ ಚುಕ್ಕಾಣಿ ಹಿಡಿಯಿತು. ಒಂದು ಕನಿಷ್ಟ ಸಾಮಾನ್ಯ ಕಾರ್ಯಕ್ರಮದ ಆಧಾರದಲ್ಲಿ ಆಡಳಿತ ನಡೆಸುವ ಒಪ್ಪಂದ ಮಾಡಿಕೊಳ್ಳಲಾಯಿತು. ಎಡಪಕ್ಷಗಳ ಒತ್ತಡದಿಂದಾಗಿ ನಿವೃತ್ತಿ ವೇತನ ಖಾಸಗೀಕರಣ, ಸಾರ್ವಜನಿಕ ಉದ್ದಿಮೆಗಳನ್ನು ಕಳಹಾಕಲು ಆಗದಂತೆ ತಡೆಯಲು ಸಾಧ್ಯವಾಯಿತು.


ಆದರೆ

1) ಶಾಸನ ಸಭೆಗಳಲ್ಲಿ ಶೇ.33 ಮಹಿಳಾ ಮೀಸಲಾತಿ
2) ಪಡಿತರ ವ್ಯವಸ್ಥೆಯ ಬಲಪಡಿಸುವಿಕೆ ಮತ್ತು ಸಾರ್ವತ್ರೀಕರಣ
3) ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ, ಆ್ಯಸಿಡ್ ದಾಳಿ ದೌರ್ಜನ್ಯ ತಡೆ ಮಸೂದೆ
4) ದುಡಿಯುವ ಪ್ರದೇಶದಲ್ಲಿ ಲೈಂಗಿಕ ಕಿರುಕುಳ ತಡೆ ಮಸೂದೆ
5) ಅಸಂಘಟಿತ ವಲಯದ ಮಹಿಳೆಯರ ಕನಿಷ್ಟ ವೇತನ, ಉದ್ಯೋಗ ಭದ್ರತೆ
6) ಸ್ತ್ರಿ ಭ್ರೂಣ ಹತ್ಯೆ ತಡೆಯಲು ಗಂಭೀರ ಪ್ರಯತ್ನ
7) ಮಹಿಳಾ ಸಮಾನತೆಗಾಗಿ ನಿರ್ದಿಷ್ಟ ಕಾರ್ಯ ಯೋಜನೆ ಮುಂತಾದ ಕ್ಷೇತ್ರಗಳನ್ನು ಯು.ಪಿ.ಎ ಸರ್ಕಾರ ಸಂಪೂರ್ಣವಾಗಿ ಕಡೆಗಣಿಸಿದೆ.


ಇದರ ಜೊತೆಯೇ ಕೋಮುವಾದೀ ಶಕ್ತಿಗಳ ದೌರ್ಜನ್ಯ ಮೇರೆ ಮೀರಿದೆ. ಕರ್ನಾಟಕ, ಒರಿಸ್ಸಾಗಳಲ್ಲಿ ಮಹಿಳೆಯರನ್ನೇ ಗುರಿಯಾಗಿಸಿ ಸಂಘ ಪರಿವಾರದ ವಿವಿಧ ಘಟಕಗಳು ದೌರ್ಜನ್ಯ ನಡೆಸುತ್ತಿವೆ. ಇದನ್ನು ತಡೆಗಟ್ಟುವತ್ತ ಕೇಂದ್ರ ಯು.ಪಿ.ಎ. ಯಾವುದೇ ಗಂಭೀರ ಗಮನ ಹರಿಸಲಿಲ್ಲ. ಕರ್ನಾಟಕದ ಸಂದರ್ಭದಲ್ಲಿಯಂತೂ ಆಡಳಿತಕ್ಕೆ ಬಂದ 100 ದಿನಗಳೊಳಗೆ ರಾಜ್ಯದ ಬಿ.ಜೆ.ಪಿ ಸರ್ಕಾರದ ಸಾಧನೆ ಎಂದರೆ ರಸಗೊಬ್ಬರ ಕೇಳಿದ ರೈತರ ಮೇಲೆ ಗೋಲಿಬಾರ್. ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಶ್ರೀರಾಮಸೇನೆಯಂತಹ ಸಂಘ ಪರಿವಾರಿಗಳ ಮೂಲಕ ಮಹಿಳೆಯರ ಮೇಲೆ ದೌರ್ಜನ್ಯ, ಕರಾವಳಿಯುದ್ದಕ್ಕೂ ಪ್ರತಿನಿತ್ಯ ಅಲ್ಪಸಂಖ್ಯಾತರನ್ನೇ ಗುರಿಯಿಟ್ಟುಕೊಂಡು ನಡೆಸುತ್ತಿರುವ ವಿವಿಧ ರೀತಿಯ ದೌರ್ಜನ್ಯಗಳು ಮಠಗಳ ಮೂಲಕ ಗೋ ರಕ್ಷಣೆಯ ಹೆಸರಿನಲ್ಲಿ ಜನಸಾಮಾನ್ಯರನ್ನು ಭಾವನಾತ್ಮಕ ನೆಲೆಯಲ್ಲಿ ಪ್ರಚೋದಿಸುತ್ತ ಕೋಮುದ್ವೇಷ ಬಿತ್ತುವುದು ಇವುಗಳೇ ಆಗಿವೆ. ರಾಷ್ಟ್ರೀಯ ನೆಲೆಯಲ್ಲಿ ಕೂಡ ಈ ಬಾರಿಯ ಚುನಾವಣೆಯಲ್ಲಿ ಮತ್ತೆ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣದ ಘೋಷಣೆಯನ್ನೇ ಪ್ರಮುಖ ಅಂಶ ಮಾಡಿಕೊಳ್ಳುವ ನಿರ್ಧಾರ ಬಿಜೆಪಿಯ ಕಾರ್ಯಕಾರಿಣಿಯಲ್ಲಾಗಿದೆ. ತಾವು ಅಧಿಕಾರ ನಡೆಸಿದ 6 ವರ್ಷಗಳಲ್ಲಿ ಒಮ್ಮೆಯೂ ಮಂದಿರ ಕಟ್ಟುವ ಕುರಿತು ನೆನಪಿಸಿಕೊಳ್ಳದ ಜನರಿಗೆ ಪ್ರಧಾನಿ ಗದ್ದುಗೆಗೆ ಅದ್ವಾನಿಯವರನ್ನು ಏರಿಸಲು ಮತ್ತೆ "ಅನ್ಯಥಾ ಶರಣಂ ನಾಸ್ತಿ. ಶ್ರೀರಾಮೇವ ಶರಣಂ ಮಮ:" ಎಂದು ಹೊರಟಿದ್ದಾರೆ.

ದೇಶದ, ರಾಜ್ಯದ ಮಹಿಳಾ ಸಮೂಹ 92 ರ ಡಿಸೆಂಬರ್ 6 ರ ನಂತರ ದೇಶದ ವಿವಿಧ ಭಾಗಗಳಲ್ಲಿ ನಡೆದ ಕೋಮುಗಲಭೆಗಳು ಮುಂಬೈ, ಸೂರತ್ ನಗರಗಳಲ್ಲಿ ಜೀವಂತ ದಹಿಸಿ ಹೋದ ಮುಸ್ಲಿಂ ಮಹಿಳೆಯರು, ಮಕ್ಕಳು, ಅಯೋಧ್ಯೆ ಮಂದಿರ ನಿರ್ಮಾಣಕ್ಕಾಗಿ ರಥಯಾತ್ರೆ ಕೈಗೊಂಡ ಅದ್ವಾನಿ ಹ ರಥದಡಿ ಸಿಕ್ಕು ನಲುಗಿದ ಕೋಮುಸಾಮರಸ್ಯ, ಮುಂದುವರೆದ ಘಟನೆಯಾಗಿ ಗೋಧ್ರಾ, ದಹಿಸಿಹೋದ ಗುಜರಾತಿನ ಸಾವಿರಾರು ಮುಗ್ಧ ಮನುಷ್ಯರು, ಮನಸ್ಸುಗಳನ್ನು ಮರೆಯಲು ಸಾಧ್ಯವೇ? ಇಡೀ ದೇಶ ಆರ್ಥಿಕ ಸಂಕಷ್ಟದಲ್ಲಿ ಮುಳುಗುತ್ತಿರುವಾಗ ಅದರತ್ತ ಕಿಂಚಿತ್ತೂ ಗಮನ ಹರಿಸದ ಯು.ಪಿ.ಎ ಕೂಟವಾಗಲಿ, ಜನರ ಬದುಕಿನ ಬವಣೆಗೆ ಕಿವಿಕೊಡದೇ ಮಂದಿರ, ಮಸೀದಿ ಜಗಳ ಎಬ್ಬಿಸಿ ತನ್ನ ಬೇಳೆ ಬೇಯಿಸಿ ಕೊಳ್ಳಲು ಹೊರಟ ಎನ್.ಡಿ.ಎ. ಯಾಗಲೀ ಖಂಡಿತ ಈ ಬಾರಿಯ ಆಯ್ಕೆಯಾಗ ಕೂಡದು. ಆರ್ಥಿಕ ಸಂಕಷ್ಟಕ್ಕೆ ಪರ್ಯಾಯ ಪರಿಹಾರದ ಮಾದರಿಯ ಬಜೆಟ್ ಇಡುವ ಮೂಲಕ ರಾಜ್ಯಗಳಿಗಿರುವ ಅಲ್ಪ ಅವಕಾಶದಲ್ಲಿ ಕೂಡ ಜನಪರ ನೀತಿ ಕಾರ್ಯಸಾಧ್ಯವೆಂದು ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸಾಧಿಸಿ ತೋರಿಸಿದ ಎಡರಂಗದ ನೇ... ತೃತೀಯ ಪರ್ಯಾಯ ವೊಂದೇ ಜನರ ಆಯ್ಕೆಯಾಗಬೇಕು.


ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಬೆಂಗಳೂರು ಪೂರ್ವವಲಯ ಸಮಿತಿಯು ಮಾರ್ಚ್ 24, 2009 ರಂದು ಕೆ.ಆರ್.ಪುರಂನಲ್ಲಿ ಸಂಘಟಿಸಿದ್ದ ಮಹಿಳಾ ದಿನಾಚರಣೆಯ ಚಿತ್ರಗಳು.



ಕೆ.ಎಸ್.ಶಾರದಾ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ಮೀನಾಕ್ಷಿ ಬಾಳಿ, ಗೌರಮ್ಮ ಯೇಸ್ತರ್ ಗಿರಿಯಪ್ಪ, ಜಯಮ್ಮ ಇತರರು



ಜಯಲಕ್ಷ್ಮಮ್ಮ ನಿರ್ಮಲ, ಗಾಯಿತ್ರಿ, ನಸ್ರೀನ್ ತಾಜ್, ಬೀಬಿಜಾನ್, ಕಲಾವತಿ, ಪ್ರೇಮ, ಲೀಲಾ, ನಗೀನ್ ತಾಜ್, ಜೆ.ಮಂಜುಳ, ಪದ್ಮಲತಾ ಕೆ.ಮಂಜಳ ಇವರ ಪ್ರರಿಶ್ರಮದೊಂದಿಗೆ ಸಾಂಸತಿಕ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು.



ಜನ ಸಾಮಾನ್ಯರನ್ನು ಈಗ ಕಾಡುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ತೀವ್ರ ಹೊಡೆತಗಳಿಂದ ರಕ್ಷಿಸಲು ನವ-ಉದಾರವಾದಿ ನೀತಿಗಳಿಗೆ, ಮುಕ್ತ ಮಾರುಕಟ್ಟೆ ನೀತಿಗಳಿಗೆ ಕಟ್ಟುಬಿದ್ದಿರುವ ಕಾಂಗ್ರೆಸ್ ಆಗಲೀ, ಬಿಜೆಪಿಯಾಗಲೀ ಕ್ರಮಗಳನ್ನು ಕೈಗೊಳ್ಳುತ್ತವೆ ಎಂದು ನಿರೀಕ್ಷಿಸುವಂತಿಲ್ಲ. ಎಡಪಕ್ಷಗಳ ನೇತೃತ್ವದ ಪರ್ಯಾಯ ರಾಜಕೀಯದ ಪರ್ಯಾಯ ಧೋರಣೆಗಳಿಂದ ಮಾತ್ರ ಇದು ಸಾಧ್ಯ. ಇದು ಕಳೆದ ಆರು ತಿಂಗಳಲ್ಲಿ ಸ್ಪಷ್ಟವಾಗಿ ಕಾಣಬರುತ್ತಿದೆ.

ಕಾಂಗ್ರೆಸ್, ಬಿಜೆಪಿ ಮುಕ್ತ ಮಾರುಕಟ್ಟೆದಾರರ ಬಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಏನು ಪರಿಹಾರಗಳಿವೆ ?

15ನೇ ಲೋಕಸಭೆಯ ಚುನಾವಣೆಗಳು ಒಂದು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ನಡೆಯುತ್ತಿವೆ. ಈಗಾಗಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿವಿಧ ಲೇಖನಗಳಲ್ಲಿ, ವರದಿಗಳಲ್ಲಿ ಹೇಳಿರುವಂತೆ 1930ರ ದಶಕದಲ್ಲಿ ಕಂಡ "ಮಹಾಕುಸಿತ"ದ ನಂತರ ಜಗತ್ತನ್ನು ಬಾಧಿಸುತ್ತಿರುವ ಅತಿ ದೊಡ್ಡ ಬಿಕ್ಕಟ್ಟು ಇದು.

ಐಎಂಎಫ್ ಲೆಕ್ಕಾಚಾರದ ಪ್ರಕಾರ ವಿಶ್ವದ ಆರ್ಥಿಕ ಎರಡನೇ ಮಹಾಯುದ್ಧದ ನಂತರದ ಅತೀ ಕಡಿಮೆ ಬೆಳವಣಿಗೆ ದರವನ್ನು, ಅಂದರೆ ಕೇವಲ ಶೇಕಡಾ ದರವನ್ನು ಈ ವರ್ಷ ಕಾಣಲಿದೆ. ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಒ) ಪ್ರಕಾರ ಬಡತನದ ರೇಖೆಯ ಕೆಳಗೆ ಬದುಕುವ ದುಡಿಯುವ ಜನಗಳ ಸಂಖ್ಯೆ 1400 ಕೋಟಿಗೇರಲಿದೆ. ಇದು ವಿಶ್ವದ ಉದ್ಯೋಗಸ್ಥ ಜನಸಂಖ್ಯೆಯ 45 ಶೇಕಡಾ.

ಜಾಗತೀಕರಣದ ನೇರ ಫಲ

ಈ ಬಿಕ್ಕಟ್ಟು ಬಂಡವಾಳಶಾಹಿ ಜಗತ್ತಿನಲ್ಲಿ ಸರಕಾರಗಳು 1970ರ ದಶಕದಿಂದ ಅನುಸರಿಸಿರುವ ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ನವ-ಉದಾರೀಕರಣದ ನೀತಿಗಳ ನೇರಫಲ ಎಂಬುದು ಈಗ ಸುಸ್ಪಷ್ಟ.

ಜಾಗತೀಕರಣದಿಂದಾಗಿ ಸಂಪತ್ತು ಮತ್ತು ಆಸ್ತಿಗಳು ದೊಡ್ಡ ಹಣಕಾಸು ಮತ್ತು ವ್ಯಾಪಾರೀ ಮೇಲ್ವರ್ಗದ ಬಳಿ ಹೆಚ್ಚೆಚ್ಚು ಕೇಂದ್ರೀಕರಣಗೊಳ್ಳಲಾರಂಭಿಸಿದವು. ಜತೆಗೆ ಜೂಜುಕೋರ ಚಟುವಟಿಕೆಗಳು ಹಿಂದೆಂದೂ ಕಾಣದ ರೀತಿಯಲ್ಲಿ ವ್ಯಾಪಿಸಿದವು.

ದುಡಿಯುವ ಜನಗಳ ಆದಾಯಗಳು, ಜೀವನ ಮಟ್ಟ ಇಳಿಮುಖಗೊಂಡವು, ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆ ಹೆಚ್ಚು-ಹೆಚ್ಚಾಗಿ ಹಣಕಾಸು ಮತ್ತು ಆಸ್ತಿ ಮಾರುಕಟ್ಟೆಗಳಲ್ಲಿನ ಜೂಜುಕೋರ ಗುಳ್ಳೆಗಳನ್ನು ಮತ್ತು ಸಾಲ ಮಾಡಿ ಖರ್ಚು ಮಾಡುವ ಸಂಪನ್ನ ವಿಭಾಗಗಳನ್ನು ಅವಲಂಬಿಸಿತು.

ಖಾಸಗೀಕರಣ ಮತ್ತು ಉದಾರೀಕರಣದಿಂದಾಗಿ ಆರ್ಥಿಕದಲ್ಲಿ ಸರಕಾರದ ಪಾತ್ರ ಹಿಂದಕ್ಕೆ ಸರಿಯುತ್ತಾ ಹೋಯಿತು. ಮಾರುಕಟ್ಟೆ ನಿಯಂತ್ರಣಗಳನ್ನು ಕಳಚಿ ಹಾಕಲಾಯಿತು.

ಈ ರೀತಿ ವಿಶಾಲ ತಳಹದಿಯ ಆರ್ಥಿಕ ವಿಸ್ತರಣೆಯ ಬದಲು ಕೇವಲ ಶೇರು ಮಾರುಕಟ್ಟೆ ಗುಳ್ಳೆಗಳ ಮೇಲೆ ನಿಂತ ವಿರೂಪಗೊಂಡ ಬೆಳವಣಿಗೆ ಬಹಳ ಸಮಯ ಉಳಿಯಲು ಸಾಧ್ಯವಿರಲಿಲ್ಲ. ಇದರಿಂದಾಗಿ ಹಣಕಾಸು ಬಿಕ್ಕಟ್ಟು ಬಂದೇ ಬರಬೇಕಾಗಿತ್ತು, ಅದು ಬಂದು ಅಪ್ಪಳಿಸಿಯೆ ಬಿಟ್ಟಿತು.

ಕಳೆದ ಒಂದೂವರೆ ದಶಕದಲ್ಲಿ ಹಲವು ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟು ಸಂಭವಿಸಿದೆ. ಮೆಕ್ಸಿಕೋ, ಆಗ್ನೇಯ ಏಷ್ಯಾ, ರಶ್ಯಾ, ಬ್ರೆಜಿಲ್, ಅರ್ಜೆಂಟಿನ, ತುರ್ಕಿ ಇತ್ಯಾದಿ ದೇಶಗಳಲ್ಲಿ ಇದು ಪ್ರಕಟವಾಯಿತು. ಆದರೂ ಜಾಗತೀಕರಣದ ಮಂತ್ರ, ಯಂತ್ರ ನಿಲ್ಲಲಿಲ್ಲ. ಆದರೆ ಈ ಬಾರಿ ಅದು ಅಮೆರಿಕಾ ಸಂಯುಕ್ತ ಸಂಸ್ಥಾನವನ್ನೆ ತಟ್ಟಿತು.ಅಲ್ಲಿಯೇ ಬೆಳವಣಿಗೆ ಕುಸಿದಾಗ ಅದು ಸಮಸ್ತ ಬಂಡವಾಳಶಾಹಿ ಜಗತ್ತನ್ನೆಲ್ಲಾ ವ್ಯಾಪಿಸಿತು. ಏಕೆಂದರೆ ಸಾಮ್ರಾಜ್ಯಶಾಹೀ ಜಾಗತೀಕರಣ ಅಮೆರಿಕಾದ ಮಾರುಕಟ್ಟೆಯನ್ನೇ ಹೆಚ್ಚೆಚ್ಚು ಅವಲಂಬಿಸಿಕೊಂಡಿತ್ತು.

ಭಾರತದಲ್ಲೂ

ಈ ಎಂಎಫ್-ವಿಶ್ವಬ್ಯಾಂಕ್ ಪ್ರಣೀತ ಜಾಗತೀಕರಣದ ನೀತಿಗಳನ್ನು 1991ರಿಂದ ಭಾರತದ ಸರಕಾರಗಳೂ ಅನುಸರಿಸಲಾರಂಭಿಸಿದವು. ಈಗ ಪ್ರಧಾನ ಮಂತ್ರಿಗಳಾಗಿರುವ ಮನಮೋಹನ ಸಿಂಗ್ ಹಣಕಾಸು ಮಂತ್ರಿಗಳಾಗಿದ್ದಾಗ ಇದು ಆರಂಭವಾಯಿತು. ಇದರಿಂದ ಅದು ಅಧಿಕಾರ



ಕಳಕೊಂಡರೂ, ಅದರ ಪ್ರಯೋಜನ ಪಡೆದು ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಸರಕಾರ ಅವೇ ಜಾಗತೀಕರಣದ ನೀತಿಗಳನ್ನು ಇನ್ನಷ್ಟು ರಭಸದಿಂದ ಎರಡನೇ ಪೀಳಿಗೆಯ ಸುಧಾರಣೆಗಳು ಎಂಬ ಹೆಸರಿನಲ್ಲಿ ಮುಂದುವರೆಸಿತು. ಆದರೆ ಈ ನೀತಿಗಳ ಆಧಾರದಲ್ಲಿ ಭಾರತ ಹೊಳೆಯುತ್ತಿದೆ ಎಂದು ಹೇಳಲಾರಂಭಿಸಿದ ಬಿಜೆಪಿ ನೇತೃತ್ವದ ಸರಕಾರವನ್ನೂ ಜನ ಅಧಿಕಾರದಿಂದ ಇಳಿಸಿದರು.

ಜಾಗತೀಕರಣ ನೀತಿಗೆ ಭಾರತದ ಸರಕಾರಗಳೂ ಬಲಿ ಬಿದ್ದುದರಿಂದ ಪ್ರಸಕ್ತ ಬಿಕ್ಕಟ್ಟು ಭಾರತವನ್ನೂ ತಟ್ಟಲಾರಂಭಿಸಿದೆ. ಮೊದಮೊದಲು ಸರಕಾರ ಭಾರತವನ್ನು ಇದು ತಟ್ಟುವುದಿಲ್ಲ ಎಂದೇ ಹೇಳಿತು. ಆದರೆ ಜನಸಾಮಾನ್ಯರಿಗೆ ಇದರ ಬಿಸಿ ಬಹಳ ಬೇಗನೇ ತಟ್ಟಲಾರಂಭಿಸಿದೆ. ಈಗ ಸರಕಾರವೂ ಅದನ್ನು ಒಪ್ಪಿಕೊಳ್ಳಲಾರಂಭಿಸಿದೆ. ಅಧಿಕೃತ ಅಂಕಿ-ಅಂಶಗಳ ಪ್ರಕಾರವೇ 2008ರ ಅಕ್ಟೋಬರ್‌ನಿಂದ ಡಿಸೆಂಬರ್ ನಡುವೆ 5 ಲಕ್ಷ ಕಾರ್ಮಿಕರು ಕೆಲಸ ಕಳಕೊಂಡರು. ನಂತರ ಜನವರಿ 2009ರ ಒಂದು ತಿಂಗಳಲ್ಲೆ 1ಲಕ್ಷ ಮಂದಿ ಕೆಲಸ ಕಳಕೊಂಡರು. ಕಾರ್ಮಿಕರ ಆದಾಯ 3.45ಶೇ. ರಷ್ಟು ಇಳಿಯಿತು. ವಾಸ್ತವವಾಗಿ ದುಡಿಯುವ ಜನಗಳನ್ನು ಇದು ಇನ್ನೂ ಆಳವಾಗಿ ತಟ್ಟಿದೆ.

ಬಿಜೆಪಿಯ "ಮಾದರಿ" ಸರಕಾರವಿರುವ ಗುಜರಾತದ ವಜ್ರ ಉದ್ದಿಮೆಯೊದರಲ್ಲೆ 4,13,780 ಮಂದಿ ಕೆಲಸ ಕಳಕೊಂಡಿದ್ದಾರೆ. ಎಂದು ಗುಜರಾತ ಸರಕಾರದ ಕಾರ್ಮಿಕ ಇಲಾಖೆಯ ಅಂಕಿ-ಅಂಶಗಳು ಹೇಳುತ್ತಿವೆ. ಒಂದು ರಾಜ್ಯದ ಒಂದು ಉದ್ದಿಮೆಯಲ್ಲೇ 4ಲಕ್ಷಕ್ಕೂ ಹೆಚ್ಚು ಮಂದಿ ಕೆಲಸ ಕಳಕೊಂಡಿರುವಾಗ ದೇಶದಲ್ಲೆಲ್ಲಾ ಈಗ ಕೆಲಸ ಕಳಕೊಂಡಿರುವ ಜನಗಳ ಸಂಖ್ಯೆ ಕೇಂದ್ರ ಸರಕಾರ ಒಪ್ಪಿಕೊಂಡಿರುವ 6 ಲಕ್ಷಕ್ಕಿಂತಲೂ ಬಹಳ ಹೆಚ್ಚಿದೆ ಎಂಬುದು ಸ್ಪಷ್ಟ.

ಆಳುವ ವರ್ಗಗಳ ಸ್ಪಂದನ

ಅಮೆರಿಕಾ ಮತ್ತಿತರ ಮುಂದುವರೆದ ದೇಶಗಳ ಬಂಡವಾಳಶಾಹಿ ಸರಕಾರಗಳು ಆರಂಭದಲ್ಲಿ ಈ ಬಿಕ್ಕಟ್ಟಿನ ಪರಿಹಾರಕ್ಕೆ ಕೈಗೊಂಡ ಕ್ರಮಗಳೆಂದರೆ ಖಾಸಗೀ ಬ್ಯಾಂಕುಗಳನ್ನು, ಇತರ ಹಣಕಾಸು ಕಂಪನಿಗಳನ್ನು ದಿವಾಳಿಯಿಂದ ಪಾರು ಮಾಡಲು ಸರಕಾರೀ ಖಜಾನೆಯಿಂದ ಬಿಲಿಯಗಟ್ಟಲೆ ಡಾಲರುಗಳನ್ನು ಒದಗಿಸಲು ಮುಂದಾದದ್ದು. ಆದರೆ ಈ ರೀತಿ ಖಾಸಗಿಯವರ ನಷ್ಟಗಳನ್ನು ತುಂಬಲು ಸಾರ್ವಜನಿಕ ಹಣವನ್ನು ಬಳಸುವುದರ ವಿರುದ್ಧ ಎಲ್ಲೆಡೆ ಪ್ರತಿಭಟನೆಗಳು ಬಂದಾಗ ಅಲ್ಲಿಯ ಬಂಡವಾಳಶಾಹಿ ಸರಕಾರಗಳೂ ಬ್ಯಾಂಕುಗಳನ್ನು ಮತ್ತು ಹಣಕಾಸು ಸಂಸ್ಥೆಗಳನ್ನು ಭಾಗಶಃವಾದರೂ ರಾಷ್ಟ್ರೀಕರಿಸಬೇಕಾಯಿತು. ಅವೀಗ ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಕೈಬಿಡಬೇಕಾಗಿ ಬಂದಿದೆ.

ಪುಟ 15ಕ್ಕೆ

ಸಿಪಿಐ(ಎಂ) ಮುಂದಿಟ್ಟಿರುವ ಪರ್ಯಾಯ ಕ್ರಮಗಳ ಸಾರ

ಸರಕಾರದ ಮಧ್ಯಪ್ರವೇಶವನ್ನು ಹೆಚ್ಚಿಸಬೇಕು; ವಾರ್ಷಿಕ ಯೋಜನಾ ವೆಚ್ಚ ಭಾರತದ ಜಿಡಿಪಿಯ 10 ಶೇಕಡಾಕ್ಕೆ ಏರಬೇಕು (ಈಗ ಇದು 5ಶೇಕಡಕ್ಕಿಂತಲೂ ಕಡಿಮೆಯಿದೆ).

ಬಿಕ್ಕಟ್ಟುಗ್ರಸ್ತ ವಲಯಗಳಿಗೆ ನಿರ್ದಿಷ್ಟ ಪರಿಹಾರ ವ್ಯವಸ್ಥೆಗಳನ್ನು ರೂಪಿಸಬೇಕು; ಮುಖ್ಯವಾಗಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು, ಉದ್ಯೋಗಾವಕಾಶ ಮತ್ತು ಸಂಬಳಗಳ ರಕ್ಷಣೆ ಇವುಗಳ ಮುಖ್ಯ ಗುರಿಯಾಗಬೇಕು

ಕೃಷಿ ಮತ್ತು ನೀರಾವರಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು; ಬೆಂಬಲ ಬೆಲೆಗಳು ಮತ್ತು ಆಮದು ಶುಲ್ಕಗಳ ಏರಿಕೆಯ ಮೂಲಕ ರೈತರಿಗೆ ರಕ್ಷಣೆ ಸಿಗಬೇಕು.

ರೇಷನ್ (ಸಾರ್ವಜನಿಕ ವಿತರಣಾ) ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು. ಇದರ ಮೂಲಕ 14 ಆವಶ್ಯಕ ಸರಕುಗಳನ್ನು ಒದಗಿಸಬೇಕು.

ಸಂಬಳದಾರರಿಗೆ, ನಿವೃತ್ತಿದಾರರಿಗೆ ಮತ್ತು ಹಿರಿಯ ನಾಗರಿಕರಿಗೆ ಆದಾಯ ತೆರಿಗೆ ರಿಯಾಯ್ತಿಗಳನ್ನು ಕೊಡಬೇಕು; ಜೂಜುಕೋರರು ಮತ್ತು ಧನಾಢ್ಯರ ಮೇಲೆ ತೆರಿಗೆಗಳು ಮತ್ತು ಕಪ್ಪು ಹಣದ ಮೇಲೆ ತೀವ್ರ ದಾಳಿ ನಡೆಸಬೇಕು.

ಹಣಕಾಸು ವಲಯದ ಮೇಲೆ, ಜೂಜುಕೋರ ಹಣಕಾಸಿನ ಹರಿವಿನ ಮೇಲೆ ಬಲವಾದ ನಿಯಂತ್ರಣ; ಹಣಕಾಸಿನ ಮೇಲೆ ಸರಕಾರದ ಹತೋಟಿ ಹಾಗೂ ಮತ್ತೆ ಅಭಿವೃದ್ಧಿ ಹಣಕಾಸಿಗೆ ಪ್ರೋತ್ಸಾಹ.

ಇದರಿಂದ ಮಾತ್ರವೇ ಭಾರತವನ್ನು ಮತ್ತು ಇಲ್ಲಿಯ ಜನ ಸಾಮಾನ್ಯರನ್ನು ಈ ಬಿಕ್ಕಟ್ಟಿನ ತೀವ್ರ ಹೊಡೆತಗಳಿಂದ ರಕ್ಷಿಸಲು ಸಾಧ್ಯ. ನವ-ಉದಾರವಾದಿ ನೀತಿಗಳಿಗೆ, ಮುಕ್ತ ಮಾರುಕಟ್ಟೆ ನೀತಿಗಳಿಗೆ ಕಟ್ಟುಬಿದ್ದಿರುವ ಕಾಂಗ್ರೆಸ್ ಆಗಲೀ, ಬಿಜೆಪಿಯಾಗಲೀ ಇಂತಹ ಕ್ರಮಗಳನ್ನು ಕೈಗೊಳ್ಳುತ್ತವೆ ಎಂದು ನಿರೀಕ್ಷಿಸುವಂತಿಲ್ಲ.

ಜನಸಾಮಾನ್ಯರ ಬದುಕನ್ನು ಉಳಿಸಲು ವಿಶ್ವಾದ್ಯಂತ ನವ-ಉದಾರವಾದಿ ನೀತಿಗಳ ತೀವ್ರ ವಿರೋಧ ಹಾಗೂ ಪರ್ಯಾಯ ನೀತಿಗಳಿಗೆ ಪ್ರಯತ್ನ ನಡೆದಿದೆ. ಭಾರತದಲ್ಲೂ ಇಂತಹ ಪ್ರಯತ್ನ ಅಗತ್ಯವಾಗಿದೆ. ಇದು ಎಡಪಕ್ಷಗಳ ನೇತೃತ್ವದ ಪರ್ಯಾಯ ರಾಜಕೀಯದ ಪರ್ಯಾಯ ಧೋರಣೆಗಳಿಂದ ಮಾತ್ರ ಸಾಧ್ಯ.

ಬಿಜೆಪಿ ಕೊಡುಗೆ : ಮತ ಮಾರಾಟ ಕರ್ನಾಟಕ ನಂ. 1

ದೆಹಲಿ ಮೂಲದ ಮಾಧ್ಯಮ ಅಧ್ಯಯನ ಕೇಂದ್ರ (ಸಿಎಂಎಸ್)ನ ಅಧ್ಯಯನದ ಪ್ರಕಾರ ಹಣ ಪಡೆದುಕೊಂಡು ಮತ ನೀಡುವ ಪ್ರವೃತ್ತಿಯಲ್ಲಿ ಕರ್ನಾಟಕ ರಾಜ್ಯ ಇಡೀ ದೇಶಕ್ಕೆ ಮೊದಲ ಸ್ಥಾನದಲ್ಲಿದೆಯಂತೆ.

ಇದೇ ಅಧ್ಯಯನ ಮತ್ತೊಂದು ವಿಷಯವನ್ನು ತೆರೆದಿಟ್ಟಿದೆ. ಪಶ್ಚಿಮಬಂಗಾಳ, ಕೇರಳ, ತ್ರಿಪುರಾದಂತಹ ರಾಜ್ಯಗಳಲ್ಲಿ ಹಣ ಪಡೆದುಕೊಂಡು ಮತ ನೀಡುವ ಪ್ರವೃತ್ತಿಯು ಇಡೀ ದೇಶದಲ್ಲೇ ಅತ್ಯಂತ ಕಡಿಮೆ ಇದೆಯಂತೆ.

ಎಷ್ಟೇ ಬಡವರಾದರೂ ಸಾಮಾನ್ಯವಾಗಿ ಜನರು ಮತವನ್ನು ಮಾರಿಕೊಳ್ಳಲು ಇಷ್ಟಪಡುವುದಿಲ್ಲ. ಆದರೆ ಆಳುವ ವರ್ಗಗಳು, ಅಧಿಕಾರವೊಂದನ್ನೇ ಗುರಿಯಾಗಿಸಿಕೊಂಡ ರಾಜಕೀಯ ಪಕ್ಷಗಳು ಹೇಗಾದರೂ ಸರಿ ಗೆಲ್ಲಬೇಕೆಂದು ನಾನಾ ವಿಧಾನಗಳು ತಂತ್ರ, ಆಮಿಷ, ಒತ್ತಡಗಳ ಬಲೆಯಲ್ಲಿ ಸಿಲುಕಿಸಿ ಜನರನ್ನು ಭ್ರಷ್ಟಗೊಳಿಸುತ್ತಾರೆ.

ಹತ್ತು ಹಲವು ಮೂಲದ ಲೂಟಿಯೊಂದಿಗೆ ಬಳ್ಳಾರಿ ಅಕ್ರಮ ಗಣಿಗಾರಿಕೆ ಮೂಲಕ ನಡೆದಿರುವ ಲೂಟಿಯ ಹಣ ರೆಡ್ಡಿ ಸಹೋದರರ ಮೂಲಕ ಬಿಜೆಪಿಯ ಚುನಾವಣಾ ಖರ್ಚು ವೆಚ್ಚಗಳಿಗೆ, ಶಾಸಕ, ವಿರೋಧಪಕ್ಷಗಳ ಮುಖಂಡರು, ಚುನಾಯಿತ ಸದಸ್ಯರ ಖರೀದಿಗೆ ಹೇಗೆ ಬಳಕೆಯಾಗ್ತಾ ಇದೆ ಅನ್ನೊದು ದೇಶದಲ್ಲೆಲ್ಲಾ ಈಗಾಗಲೇ ಜನ ಜನಿತವಾಗಿದೆ.

ಬಿಜೆಪಿಯ ಇಂತಹ ಹಣ ಥೈಲಿಯ ರಾಜಕಾರಣದಿಂದಲೇ ಹಣ ಪಡೆದು ಮತ ನೀಡುವ ಪ್ರವೃತ್ತಿಯಲ್ಲಿ ಕರ್ನಾಟಕವು ದೇಶಕ್ಕೇ ಮೊದಲ ಸ್ಥಾನದಲ್ಲಿ ನಿಂತಿದೆ.

ಜನಪರ ಹೋರಾಟ, ತತ್ವಾಧಾರಿತವಾದ ಎಡಪಂಥೀಯ ರಾಜಕಾರಣ ಆಳವಾಗಿ ಬೇರೂರಿರುವ ಕಾರಣದಿಂದಲೇ ಕೇರಳ, ಪಶ್ಚಿಮಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಹಣಕ್ಕಾಗಿ ಮತ ನೀಡುವ ಪ್ರವೃತ್ತಿ ಅತ್ಯಂತ ಕಡಿಮೆ ಇದೆ ಅಲ್ಲವೇ?

★★★

ನೈತಿಕತೆಯ ಕುರಿತು ಭಾಷಣ

ನೈತಿಕತೆ, ಶಿಸ್ತು, ಇತ್ಯಾದಿಗಳ ಬಗೆಗೆ ಘನಘೋರ ಭಾಷಣಗಳನ್ನು ಕೇಳಬೇಕಾದರೆ ನೀವು ಬಿಜೆಪಿ ಮುಖಂಡರ ಮಾತಿಗೆ ಕಿವಿಗೊಡಬೇಕು. ಕರ್ನಾಟಕದ ಮುಖಂಡರೇನು ಇದರಲ್ಲಿ ಹಿಂದೆ ಬಿದ್ದಿಲ್ಲ. ಹಾಗೇ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯ ವಿಷಯದಲ್ಲಿಯೂ ಬಿಜೆಪಿ ತುಂಬಾ ಮುಂದಿದೆ.

ವಿವಿಧ ರಾಜಕೀಯ ಪಕ್ಷಗಳ ವಿರುದ್ಧ ಚುನಾವಣಾ ಆಯೋಗದ ದೂರು ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಹೀಗಿದೆ - ಬಿಜೆಪಿ -24, ಕಾಂಗ್ರೆಸ್ -09, ಜೆಡಿ(ಎಸ್)-09, ಬಿಎಸ್‌ಪಿ -02

ಸ್ಯಾಂಪಲ್ 1: "ಚುನಾವಣೆ ನಂತರ ನಿನ್ನನ್ನು ನೋಡ್ಕೋತಿ" ಹೀಗಂತ ಹೇಳಿದ್ದು ಬಿಜೆಪಿ ಮುಖಂಡ ಗುರುಪಾದಪ್ಪ ನಾಗಮಾರಪಲ್ಲಿ. ಯಾರಿಗೆ? ಚುನಾವಣಾಧಿಕಾರಿಗೆ. ಮಾರ್ಚ್ 15 ರಂದು ಮುಜರಾಯಿ ಇಲಾಖೆಯ ಬೀದರ್‌ನ ಶಿವನಗರದ ಪಾಪನಾಶ ದೇವಸ್ಥಾನದಲ್ಲಿ ಬಿಜೆಪಿ ಸಭೆ ನಡೆಸಿ ನೀತಿ ಸಂಹಿತೆ ಉಲ್ಲಂಘಿಸಿದ ಕಾರಣದಿಂದ ಅವರ ಮೇಲೆ ಚುನಾವಣಾಧಿಕಾರಿ ಮೊಕದ್ದಮೆ ದಾಖಲಿಸಿದ್ದರು. ಬಿಜೆಪಿ ಮುಖಂಡರಾದಾಕ್ಷಣ ತಮಗೆರಡು ಕೋಡು ಬಂದಿದೆ ಅಂತ ಭಾವಿಸಿದರೇನೋ ಗುರುಪಾದಪ್ಪ ನಾಗಮಾರಪಲ್ಲಿ.

★★★

ಬಡವರಿಗೆ ಸಹಾಯ!!

ಬಿಜೆಪಿಯ ಹಿರಿಯ ನಾಯಕ ಜಸ್ವಂತ್ ಸಿಂಗ್ ರವರ ಮಗ ರಾಜ್ಯದ ಬಾರ್ಮರ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಪರವಾಗಿ ಸ್ಪರ್ಧಿಸುತ್ತಿದ್ದಾರೆ. ಅದರಲ್ಲೇನು ವಿಶೇಷ ಇಲ್ಲ ಅಲ್ಲವೇ? ವಂಶಪಾರಂಪರ್ಯ ರಾಜಕಾರಣದ ವಿರುದ್ಧ ಮಾತನಾಡುವ ನೈತಿಕತೆ-ಅರ್ಹತೆಯನ್ನು ಬಿಜೆಪಿ ಎಂದೋ ಕಳೆದುಕೊಂಡು ಬಿಟ್ಟಿದೆ. ಈಗ ಯಾಕೆ ಆ ಸಮಾಚಾರ ಅಂತನಾ? ಸಮಾಚಾರ ಅದಲ್ಲ. ಮಗನ ಪರವಾಗಿ ಸ್ವತಃ ಜಸ್ವಂತ್ ಸಿಂಗ್ ಬಾರ್ಮರ್ ಕ್ಷೇತ್ರದ ಗಜರಿಯಾ ಗ್ರಾಮದಲ್ಲಿ ಮತದಾರರಿಗೆ ಹಣ ಹಂಚಿದ್ದಾರೆ. ಈ ಕುರಿತು ದೃಶ್ಯಾವಳಿಗಳು ಟಿ.ವಿ.ಚಾನೆಲ್‌ಗಳೆಲ್ಲಾ ಪ್ರಸಾರವಾದವು.

ಜಸ್ವಂತ್ ಅವರೂ ಹಣ ಹಂಚಿದ್ದನ್ನು ನಿರಾಕರಿಸುತ್ತಿಲ್ಲ. "ಬಡವರಿಗೆ ಸಹಾಯ ಮಾಡುವುದು ನನ್ನ ಕರ್ತವ್ಯ.. ನಾನು ಬಡವರಿಗೆ ಸಹಾಯ ಮಾಡುವುದನ್ನು ನಿಲ್ಲಿಸಲಾರೆ" ಅಂತ ಅವರು ಹಣ ಹರಿಸಿದ್ದನ್ನು ಸಮರ್ಥಿಸಿಕೊಂಡಿದ್ದಾರೆ.

ಕಳೆದ ಚುನಾವಣೆಯ ಸಮಯದಲ್ಲಿ ಬಿಜೆಪಿ ಮುಖಂಡರು ಹೀಗೆ ಬಡ ಮಹಿಳೆಯರಿಗೆ ಸೀರೆ ಹಂಚಲು ಯತ್ನಿಸಿ ಅಂದಿನ ಪ್ರಧಾನಿ ವಾಜಪೇಯಿಯವರ ಕ್ಷೇತ್ರದಲ್ಲಿ 25 ಬಡ ಮಹಿಳೆಯರು ನೂಕು ನುಗ್ಗಾಟದಲ್ಲಿ ಪ್ರಾಣ ತೆತ್ತಿದ್ದರು ಅನ್ನೊದನ್ನ ಜನ ನೆನಪಿಸಿಕೊಂಡರೆ... ಏನು ತಪ್ಪಿಲ್ಲ ಬಿಡಿ..

★★★

"ಎನ್‌ಡಿಎ ಗೆ ಬಹುಮತ ಬರಲ್ಲ ಬಿಜೆಪಿ ಜೊತೆ ಎನ್‌ಡಿಎ ಪಕ್ಷಗಳು ಬರಲ್ಲ"

- ಸುಶಾಸ್ವರಾಜ್

ಯಾರು ಈ ಸುಶ್ಮಾಸ್ವರಾಜ್ ಅಂತೀರಾ. ನಿಜ ಅವರೇ ಬಿಜೆಪಿಯ ರಾಷ್ಟ್ರೀಯ ನಾಯಕಿ, ಬಳ್ಳಾರಿಯ ಸೊಸೆ ಸುಷ್ಮಾಸ್ವರಾಜ್. ಭಾರತದ ರಾಜಕಾರಣದಲ್ಲಿ ರೂಪುಗೊಳ್ಳುತ್ತಿರುವ ಪರಿಸ್ಥಿತಿ ಏನು ಅಂತ ಅವರಿಗೆ ಒಂದಿಷ್ಟು ಅರ್ಥವಾದಂತಿದೆ. ಅವರು ಮೊನ್ನೆ ಏನು ಹೇಳಿದರು ಎಂದರೆ 'ಎನ್‌ಡಿಎಗೆ ಬಹುಮತ ಬರುವುದಿಲ್ಲ' ಅಂತ ನೇರವಾಗಿ ಒಪ್ಪಿಕೊಂಡಿದ್ದಾರೆ "ಎನ್.ಡಿ.ಎ. ಸ್ವಂತ ಬಲದಲ್ಲಿ ಬಹುಮತ ಪಡೆಯುವ ಭರವಸೆ ನನಗಿಲ್ಲ. ಅದರೆ ಅದು ಏಕೈಕ ದೊಡ್ಡ ಮೈತ್ರಿಕೂಟವಾಗಿ ಮೂಡಿಬಂದರೆ ಚುನಾವಣೋತ್ತರ ಮೈತ್ರಿಯ ಮೂಲಕ ಸರ್ಕಾರ



ರಚಿಸಬಹುದು" ಅಂದಿದ್ದಾರೆ.

ಇತ್ತಕಡೆ ಬಿಜೆಪಿ ಅಧ್ಯಕ್ಷ ರಾಜನಾಥಸಿಂಗ್, ರಾಷ್ಟ್ರೀಯ ಉಪಾಧ್ಯಕ್ಷ ವೆಂಕಯ್ಯನಾಯ್ಡು ಅವರೆಲ್ಲರೂ ಎಲ್.ಕೆ.ಅಡ್ವಾಣಿಯವರೇ ಮುಂದಿನ ಪ್ರಧಾನಿ ಅಂತ ಕಿರುಚುತ್ತಾ ಇರೋವಾಗ ಸುಷಾಸ್ವರಾಜ್ ಇಂತಹ ಮಾತಾಡಿರುವುದು ಬಿಜೆಪಿ ಅಬ್ಬರ, ಬೊಬ್ಬೆಯ ಪ್ರಚಾರದ ಬಲೂನಿಗೆ ಸೂಜಿ ಚುಚ್ಚಿದಂತಾಗಿದೆ.

ಇಷ್ಟೇ ಅಲ್ವ, ಸುಷ್ಮಾಸ್ವರಾಜ್ ಅವರು ಕಳೆದ ವಾರ ಮತ್ತೊಂದು ಸತ್ಯ ಹೇಳಿದ್ದರು. ಏನೆಂದರೆ ಎನ್‌ಡಿಎ ಯಲ್ಲಿನ ಬಿಜೆಪಿ ಮಿತ್ರ ಪಕ್ಷಗಳು ಚುನಾವಣೆ ನಂತರ ಬಿಜೆಪಿ ಜೊತೆ ಉಳಿಯುವುದಿಲ್ಲ ಅಂತ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಂದರ್ಶನವೊಂದರಲ್ಲಿ ಅವರು ಅದನ್ನು ಸ್ಪಷ್ಟವಾಗಿ ಹೇಳಿದ್ದಾರೆ. 'ಚುನಾವಣೆಯ ನಂತರ ಎನ್‌ಡಿಎ ಮಿತ್ರ ಪಕ್ಷಗಳು ನಮ್ಮ ಜೊತೆ ಬರುವಂತೆ ಕಾಣುತ್ತಿಲ್ಲ. ಚುನಾವಣೋತ್ತರ ಮೈತ್ರಿಯ ಮೂಲಕ ಕೇಂದ್ರ ಸರ್ಕಾರ ರಚಿಸುವ ಯತ್ನ ಮಾಡಬೇಕಾಗಿದೆ' ಅಂತ ಅವರ ಅಂಬೋಣ.

★★★

ಎಷ್ಟು ನಾಲಿಗೆ ಸಂಘಪರಿವಾರಕ್ಕೆ?

ಸಂಘ ಪರಿವಾರಕ್ಕೆ ಎಷ್ಟು ನಾಲಿಗೆಯೋ ಬಲ್ಲವರ್‍ಯಾರು?! ವರುಣ್‌ಗಾಂಧಿಯ ಮುಸ್ಲಿಂ ದ್ವೇಷದ ಪಿಲಿಭಿಟ್ ಭಾಷಣದ ಸಿ.ಡಿ. ನಕಲಿ, ಅದನ್ನು ತಿರುಚಲಾಗಿದೆ ಅಂತ ಕೆಲವರು ಹೇಳುತ್ತಾರೆ. ಆತ ಮಾತಾಡಿದ್ದರಲ್ಲಿ ತಪ್ಪೇನಿದೆ? ಎಲ್ಲ ಸರಿಯಿದೆ ಅಂತ ಇನ್ನೂ ಕೆಲವರು ಮುಸ್ಲಿಂ ದ್ವೇಷಿ ಪ್ರಚೋದನಾಕಾರಿ ಭಾಷಣವನ್ನು ಸಮರ್ಥಿಸುತ್ತಾರೆ. ಇನ್ನು ಕೆಲವರು ಆತ ರಾಜಕಾರಣಕ್ಕೆ ಇನ್ನೂ ಹೊಸಬ 'ಹೋಗಲಿ ಬಿಡಿಪ್ಪ' ಅನ್ನೋ ಧ್ವನಿಯಲ್ಲಿ ಮಾತಾಡುತ್ತಾರೆ. ವರುಣ ಗಾಂಧಿ ಭಾಷಣದ ಕುರಿತು ಮೊದಲು ವರದಿಯಾದಾಗ ಅದು ಬಿಜೆಪಿ ಪಕ್ಷ... ನೀತಿ ಅಲ್ಲ ಅಂತ ಕೆಲವರು ಸ್ಪಷ್ಟನೆ ಕೊಟ್ಟರು... ಏನೇನೂ ಸಾಧ್ಯವಿದೆಯೋ ಎಲ್ಲವನ... ಮಾತನಾಡುವಾಗಲೇ ಇವರೆಲ್ಲರಲ್ಲೂ ... ವಿಷಯಕ್ಕೆ ಸಮ್ಮತಿ ಇದೆ. ಅದೇನೆಂದ... ವರುಣ್‌ಗಾಂಧಿಗೆ ಬುದ್ಧಿ ಹೇಳುವ ಮಾತು ಇವರ... ಬಾಯಿಂದಲೂ ಬರುವುದಿಲ್ಲ. ಪಿಲಿಭಿಟ್ ಕ್ಷೇತ್ರ... ವರುಣ್ ಗಾಂಧಿಯೇ ಅಭ್ಯರ್ಥಿ. ಅವರನ್ನು ... ಬಿಡುವ ಪ್ರಶ್ನೆಯೇ ಇಲ್ಲ ಎನ್ನುತ್ತಾರೆ. ಹೇಗಿದೆ ತಂತ್ರ...


'ಮುಸ್ಲಿಮರ ಮತ ಬೇಡ' - ಅನಂತಕುಮಾರ ಹೆಗಡೆ

'ಮುಸ್ಲಿಮರ ಮತ ಬೇಕು' - ಯಡಿಯೂರಪ್ಪ

ಇಲ್ಲಿ ಕರ್ನಾಟಕದ ರಾಜ್ಯದಲ್ಲೂ ಇಂತಹದ... ಕಡಿಮೆ ಏನಿಲ್ಲ. ಉತ್ತರ ಕನ್ನಡ ಜಿಲ್ಲೆಯ ಬಿಜ... ಸಂಸದ ಅನಂತಕುಮಾರ ಹೆಗಡೆ ಮುಸ್ಲಿಮ... ಮೆರವಣಿಗೆ ಮಾಡಲು ಬಿಡುವುದಿಲ್ಲ. ನ... ಮುಸ್ಲಿಮರ ಒಂದೇ ಒಂದು ಮತವೂ ... ಚುನಾವಣಾ ಆಯೋಗ ಬೇಕಿದ್ದರೆ ನನ್ನ ವಿರುದ್ಧ ಕ್ರ... ಕೈಗೊಳ್ಳಲಿ ಅಂತ ಪದೇ ಪದೇ ಸವಾ... ಹಾಕುತ್ತಿದ್ದಾರೆ.

ಈ ಕಡೆ ನಮ್ಮ ಯಡಿಯೂರಪ್ಪನವರ ಕತೆ ವಿ... ಚುನಾವಣೆಗಳು ಬಂದಾಗ ಅವರಿಗೆ ಮುಸಲ್ಮಾ... ಮೇಲೆ ಪ್ರೀತಿ ಉಕ್ಕಿ ಹರಿಯುತ್ತಿದೆ. ಅವ... ಮುಸ್ಲೀಮರ ಮತಗಳು ಈಗ ಬೇಕಾಗಿದೆ ಅನಿಸ... ಇರಬಹುದು. ದೇಶ ದ್ರೋಹಿಗಳ ಜೆ... ಮುಸ್ಲಿಮರನ್ನು ಹೋಲಿಸಬಾರದು ಅಂತ ಅ... ಅಲವತ್ತು ಕೊಂಡಿದ್ದಾರೆ (ಯಾರು ಹ... ಮಾಡುತ್ತಿರುವವರು!?)

ಬಿಜೆಪಿ ಅಲ್ಪಸಂಖ್ಯಾತರ ಮೋಚ... ಸಂಘಟಿಸಿದ್ದ 'ವಿಜಯ ಸಂಕಲ್ಪ' ಸಮಾವೇಶ...



ಚುನಾವಣೆ ಕಾಲಕ್ಕೆ ಟೋಪಿ!
ಇದು ಓಲೈಕೆಯಲ್ಲವೇ?

ಮುಸ್ಲಿಮರು ಧರಿಸುವ ಬಿಳಿ ಟೋಪಿ ... ಪಾಲ್ಗೊಂಡ ಯಡಿಯೂರಪ್ಪ ಅಲ್ಪಸಂ... ಸಮುದಾಯ ದೂರವಿರದೇ ಹತ್ತಿರ ಬ... ನೋಡಬೇಕು.. ಎಲ್ಲಾ ಜಾತಿ, ಧರ್ಮಗಳ ಜ... ಒಂದೇ ತಾಯಿಯ ಮಕ್ಕಳು ಎಂಬ ಭಾವನೆ ಮೂ... ಕರ್ನಾಟಕದಲ್ಲಿ ಹೊಸ ಪರ್ವ ಆರಂಭಿಸ... ಅಂತೆಲ್ಲಾ ಉಗ್ರ ಭಾಷಣ ಚಚ್ಚಿದ್ದಾರೆ.

ಇಂಥ ಯಡಿಯೂರಪ್ಪ ಅನಂತಕುಮಾ... ಹೆಗಡೆ ಹೇಳಿಕೆಯನ್ನು ಖಂಡಿಸಿ ಅವರಿಗೆ ... ಟಿಕೆಟ್ ನಿರಾಕರಿಸಲು ಶಿಫಾರಸ್ಸು ಮಾಡಿದ... ಉಹುಂ ಅಂತಾ ಪ್ರಶ್ನೆಗಳನ್ನೆಲ್ಲಾ ಕೇಳಬಾರದ...

...ಪಿಐ(ಎಂ) ಮತ್ತು ಎಡಪಕ್ಷಗಳ ಜನಬೆಂಬಲ

...ಬರುವ ಲೋಕಸಭಾ ಚುನಾವಣೆಗಳಲ್ಲಿ ...ಕ್ಷಗಳ ಜನ ಬೆಂಬಲ ಕುಸಿಯುತ್ತದೆ, ಗಳಿಸುವ ...ಳ ಸಂಖ್ಯೆಯೂ ಬಾರಿ ಕುಸಿಯುತ್ತದೆ ಅಂತೆಲ್ಲಾ ...ನಿಸ್ಟ್ ವಿರೋಧಿ ಶಕ್ತಿಗಳು ಹಲವಾರು ...ಕ್ಷೆ' 'ಜನಾಭಿ ಪ್ರಾಯ'ಗಳನ್ನು ತೇಲಿ ಬಿಟ್ಟವೆ. ...ಪಿಐ(ಎಂ) ಮತ್ತು ಎಡಪಕ್ಷಗಳ ರಾಜಕೀಯ ...ದ್ದು, ಆದರ ಜನ ಬೆಂಬಲ ಯಾವ ಪರಿಯದು ...ದರ ತಳ ಬುಡ ಗೊತ್ತಿಲ್ಲದವರ ...ಜುಗಳು ಇವು.

...ಮಾರ್ಚ್ 30, 2009 ರ ಕನ್ನಡ ಪ್ರಭ ಪತ್ರಿಕೆಯಲ್ಲಿ ...ಮು ಅಂಕಿ-ಅಂಶಗಳ ಪಟ್ಟಿ ಪ್ರಕಟವಾಗಿದೆ. ...ರ ಚುನಾವಣೆಯಲ್ಲಿ ಇಡೀ ದೇಶದಲ್ಲಿ ಅತಿ ... ಅಂತರದಿಂದ ಜಯಗಳಿಸಿದ ಮೇಲಿನ ಹತ್ತು ...ರೆ ಟಾಪ್ -10 ಲೋಕಸಭಾ ಕ್ಷೇತ್ರ - ಪಕ್ಷಗಳ ...ನ್ನು ಕೊಡಲಾಗಿದೆ. ಅದೇ ರೀತಿ ಮೇಲಿನ ...ತ್ತು ಅಂದರೆ ಟಾಪ್-50 ಕ್ಷೇತ್ರಗಳ ಕುರಿತು ...ಹಿತಿ ಸಹ ಇದೆ.

ಅತಿ ಹೆಚ್ಚು ಅಂತರದಿಂದ ಗೆದ್ದವರಲ್ಲಿ ಪ್ರಥಮ ಸ್ಥಾನದಲ್ಲಿ ನಿಂತಿರುವವರು ಪಶ್ಚಿಮ ಬಂಗಾಳದ ಅರಮಬಾಗ್ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಅನಿಲ್ ಬಸು. ಅಂತರ 5,92,502. ಈ ಟಾಪ್ 10 ಸ್ಥಾನಗಳಲ್ಲಿ 5 ಸ್ಥಾನಗಳು ಸಿಪಿಐ(ಎಂ)ಗೆ ದಕ್ಕಿವೆ. ನಾವು ಮಾತ್ರವೇ ರಾಷ್ಟ್ರೀಯ ಪಕ್ಷಗಳೆನ್ನುವ ಕಾಂಗ್ರೆಸ್, ಬಿಜೆಪಿಗಳಿಗೆ ಟಾಪ್-10 ಪಟ್ಟಿಯಲ್ಲಿ ಜಾಗವೇ ಇಲ್ಲ!

ಟಾಪ್ 50 ರ ಪಟ್ಟಿಯಲ್ಲಿ 42 ಲೋಕಸಭಾ ಸ್ಥಾನಗಳಿರುವ ಪಶ್ಚಿಮ ಬಂಗಾಳಕ್ಕೆ 11 ಸ್ಥಾನಗಳು ದಕ್ಕಿವೆ. ತ್ರಿಪುರಾ ರಾಜ್ಯದ ಎರಡೂ ಸಿಪಿಐ(ಎಂ) ಸ್ಥಾನಗಳು ಇದೇ ಪಟ್ಟಿಯಲ್ಲಿ ಬರುತ್ತವೆ. 'ಭವಿಷ್ಯತ್ವದ ಪ್ರಧಾನಿ' ನರೇಂದ್ರಮೋದಿಯವರ ಗುಜರಾತ್‌ಗೆ ಕೇವಲ 1 ಸ್ಥಾನ. ಹೇಗಿದೆ ಎಡಪಕ್ಷಗಳ ಜನ ಬೆಂಬಲ.

ಲೋಕಸಭಾ ಹಾಜರಾತಿ ಚರ್ಚೆ-ಪಾಲ್ಗೊಳ್ಳುವಿಕೆಯಲ್ಲೂ 1ನೇ ರ್‍ಯಾಂಕ್

ಪಾರ್ಲಿಮೆಂಟ್‌ನಲ್ಲಿ ಹಾಜರಾಗಿ ಚರ್ಚೆಯಲ್ಲಿ ಪಾಲ್ಗೊಳ್ಳುವುದರಲ್ಲಿ, ಜನರ ಪರವಾಗಿ ಪ್ರಶ್ನೆ ಕೇಳುವುದರಲ್ಲಿಯೂ ಸಿಪಿಐ(ಎಂ) ಲೋಕಸಭಾ ಸದಸ್ಯರು ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ ಅನ್ನುವ ವಿಚಾರಗಳು ಇದೇ ಸಂದರ್ಭದಲ್ಲಿ ಜನಕ್ಕೆ ನೆನಪಾದರೆ ತಪ್ಪೇನಿಲ್ಲ.



ಸಿಪಿಐ(ಎಂ) ಜನಬೆಂಬಲದ ಬೇರು ಹಳ್ಳಿ ಗಲ್ಲಿ ಗಲ್ಲಿಗಳಲ್ಲಿ

ಫ್ಯಾಸಿಸ್ಟ್ ಮೋದಿಯ ಗುಜರಾತ್...

ಪುಟ 10 ರಿಂದ

ತಲಾದಾಯವಿರುವವರನ್ನು ಬಡತನ ರೇಖೆಗಿಂತ ಕೆಳಗಿರುವವರೆಂದು ನಿಗದಿಪಡಿಸಿದೆ. ಆದರೆ ಗುಜರಾತ್ ಸರ್ಕಾರವು ಬಡತನ ರೇಖೆಗಿಂತ ಕಡಿಮೆಯಿರುವವರ ಸಂಖ್ಯೆಯನ್ನು ಕಡಿಮೆಗೊಳಿಸಲು ಈ ಮಾನದಂಡವನ್ನೇ ಪರಿಷ್ಕರಿಸಿ ತಿಂಗಳಿಗೆ ನಗರ ಪ್ರದೇಶದಲ್ಲಿ ರೂ. 541/- ಗಿಂತ ಕಡಿಮೆ ಆದಾಯವಿರುವವರು ಮತ್ತು ಗ್ರಾಮೀಣ ಪ್ರದೇಶದಲ್ಲಿ ರೂ. 353/- ಗಿಂತ ಕಡಿಮೆ ಗಳಿಸುವವರನ್ನು ಬಡತನ



ರೇಖೆಗಿಂತ ಕಡಿಮೆ ಇರುವವರು ಎಂದು ತಾನೇ ನಿಗದಿಪಡಿಸಿಕೊಂಡಿದೆ!

ನ್ಯಾನೋ ಕಾರು ಯೋಜನೆಗೆ ತೆತ್ತ ಬೆಲೆ ಏನು ?

ಟಾಟಾ ಕಂಪನಿಯ ನ್ಯಾನೋ ಕಾರು ಯೋಜನೆಯನ್ನು ಪಶ್ಚಿಮ ಬಂಗಾಳದಿಂದ ಗುಜರಾತಿಗೆ ವರ್ಗಾಯಿಸಲು ಮೋದಿ ಸರ್ಕಾರ ತೆತ್ತ ಬೆಲೆ ಎಂಥದು? ಟಾಟಾ ಕಂಪನಿಗೆ ಸುಮಾರು ರೂ. 10,000 ಕೋಟಿ ಬಡ್ಡಿರಹಿತ ಸಾಲ (ಬಡ್ಡಿ ಕೇವಲ ಶೇ 0.1 ಮಾತ್ರ), 20 ವರ್ಷಗಳ ದೀರ್ಘಾವಧಿ ಸಾಲವದು. ಪಶ್ಚಿಮ ಬಂಗಾಳದಿಂದ ಟಾಟಾ ಕಂಪನಿಯ ಮೆಷಿನರಿಗಳನ್ನು ಗುಜರಾತಿಗೆ ಸಾಗಣೆ ಮಾಡುವ ವೆಚ್ಚ ರೂ. 700 ಕೋಟಿಯನ್ನು ಸಹ ಮೋದಿ ಸರ್ಕಾರ ಭರಿಸಿದೆ. ಟಾಟಾ ಕಂಪನಿಗೆ ಅವಶ್ಯವಿರುವ ವಿದ್ಯುಚ್ಛಕ್ತಿ ಮೂಲಭೂತ ಸೌಕರ್ಯಗಳ ವೆಚ್ಚವನ್ನು ಅದೇ ಭರಿಸಿತು.

ಹೀಗೆ ಬಡ್ಡಿರಹಿತ ಸಾಲ, ತೆರಿಗೆ ವಿನಾಯಿತಿ ಮತ್ತು ಇನ್ನಿತರ ವೆಚ್ಚಗಳಿಂದ ಮುಂದಿನ 20 ವರ್ಷಗಳಲ್ಲಿ ಟಾಟಾ ಕಂಪನಿಗೆ ಗುಜರಾತ್ ಸರ್ಕಾರ ಮಾಡಿರುವ ಸಹಾಯಹಸ್ತದ ಅಂದಾಜು ರೂ. 30,000 ಕೋಟಿ.

ಪಾತಾಳ ತಲುಪಿರುವ ಬೇಸಾಯ ಮತ್ತು ಸಣ್ಣ ಕೈಗಾರಿಕೆಗಳು

2001ನೇ ಜನಗಣತಿ ಪ್ರಕಾರ ಶೇ. 46ರಷ್ಟು ಜನರು ತೊಡಗಿರುವ ಕೃಷಿಯು ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ಕೇವಲ ಶೇ. 15ರಷ್ಟು ಕೊಡುಗೆ ನೀಡುತ್ತಿದೆ. ರಾಜ್ಯದ ಕೃಷಿ ಉತ್ಪಾದನೆಯು ಕುಂಠಿತಗೊಂಡಿದ್ದು, 2003-04ರಲ್ಲಿ ವಾರ್ಷಿಕ 65.71 ಲಕ್ಷ ಟನ್ ಇದ್ದದ್ದು 2004-05ರ ಹೊತ್ತಿಗೆ 51.53 ಲಕ್ಷ ಟನ್‌ಗೆ ಇಳಿದಿದೆ.

ಅಲ್ಲಿನ ಗೃಹ ಕೈಗಾರಿಕೆಗಳು, ಕರಕುಶಲ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು ಸಂಪೂರ್ಣವಾಗಿ ನಾಶಹೊಂದಿವೆ. ಉದಾಹರಣೆಗೆ, ಗುಜರಾತಿನಲ್ಲಿ ಸುಮಾರು 3 ಲಕ್ಷ ಸಣ್ಣಕೈಗಾರಿಕೆಗಳಿದ್ದರೂ ಕಳೆದ 5 ವರ್ಷಗಳಲ್ಲಿ ಅವುಗಳಲ್ಲಿ ಹೂಡಿಕೆಯಾಗಿರುವ ಬಂಡವಾಳ ಕೇವಲ ರೂ. 115 ಕೋಟಿ ಮಾತ್ರ.

ಇದರಿಂದಾಗಿಯೇ ಕಾರ್ಮಿಕರು, ಕೂಲಿಕಾರರು, ರೈತರು, ಅಲ್ಪಸಂಖ್ಯಾತರು ಮತ್ತು ದಲಿತರಿಗೆ ಅದು ನರಕ ರಾಜ್ಯವೆನಿಸಿದೆ. ನಳನಳಿಸುವ ಗುಜರಾತ್ ಎಂಬುದು ಬಿಜೆಪಿಯು ಈ ಹಿಂದೆ ಲೋಕಸಭಾ ಚುನಾವಣೆಯಲ್ಲಿ ಬಳಸಿದ್ದ 'ಪ್ರಕಾಶಿಸುತ್ತಿರುವ ಭಾರತ' ಎಂಬ ನಗೆಪಾಟಲಿಗೀಡಾದಂತಹ ಮಾರ್ಕೆಟಿಂಗ್ ತಂತ್ರವಷ್ಟೆ. ○

ಆರ್ಥಿಕ ಬಿಕ್ಕಟ್ಟಿಗೆ ಏನು ಪರಿಹಾರಗಳಿವೆ ?

...ಪುಟ 13 ರಿಂದ

...ಆದರೆ ಭಾರತದಲ್ಲಿ ಆಳುವ ವರ್ಗಗಳು, ಅವರ ...ಪ್ರಧಾನ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ...ನವ-ಉದಾರವಾದಿ ನೀತಿಗಳ ಬಗ್ಗೆ ಪುನರಾ...ಲೋಚನೆ ಮಾಡುವಂತೆ ಕಾಣುತ್ತಿಲ್ಲ. ಕಾಂಗ್ರೆಸ್ ...ಪಕ್ಷದ ಕೇಂದ್ರ ಸರಕಾರ ಭಾರತವನ್ನೂ ಈ ಬಿಕ್ಕಟ್ಟು ...ಪ್ರಾರಂಭಿಸಿದೆ ಎಂದು ಒಪ್ಪಿಕೊಂಡ ಮೇಲೂ ...ಅದರ ಸ್ಪಂದನ ತೀರಾ ಅಸಮರ್ಪಕವಾಗಿದೆ.

...ಬಿಕ್ಕಟ್ಟು ಎದುರಿಸುವ ಪ್ಯಾಕೆಜಿಗೆಂದು ಅದು ...ಟ್ಟಿರುವುದು ಕೇವಲ 20,000ಕೋಟಿ ರೂ. ಇದು ...ದೇಶದ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ 0.5 ...ಶೇಕಡಾ ಮಾತ್ರ. ಐಎಂಎಫ್ ಅಂದಾಜಿನ ಪ್ರಕಾರ ...ವಾಗಿ ಗಮನಾರ್ಹ ಬೆಳವಣಿಗೆ ಮಾಡುತ್ತಿವೆ ...ನಾದ ಜಿ-20 ದೇಶಗಳಲ್ಲೇ ಅತಿ ಕಡಿಮೆ. ಚೀನಾ ... ಜಿಡಿಪಿಯ 2 ಶೇಕಡ ಕೊಟ್ಟಿದೆ. ಅಮೆರಿಕಾ ... ಶೇಕಡಾ ಕೊಟ್ಟಿದೆ. ಇಂಡೋನೇಸ್ಯಾ ಕೂಡಾ 1.3 ಶೇಕಡಾ ಕೊಟ್ಟಿದೆ.

ಇದಕ್ಕಿಂತ ಹೆಚ್ಚು ಕೊಡಲು ತನ್ನ ಬಳಿ ಹಣವಿಲ್ಲ ಎನ್ನುವ ಕೇಂದ್ರ ಸರಕಾರ ಅದೇ ವೇಳೆಗೆ ದೊಡ್ಡ ಕಾರ್ಪೊರೇಟ್‌ಗಳಿಗೆ 30,000 ಕೋಟಿ ರೂ.ಗಳ ಬೇಷರತ್ ತೆರಿಗೆ ರಿಯಾಯ್ತಿಗಳನ್ನು ಕೊಡಮಾಡಲು ಹಿಂದೆ ಮುಂದೆ ನೋಡಿಲ್ಲ.

ಅಂತರ್ರಾಷ್ಟ್ರೀಯ ತೈಲಬೆಲೆಗಳು ಬ್ಯಾರಲ್ಲಿಗೆ 45 ಡಾಲರುಗಳಿಗೆ ಇಳಿದುದರಿಂದ ವೈಮಾನಿಕ ಇಂಧನದ ದರಗಳನ್ನು ಸೆಪ್ಟಂಬರ್ 2008ರಿಂದ ಜನವರಿ 2009ರ ನಡುವೆ ಹನ್ನೊಂದು ಬಾರಿ ಇಳಿಸಿದರೂ, ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಕೇವಲ ಎರಡು ಬಾರಿ, ಅಡುಗೆ ಅನಿಲ ದರವನ್ನು ಕೇವಲ ಒಂದೇ ಬಾರಿ ಇಳಿಸಿದೆ.

ಹತ್ತಿ, ತೆಂಗು, ಕಾಫಿ, ರಬ್ಬರ್ ಮೊದಲಾದ ಹಣದ ಬೆಳೆಗಳ ಅಂತರ್ರಾಷ್ಟ್ರೀಯ ಬೆಲೆಗಳು ತೀವ್ರವಾಗಿ ಕುಸಿಯುತ್ತಿದ್ದರೂ ಇವನ್ನು ಬೆಳೆಯುವ ನಮ್ಮ ರೈತರಿಗೆ ರಕ್ಷಣೆ ಕೊಡುವ ಬಗ್ಗೆ ಸರಕಾರ ಗಂಭೀರ ಚಿಂತನೆಯನ್ನೇನೂ ಮಾಡುತ್ತಿಲ್ಲ.

ಇವು ಕಾಂಗ್ರೆಸಿನ ವರ್ಗಪಕ್ಷಪಾತಕ್ಕೆ, ಅದು ನವ-ಉದಾರವಾದಿ ನೀತಿಗಳನ್ನು ಬಿಡಲು ಇನ್ನೂ ಸಿದ್ಧವಿಲ್ಲ ಎಂಬುದಕ್ಕೆ ನಿದರ್ಶನ.

ಬಿಜೆಪಿ ವಕ್ತಾರರು ಈ ವಿಷಯದಲ್ಲಿ ಕಾಂಗ್ರೆಸನ್ನು ಟೀಕಿಸುವ ಅವಕಾಶವನ್ನು ಬಳಸಿಕೊಂಡರೂ, ಬೇರೆ ಯಾವ ನಿರ್ದಿಷ್ಟ ಕ್ರಮಗಳನ್ನೂ ಸೂಚಿಸಲು ಅವರಿಗೆ ಸಾಧ್ಯವಾಗಿಲ್ಲ. ಬಹುಶಃ ಅವರ ಬಳಿ ಅಂತಹ ಪರ್ಯಾಯ ಕ್ರಮಗಳೂ ಏನೂ ಇಲ್ಲ. ಏಕೆಂದರೆ ಅವರದ್ದು ಪಕ್ಕಾ ಬಲಪಂಥೀಯ ಪಕ್ಷ. 1991ರ ನಂತರವಂತೂ ಆರ್ಥಿಕ ಧೋರಣೆಗಳಲ್ಲಿ ಬಿಜೆಪಿಗೂ ಕಾಂಗ್ರೆಸಿಗೂ ವ್ಯತ್ಯಾಸವೇನೂ ಉಳಿದಿಲ್ಲ. ಗುಜರಾತಿನಲ್ಲಿ ವಜ್ರ ಉದ್ದಿಮೆಯಲ್ಲಿ ಹಲವಾರು ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಮರ್ಪಕ ಕ್ರಮಗಳನ್ನು ಕೈಗೊಳ್ಳುವಲ್ಲಿ ಅದರ ವಿಫಲತೆ ಇದಕ್ಕೆ ನಿದರ್ಶನ.

ಎಡಪಕ್ಷಗಳ ಪರ್ಯಾಯ

ನಿಜವಾದ, ಕಾರ್ಯಸಾಧ್ಯ ನಿರ್ದಿಷ್ಟ ಪರ್ಯಾಯ ಕ್ರಮಗಳನ್ನು ಸೂಚಿಸಿರುವುದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರ. ಅಲ್ಲದೆ ದೇಶದ ಹಣಕಾಸು ವಲಯ ಇತರ ಬಂಡವಾಳಶಾಹಿ ದೇಶಗಳಲ್ಲಾದಂತೆ ಕುಸಿದೇ ಬೀಳದಂತೆ ತಡೆದಿರುವುದು ಕಳೆದ ಐದು ವರ್ಷಗಳಿಂದ ಎಡಪಕ್ಷಗಳು ನಿರಂತರವಾಗಿ ನಡೆಸಿರುವ ಮಧ್ಯಪ್ರವೇಶಗಳು ಎಂಬುದು "ಜನಶಕ್ತಿ"ಯ ಓದುಗರಿಗೆ ಚೆನ್ನಾಗಿಯೆ ಗೊತ್ತಿದೆ. ಒಂದು ಉದಾಹರಣೆಯನ್ನು ನೆನಪಿಸುವುದಾದರೆ, ಪೆನ್ಶನ್ ನಿಧಿಗಳನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸಿದ್ದರಿಂದ ಅಮೆರಿಕಾದಲ್ಲಿ ಜೂನ್ 2007ರ ನಂತರ ಅಲ್ಲಿಯ ಸರಕಾರಿ ನೌಕರರು ಕಷ್ಟಪಟ್ಟು ಉಳಿಸಿದ್ದ 1.2 ಟ್ರಿಲಿಯನ್ ಡಾಲರುಗಳು ಅಂದರೆ 61ಲಕ್ಷ ಕೋಟಿ ರೂಪಾಯಿಗಳು ಮಾಯವಾದವು.. ಇಲ್ಲಿ ಯುಪಿಎ ಸರಕಾರ •ತರಬಯಸಿದ್ದ ಪಿಎಫ್‌ಡಿಆರ್‌ಎ (ಭವಿಷ್ಯ ನಿಧಿ ಅಭಿವೃದ್ಧಿ ಮತ್ತು ನಿಯಂತ್ರಣ) ಮಸೂದೆಯನ್ನು ಅಂಗೀಕರಿಸಿದ್ದರೆ ಭಾರತದಲ್ಲೂ ಇದೇ ಪರಿಸ್ಥಿತಿ ಉಂಟಾಗುತ್ತಿತ್ತು. ಎಡಪಕ್ಷಗಳ ಬಲವಾದ ವಿರೋಧದಿಂದ ಇದು ಅಂಗೀಕಾರಗೊಳ್ಳಲಿಲ್ಲ.

JANASHAKTHI KANNADA VARA PATRIKE APRIL 12, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-0



ಮೀನುಗಾರರಿಗೆ ಬಿಜೆಪಿ ಉಚಿತ ಟೋಪಿ!

ಕಡಲತಡಿ ಊರು ಮಂಗಳೂರಿನ ದಕ್ಕೆಯಲ್ಲಿ ಒಮ್ಮೆ ಸುತ್ತಾಡಿ ಬಂದರೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಟೀಂ ಮೀನುಗಾರರಿಗೆ ಹೇಗೆ ಟೋಪಿ ಹಾಕಿದೆ ಎಂದು ತಿಳಿಯುತ್ತದೆ.

'ಮೀನುಗಾರಿಕಾ ಸಚಿವಕೃಷ್ಣಪಾಲೆಮಾರ್ ದಕ್ಕೆಗೆ (ಬಂದರಿಗೆ) ಬಂದರೆ ಘೇರಾವ್ ಹಾಕುತ್ತೇವೆ. ಸಚಿವರಾದ ಮೇಲೆ ಒಮ್ಮೆಯೂ ಅವರು ಮೀನುಗಾರರ ಸಮಸ್ಯೆ ಕೇಳಲು ಬಂದರಿಗೆ ಬಂದೇ ಇಲ್ಲ' ಎಂದು ಇಲ್ಲಿಯ ಮೀನುಗಾರರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಮೀನುಗಾರರ ಅಂಗಳದಲ್ಲಿ ಅರಮನೆಯನ್ನೇ ಕಟ್ಟುತ್ತೇವೆ ಎಂದು ಮತ ಕೇಳಿದ ಬಿಜೆಪಿ, ಸಂಘಪರಿವಾರದ ಮಂದಿ ಇದೀಗ ಮೀನುಗಾರರ ಮುಖಂಡರು ಕಂಡರೆ ತಲೆತಪ್ಪಿಸಿಕೊಂಡು ಓಡಾಡುತ್ತಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೃಷಿ ಬಿಟ್ಟರೆ ಮೀನುಗಾರಿಕೆಯೇ ಎರಡನೇ ಅತಿ ದೊಡ್ಡ ಉದ್ಯಮ. ಬಹು ಹಿಂದಿನಿಂದಲೂ ಕಾಂಗ್ರೆಸ್ಸನ್ನು ಬೆಂಬಲಿಸಿಕೊಂಡು ಬಂದಿದ್ದ ಈ ಸಮುದಾಯವು ಕಳೆದ ಹತ್ತು ವರ್ಷಗಳಲ್ಲಿ ಬಿಜೆಪಿಯ ಕಟ್ಟಾ ಬೆಂಬಲಿಗ ವರ್ಗವಾಗಿ ರೂಪು ಪಡೆದಿತ್ತು. ಕಷ್ಟ ಸಹಿಷ್ಣುತೆಗೆ ಹೆಸರಾದ, ತಮ್ಮ ಜೀವಿತದ ಬಹುತೇಕ ಅವಧಿಯನ್ನು ನೀರಿನಲ್ಲಿ ಕಳೆಯುವ ಈ ಸಮುದಾಯದ ಉನ್ನತ ಶಿಕ್ಷಣದಿಂದ ವಂಚಿತ. ದಕ್ಷಿಣ ಕನ್ನಡ ಜಿಲ್ಲೆ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಮುಂದಿದ್ದರೂ ಈ ಸಮುದಾಯದ ಯುವಕರು ಮಾತ್ರ ಮೂಲಕಸುಬಿಗೆ ಅಂಟಿಕೊಂಡಿದ್ದಾರೆ. ಮೀನುಗಾರಿಕೆ ಕಷ್ಟದ ಕೆಲಸ ಮಾತ್ರವಲ್ಲ ಬದುಕು ಅತಂತ್ರ ಕೂಡ. ಅಲೆಗಳ ಮೇಲೆ ತೇಲುವ ದೋಣಿಯಂತೆ ಅನಿಶ್ಚತೆ ಎದುರಿಸುತ್ತಿರುವ ಈ ಮೀನುಗಾರರಿಗೂ ಸುಳ್ಳಿನ ಭರವಸೆಗಳ ಮೂಲಕ ಬಿಜೆಪಿ ಸರ್ಕಾರ ವಂಚಿಸಿದೆ.

ಹೂಳೆತ್ತಲ್ಲ

ಮೊನ್ನೆಮೊನ್ನೆಯಷ್ಟೆ ಪತ್ರಿಕಾಗೋಷ್ಠಿ ಕರೆದಿದ್ದ ಕರಾವಳಿ ಟ್ರಾಲ್ ಬೋಟ್ ಮೀನುಗಾರರ ವೇದಿಕೆ ಮುಖಂಡರು ಬಿಜೆಪಿ ಸರ್ಕಾರವನ್ನು ವಾಚಾಮಗೋಚರ ತರಾಟೆಗೆ ತೆಗೆದುಕೊಂಡಿದ್ದರು. ಅಧಿಕಾರಕ್ಕೆ ಬಂದ ತಿಂಗಳಿಗೆ ಅಳಿವೆಬಾಗಿಲಿನ ಹೂಳು ಎತ್ತುವುದಾಗಿ ಹೇಳಿದ್ದ ಮಾಜಿ ಮೀನುಗಾರಿಕಾ ಸಚಿವ ಬಿ. ನಾಗರಾಜಶೆಟ್ಟಿ ಸೋತು ಮನೆ ಸೇರಿದ್ದಾರೆ. ಆದರೆ ಅವರದೇ ಪಕ್ಷದ ಸಚಿವ ಕೃಷ್ಣಪಾಲೆಮಾರ್ ಮಾತ್ರ ಪಬ್ ಮೇಲೆ, ಚರ್ಚ್ ಮೇಲೆ, ಹುಡುಗಿಯರ ಮೇಲೆ ದಾಳಿ ನಡೆಸುವ ಶ್ರೀರಾಮಸೇನೆ, ಬಜರಂಗದಳದ ಪುಡಾರಿಗಳನ್ನು ಬೆಂಬಲಿಸುತ್ತಾ ತನ್ನ ಖಾತೆಯನ್ನೇ ಮರೆತಂತೆ ವರ್ತಿಸುತ್ತಿದ್ದಾರೆ.

ಲಕ್ಷಾಂತರ ಸಂಖ್ಯೆಯಲ್ಲಿರುವ ಮೀನುಗಾರರು ಮತಗಳನ್ನು ಸುತ್ತುತ್ತಾ ಕಾಲ ಕಳೆಯುವ ಯಡಿಯೂರಪ್ಪ ಅವರಿಗೆ ಮೀನುಗಾರರನ್ನು ಭೇಟಿ ಮಾಡಲು ಪುರುಸೊತ್ತು ಸಿಕ್ಕಿಲ್ಲ.

ಅವರದೇ ಪಕ್ಷದ ಸಚಿವ ಕೃಷ್ಣಪಾಲೆಮಾರ್ ಅವರ ಮೂಖಾಂತರ ಹೇಳಿಸಿದ್ದರೂ ಮುಖ್ಯಮಂತ್ರಿ ಭೇಟಿಗೆ ಅವಕಾಶ ಸಿಕ್ಕಿಲ್ಲ, ನಮ್ಮ ಸಮಸ್ಯೆಗಳನ್ನು ಆಲಿಸದ ಕಾರಣ ಈ ಸಲದ ಚುನಾವಣೆ ಬಹಿಷ್ಕಾರ ಹಾಕುವುದಾಗಿ ಮೊನ್ನೆಮೊನ್ನೆಯಷ್ಟೆ ನಡೆದ ಮೀನುಗಾರರ ವೇದಿಕೆಯ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎನ್ನುತ್ತಾರೆ ಮೀನುಗಾರರ ಮುಖಂಡ ವಾಸುದೇವ ಬೋಳಾರರು.

ಊಟ ಕೊಟ್ಟೆವು

ಮಂಗಳೂರಿನ ಧಕ್ಕೆಯಲ್ಲಿ ಮೀನುಗಾರರಿಗೆ ಕನಿಷ್ಟ ಕುಡಿಯುವ ನೀರಿನ ಸೌಲಭ್ಯವಿಲ್ಲದಿರುವುದೇ ತೋರಿಸುತ್ತದೆ ಬಿಜೆಪಿ ಸರ್ಕಾರ ಮೀನುಗಾರರಿಗೆ ಏನು ಮಾಡಿದೆ ಎಂಬುದು.



ಈ ಸಲದ ಚುನಾವಣೆಯಲ್ಲಿ ಬಿಜೆಪಿಗೆ ಪಾಠ ಕಲಿಸುತ್ತಾರೆ ಎಂದು ಅರಿತ ಸಂಸದ ಡಿ.ವಿ. ಸದಾನಂದ ಗೌಡ ಕ್ಷೇತ್ರವನ್ನೇ ಖಾಲಿ ಮಾಡಿಕೊಂಡು ಓಟ ಕಿತ್ತಿದ್ದಾರೆ.

ಭೇಟಿಗೆ ಸಿಗಲಿಲ್ಲ

ಮೀನುಗಾರರಿಗೆ ಆದ್ಯತೆ ನೀಡುವುದಾಗಿ ಹೋದಕಡೆಯಲೆಲ್ಲ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಮೀನುಗಾರರು ಭೇಟಿ ಮಾಡಬೇಕು ಎಂದು ಕೇಳಿಕೊಂಡರೂ ಅವರಿಗೆ ಅವಕಾಶಮಾಡಿಕೊಟ್ಟಿಲ್ಲ. ದೇವಸ್ಥಾನ, ದಿನನಿತ್ಯ ಮೀನುಗಾರರ ನಡುವೆ ಹೊಡೆದಾಟಗಳು ನಡೆಯುತ್ತಿವೆ.

ಕಳೆದ ಸಲದ ಚುನಾವಣೆಯಲ್ಲಿ ಊಟ ಕೊಟ್ಟೆವು. ಅವರ ಕಾರ್ಯಕರ್ತರ ಊಟಕ್ಕೆ ಪುಕ್ಕಟೆ ಮೀನು ಕೂಡ ಕೊಟ್ಟೆವು. ಆದರೂ ಬಿಜೆಪಿ ಉಂಡ ಮನೆಗೆ ದ್ರೋಹ ಬಗೆದಿದೆ ಎನ್ನುತ್ತಾರೆ ಇಲ್ಲಿನ ಮೀನುಗಾರರು.

ಅಳಿವೆ ಬಾಗಿಲ ಹೂಳು ತೆಗೆಯದ ಕಾರಣ ದೋಣಿ ಮುಳುಗಿ ಇಬ್ಬರು-ಮೂವರು ಈ ವರ್ಷ ಸಾವನ್ನಪ್ಪಿದ್ದಾರೆ. ಇಪ್ಪತ್ತಾರು ಸಾವಿರ ಬೋಟುಗಳಿದ್ದರೂ ಧಕ್ಕೆಯಲ್ಲಿ ಎರಡು-ಮೂರು ಸಾವಿರ ಬೋಟುಗಳನ್ನು ಮಾತ್ರ ನಿಲ್ಲಿಸಲು ಜಾಗವಿದೆ. ಬೋಟು ನಿಲ್ಲಿಸಲು ಜಾಗಸಾಲದೆ

ಬಂದರು ಖಾಸಗೀಕರಣ

ಈ ಸಮಸ್ಯೆಗಳನ್ನು ಬಗೆಹರಿಸಲು ಯೋಚಿಸದ ಸರ್ಕಾರ ಬಂದರುಗಳನ್ನೇ ಖಾಸಗೀಕರಣ ಮಾಡಲು ಹೊರಟಿದೆ. ಈಗಾಗಲೇ ಕಾರವಾರ ಬಂದರನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆಗೂ ಸರ್ಕಾರ ಕೈ ಹಾಕಿದ್ದು, ಮೀನುಗಾರರನ್ನು ಕೆರಳಿಸಿದೆ.

ಬಿಜೆಪಿಯಿಂದ ಕಾಂಗ್ರೆಸ್‌ಗೆ ಜಾರಿದ ಮಾಜಿ ಸಂಸದೆ ಮನೋರಮಾ ಮಧ್ವರಾಜ್ ಮಗ ಪ್ರಮೋದ್ ಮಧ್ವರಾಜ್ ಮೊಗವೀರರ ಸಭಾದ ಮುಖಂಡರಾಗಿದ್ದು ಈ ಸಲ ಮೀನುಗಾರರು ಬಿಜೆಪಿಗೆ ವಿರುದ್ಧವಾಗಿ ಮತಹಾಕುವ ಸಾಧ್ಯತೆಗಳೇ ಹೆಚ್ಚಿವೆ.

'ಕೋಡಂಗಿ ನಗುವಿನ' ನಾಯಕನೆಂದೇ ಖ್ಯಾತರಾಗಿರುವ ಬಿಜೆಪಿಯ ರಾಜ್ಯ ಅಧ್ಯಕ್ಷ ಡಿ.ವಿ.ಸದಾನಂದ ಗೌಡ ಎರಡು ಸಲ ಕ್ಷೇತ್ರವನ್ನು ಪ್ರತಿನಿಧಿಸಿದ್ದರೂ ಕೆಲಸ ಮಾತ್ರ ಮಾಡದೇ ಇದೀಗ ಉಡುಪಿ- ಚಿಕ್ಕಮಗಳೂರು ಕ್ಷೇತ್ರಕ್ಕೆ ಓಟ ಕಿತ್ತಿದ್ದಾರೆ. ಮಂಗಳೂರಿನ ಅಭಿವೃದ್ಧಿ ಆಗಿಲ್ಲ ಎಂದು ಖಾಸಗಿಯಾಗಿ ಒಪ್ಪಿಕೊಳ್ಳುವ ಸದಾನಂದ ಗೌಡರು ಕನಿಷ್ಟ ಕೃಷಿಕರ ಪರವಾಗಿಯೂ ಕೆಲಸ ಮಾಡಲಿಲ್ಲ.

ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ, ಗ್ರಾಮೀಣ ಉದ್ಯೋಗ ಖಾತರಿಯಂತಹ ಮಹತ್ವದ ಯೋಜನೆಗಳು ಇಲ್ಲಿ ಗೆದ್ದಲು ಹಿಡಿದು ಕೂತಿವೆ. ಅಡಿಕೆ ರಾಜಕೀಯದಿಂದಲೇ ಈ ಭಾಗದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿಗರು ಇದೀಗ ಅಡಿಕೆ ಕೃಷಿಕರನ್ನೇ ಮರೆತಿದ್ದಾರೆ.

ಕೇವಲ ಒಂದೂವರೆವರ್ಷಗಳ ಅವಧಿಯಲ್ಲಿ ರಬ್ಬರ್ ಬೆಲೆ ಪಾತಾಳಕ್ಕೆ ಇಳಿದರೂ ಅದರ ಬಗ್ಗೆ ಕನಿಷ್ಟ ಮಾತನಾಡುವ ಕಾಳಜಿಯನ್ನು ಸದಾನಂದ ಗೌಡ ತೋರಿಲ್ಲ. ಅಭಿವೃದ್ಧಿ ಮರೆತ ಸದಾನಂದ ಗೌಡ ಕ್ಷೇತ್ರವನ್ನೇ ಖಾಲಿ ಮಾಡಿದರು ಎಂದು ಮತದಾರರು ಆಡಿಕೊಳ್ಳುತ್ತಿದ್ದಾರೆ. ಬಿಜೆಪಿಗೆ ಮತದಾರರ ಶಾಪ ತಟ್ಟದಿದ್ದಲ್ಲ ಎನ್ನುತ್ತಾರೆ ಇಲ್ಲಿಯ ಕೃಷಿಕರು.

○ ವರದಿಗಾರ

...ಕಾಪು ಮಸೀದಿ ಮೇಲೆ ದಾಳಿ

ಪುಟ 6 ರಿಂದ

ಪೋಲೀಸರೇ ಗದ್ದಲ ಕಮ್ಮಿಯಾಗುತ್ತಿದ್ದಂತೆ ಬೂಟುಗಾಲಿನಲ್ಲಿ ಮಸೀದಿಯೊಳಗೆ ನುಗ್ಗಿ ಕಿಟಕಿ ಗಾಜು ಒಡೆದು, ಶಟರ್‌ನ್ನು ಘಾಸಿಗೊಳಿಸಿ ಒಳಗಡೆ ಇದ್ದ ಇಪ್ಪತ್ತೇಳು ಮಂದಿಗೂ ಥಳಿಸಿದ್ದಾರೆ. ಇದರ ಪರಿಣಾಮವಾಗಿ ಗೋಡೆಯಲ್ಲಿ ರಕ್ತದ ಕಲೆಗಳಾಗಿವೆ. ಬಳಿಕ ಪೋಲೀಸರು ಈ ಅಮಾಯಕರನ್ನೇ ಬಂಧಿಸಿದ್ದಾರೆ.

ಮರುದಿನ ಸಂಘ ಪರಿವಾರದ ಘಟಾನುಘಟಿಗಳು ಸಬ್ ಇನ್ಸ್‌ಪೆಕ್ಟರ್ ಜಾಯ್ ಅಂತೋನಿಯವರ ಮೇಲೆ ಒತ್ತಡ ಹೇರಿ ತಮಗೆ ಬೇಕಾದಂತೆ ಎಫ್.ಐ.ಆರ್. ಬರೆಸಿಕೊಂಡಿದ್ದಾರೆ. ಬಂಧಿತರಾದ 27 ಮಂದಿಯ ಮೇಲೂ ಐ.ಪಿ.ಸಿ.307ರ ಸೆಕ್ಷನ್ ಅನ್ವಯ 'ಕೊಲೆಯತ್ನ'ದ ಆರೋಪ ಹೊರಿಸಿ ಜಾಮೀನು ನಿರಾಕರಿಸಲಾಗಿದೆ. ನಿರೀಕ್ಷಿಸಿದಂತೆ ಮಸೀದಿಯ ಮೇಲೆ ಕಲ್ಲೆಸೆದ ಯಾರನ್ನೂ ಈವರೆಗೆ ಬಂಧಿಸಲಾಗಿಲ್ಲ. ಘಟನೆ ನಡೆದು ಒಂದು ವಾರ ಕಳೆದ ಬಳಿಕ ಉಡುಪಿ ಶಾಸಕ ರಘುಪತಿ ಭಟ್ಟರು ಕಲ್ಲೆಸೆತದಿಂದಾಗಿ ಅಂಬಲಪಾಡಿಯ ಒಬ್ಬರು, ಪೇತ್ರಿಯ ಒಬ್ಬರು ಮತ್ತು ಕುಂದಾಪುರದ ನಾಲ್ವರು ಹಿಂದುತ್ವವಾದಿ ಕಾರ್ಯಕರ್ತರಿಗೆ ಗಾಯವುಂಟಾಗಿದೆ ಎಂದು ಕಂತೆ ಬಿಟ್ಟಿದ್ದಾರೆ. ಹೀಗೆ ಗಾಯಗೊಂಡವ ರೆನ್ನಲಾದವರಲ್ಲಿ ಯಾರೂ ಆಸ್ಪತ್ರೆಗೆ ದಾಖಲಾಗಿಲ್ಲ. ಪೋಲಿಸರಿಗೆ ದೂರನ್ನೂ ನೀಡಿಲ್ಲ. ಕಲ್ಲೇಟು ಬಿದ್ದಿದೆಯೆನ್ನಲಾದ ಬಸ್ಸಿನವರೂ ದೂರು ದಾಖಲಿಸಿಲ್ಲ. 'ಕಾಪು ಘಟನೆಗಳಿಗೆ ಯಾರು ಕಾರಣವೆಂದು ಎಲ್ಲರಿಗೂ ತಿಳಿದಿದೆ. ಮೊದಲ ಕಲ್ಲು ಬಿದ್ದದ್ದು ಮಸೀದಿಯೊಳಗಿನಿಂದಲೇ' ಎಂದು ಗೃಹ ಸಚಿವ ವಿ.ಎಸ್.ಆಚಾರ್ಯ ಹೇಳಿದ್ದಾರೆ. ಆದರೆ ಕಟ್ಟಾ ಸಂಘ ಪರಿವಾರದವರನ್ನು ಹೊರತುಪಡಿಸಿದರೆ ವಿ.ಎಸ್.ಆಚಾರ್ಯರನ್ನಾಗಲೀ, ರಘುಪತಿ ಭಟ್‌ರನ್ನಾಗಲೀ ನಂಬುವವರು ಈ ಜಿಲ್ಲೆಯಲ್ಲಿ ಇನ್ನೂ ಇದ್ದಾರೆಯೇ ಎನ್ನುವುದು ಸಂಶಯಾಸ್ಪದ! ಹಿಂದೂ ಸಮಾಜೋತ್ಸವದ ಸಂಘಟಕರು ಈ ಮೊದಲೇ ಹೇಳಿರುವಂತೆ 'ಹಿಂದೂ ಓಟ್ ಬ್ಯಾಂಕ್' ರಚಿಸುವುದೇ ಈ ಸಮಾಜೋತ್ಸವದ ಉದ್ದೇಶವಾಗಿದ್ದು, ಇದೇ ಉದ್ದೇಶದ ಸಾಧನೆಗಾಗಿಯೇ ಪೂರ್ವನಿಯೋಜಿತವಾಗಿ ಕಾಪುವಿನಲ್ಲಿ ಗಲಭೆ ಎಬ್ಬಿಸಲಾಗಿದೆ ಎನ್ನುವುದು ಸ್ಪಷ್ಟ. ಈ ಇಡೀ ಘಟನೆಯ ಕುರಿತು ಸಿಬಿಐ ತನಿಖೆ ಏರ್ಪಾಡಾದರೆ ಮಾತ್ರ ಸತ್ಯ ಹೊರ ಬಂದೀತು.

ವರದಿ: ಸಮದರ್ಶಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH